REGISTERED NO. M. 1393.

ಕಂಠೀರವ

ಅರ್ಧಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ | ಮಂಗಳೂರು, ೧೯೩೬ನೇ ಇಸವಿ ಜೂನ್ ತಾರೀಕು ೨೬ನೇ ಶುಕ್ರವಾರ | ಸಂಚಿಕೆ ೨೬.

VOL. XVIII | MANGALORE, FRIDAY, JUNE 26, 1936 | NO. 26.

BANK with the

UDIPI BANK Ltd.

(KALSANK, UDIPI S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

ESTD:—1906.

THE

Canara Banking Corporation, Udipi, Ltd.

ANNOUNCEMENT.

A Branch of the Corporation will be opened at SAKLASPUR (Hassan Dist.) and the public are cordially invited to transact their business at the said office.

M. SHRINIVAS PRABHU,
MANAGER.

THE DECCAN CO.,

Cantonment, :: MANGALORE,

Agents for

"Mohini Coffee Powder"

and

"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

— ಸಣ್ಣಪರ —

ಸುಬೋಧಶತಕ

ಟೆಕ್ಸ್‌ಟ ಬುಕ್ ಕಮಿಟಿಯಲ್ಲಿ ಮಂಜೂರಾದ

ಪಾಠಶಾಲಾ—ಪಠ್ಯಪುಸ್ತಕ.

ತಿದ್ದಿ ಬೆಳಿಸಿದ 2ನೇ ಆವೃತ್ತಿ-ಬೆಲೆ: 0-2-6.

ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು. ಒಂದಾಣೆಯ ಅಂಚೆಚೀಟನ್ನು ನಮಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—

ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕನ್ನಡ.

12, 8-5.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V. RANGASWAMI, B. A., B. L.,
General Manager.

QUALITY IS THE BEST SELLING STORY!

THAT IS WHY

"RAJA CYCLE"

IS THE BEST SELLING BICYCLE.



The Specification includes the best of everything in materials, construction and finish.

STOCKISTS:-

MESSRS.

The City Cycle Co., Mangalore.

WANTED

WANTED candidates for Telegraph and Station Master Class. Allowance Rs. 28. Uniform, passage and quarter free. Service essential. Rules and entrance form on annas eight. Director, Royal Telegraph and Rly. Duties College.

6, 29-5. Bombay No. 14.

Jubilee Stamps.

5 different from 5 different colonies for 5 as., 25 different from at least 10 different colonies Rs. 2—8—0. Grand collection of 100 different, used and unused, including many scarce stamps and high values, Rs. 25—

Special Offer:— Commemorative packet of 30 different large pictorial stamps of Centenary, Quiniversary, Jubilee and Charity issues,—a packet full of historic and artistic interest. Included in this packet are 4 unused Russia Romanoff 1913 issue (Nicholas II and Katherine II) and Belgium, Queen Astrid mourning stamp. **Price Re. 1 only.**

Remit by M. O. Write your order on coupon giving name and address clearly. This is the safest and economical method of ordering.

Abyssinia and Jubilee lists free to all applicants.

IMPERIAL STAMP Co., Ltd.,
ALLAHABAD.

4, 5-6.

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣದಾಸೆಯುಳ್ಳವರಾಗಿ ಕರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ದುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬೆಳರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂದಿಸುವದು. ಆದುದರಿಂದ, ಆಪ್ತರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರ್‌ಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

FREE,—ಮುಫತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ **ಕಥೆ ಪುಸ್ತಕ, ನಾಟಕ, ಕೀರ್ತನೆ** ಲಾ ಪುಸ್ತಕಗಳು ಮತ್ತು **ರಾಮಾಯಣ, ಭಾಗವತ, ಭಾರತ,** ವಗೈರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ **ಕ್ಯಾಟಲಾಗಿಗೆ** ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಅವಿನ್ಯೂ ರೋಡ್, ಬೆಂಗಳೂರು, ಸಿಟಿ.

ದಾಸಯ್ಯನ ಜೋಳಿಗೆ.

ಮೈಸೂರನ್ನು ಕಂಡು, ಮೈಸೂರಿನ ದೊರೆಗಳ ವೈಭವವನ್ನು ಕಂಡು, ಜೆನರ ರಾಜಭಕ್ತಿ-ಉತ್ಸಾಹಗಳನ್ನು ಕಂಡು ಬೆರಗಾಗಿ ಮದ್ರಾಸ್ ಗೌರ್ನರಾದ ಲಾರ್ಡ್ ಎರಸ್ಕಿನ್‌ರವರು ತಲೆದೂಗಿಬಿಟ್ಟರು. ಅವರಿಗಾಗಿ ಕೊಟ್ಟ ರಾಜಾತಿಥ್ಯ ಸಂದರ್ಭದಲ್ಲಿ ಮೈಸೂರನ್ನು ಹೊಗಳಿ ಹೊಗಳಿ ಸಂತುಷ್ಟರಾದರು. ಹೈದರಾಬಾದಿನ. ರಾಜಕುಮಾರದಂಪತಿಗಳೂ, ಹೊಸ-ಹಳೆಯ ರೆಸಿಡೆಂಟರುಗಳೂ, ಮದ್ರಾಸಿನ ಕನ್ನಿಂಗ್‌ಹ್ಯಾಂ ದೊರೆಗಳೂ ಮಾ॥ ನಾರಾಯಣಿಸಾಮ್ಮಿ ಶೆಟ್ಟಿಗಳೂ ಇತ್ಯಾದಿ ಮಾನ್ಯ ಅತಿಥಿಗಳು ಬಂದು ಸಂತೋಷಪಟ್ಟರು.

ದೊರೆಗಳ ವರ್ಧಂತಿ ಎಂದರೆ ಮೈಸೂರಲ್ಲಿ ಅದೊಂದು ದೊಡ್ಡ ಉತ್ಸವ. ರಾಜಭಕ್ತಿ ಪರಾಯಣರಾದ ಮೈಸೂರಿನ ಪ್ರಜೆಗಳಿಗೆ ಅದೊಂದು ಸಂತೋಷೋತ್ಸವ. ತಮ್ಮನ್ನು ಆಳುವ ಮಹನೀಯರನ್ನು ಆ ದಿನ ಕಣ್ಣುತುಂಬಾ ನೋಡಿ, ಅವರ ಕೀರ್ತನೆಗಳನ್ನು ಹಾಡಿ, ಅವರ ರಾಜ್ಯಭಾರದಲ್ಲಿ ತಮಗೆ ಇರುವ ಸುಖಸಂಪತ್ತುಗಳನ್ನು ಕುರಿತು ಸಂತೋಷಪಟ್ಟು ಪರಮಾನ್ನವನ್ನು ಉಂಡು, ವಿನೋದಪಡುವ ಉತ್ಸವ. ಇಂದು ಅಂತಹ ೫೫ ಉತ್ಸವಗಳನ್ನು ನೋಡಿರುವ ಪುಣ್ಯಾತ್ಮರಾದ ಮೈಸೂರವರ ಭಾಗ್ಯಕ್ಕೆ ಎಣೆಯುಂಟೆ?

ಖಾವಂದರವರು ಪಶ್ಚಿಮಖಂಡಪ್ರಯಾಣ ಮಾಡಿದರೆಂಬ ವಿಶೇಷ ಸುದ್ದಿ. ಅವರ ಆರೋಗ್ಯಭಾಗ್ಯಕ್ಕೆ ಮಾತ್ರವೇ ಅಲ್ಲದೆ ರಾಜಕೀಯಗಳ ಸಂಬಂಧವೂ ಉಂಟೆಂದು ತಿಳಿಯಬರುತ್ತದೆ. ಮೈಸೂರು ಪೊಗದಿಯನ್ನು ತೆತ್ತು ತೆತ್ತು ಬಡವಾಗಿಹೋಗಿದೆ. ಆ ಭಾರವು ಹೋದರೆ ಈಗ ನಮ್ಮ ದಿವಾನರ ಕಾಲದಲ್ಲಿಯೂ ಖಾವಂದರ ಕಾಲದಲ್ಲಿಯೂ ಹೋಗಲೇ ಬೇಕು. ತಪ್ಪಿದರೆ ಹೊರೆಯನ್ನು ಎಂದೆಂದಿಗೂ ಮೈಸೂರು ಹೊರಲೇ ಬೇಕು. ಹೀಗಿರುವಾಗ ಈ ಸುಸಂದರ್ಭದಲ್ಲಿ ಹಿಂದಿನ ವೈದೀಕ ಧರ್ಮವನ್ನು ಸುಲಭ ಮಾಡಿಕೊಂಡು ಹೊರಟದ್ದು ಮೈಸೂರಿನ ಭಾಗ್ಯ. ದೇವರು ಸುಖಯಾನವನ್ನುಂಟು ಮಾಡಲೆಂಬುದೇ ದಾಸಯ್ಯನ ಹಾರೈಕೆ.

× × × × ×

ನಮ್ಮಲ್ಲಿ ಪ್ರಜಾಪ್ರತಿನಿಧಿಸಭೆ ಕೂಡಿದ್ದೂ-ಮುಗಿದದ್ದೂ ಆಯಿತು. ಆದರೇನು? ಆ ಸಭೆಯ ಔನ್ನತ್ಯವು ಮಾತ್ರ ಗೌರವಿಸಲ್ಪಡುತ್ತಿಲ್ಲ. ಮೆಂಬರುಗಳ ಮಾತು ಖರ್ಚಾಗುವುದೇ ವಿನಃ ಅದರಂತೆ ಅಧಿಕಾರಿಗಳು ನಡೆಯಬೇಕೆಂಬ ವಿಧಾಯಕವೇನೂ ಇಲ್ಲ. ಇದರಿಂದ ಮೆಂಬರುಗಳ ಗಂಟಲೊಣಗಿ ನೀರನ್ನು ಕುಡಿಯುವಂತಾಗುವುದೇ ವಿನಃ ಅಧಿಕಾರಿಗಳ ಬಾಯಾರುವುದಿಲ್ಲ. ಪ್ರಜಾಪ್ರತಿನಿಧಿಗಳ ಕೂಟವು ಬರೀ ಮಾತಿನ ಕೂಟವೆಂದು ಮಾತ್ರ ಹೇಳುವಂತಾಗಿದೆ.

ನಮ್ಮ ದಿವಾನರ ಕುರಿತು ಮಾತು ಒಂದಿದೆ. ಇವರು ದಿವಾನ್‌ಗಿರಿಗೆ ಬಂದ ಮೇಲೆ ಸ್ವಾತಂತ್ರ್ಯಕ್ಕೆ ಲೋಪವುಂಟಾಗಿದೆಯೆಂದೂ, ಇವರು ಪ್ರಜೆಗಳ ಮಾತಿಗೆ ಗೌರವ ಕೊಡುತ್ತಿಲ್ಲವೆಂದೂ, ಪ್ರಜಾಪ್ರತಿನಿಧಿಯಂತಹ ಸಂಸ್ಥೆಯ ಸ್ವಾತಂತ್ರ್ಯವನ್ನು ಹೆಚ್ಚಿಸಿಲ್ಲವೆಂದೂ ಪ್ರತಿನಿಧಿಗಳು ವಾದಿಸುತ್ತಾರೆ. ಆದರೆ ಇದರಲ್ಲಿ ಪ್ರತಿನಿಧಿಗಳು ಕೋರುವ ಸ್ವಾತಂತ್ರ್ಯವನ್ನು ಕೊಡಲು ಇದು ಸಮಯವೇ ಎಂಬುದು ಚರ್ಚಾಸ್ಪದವಾದ ವಿಷಯ. ಹೇಗೇ ಇದ್ದರೂ, ಸ್ವಾತಂತ್ರ್ಯ ಪ್ರೇಮಿಗಳು ಈಗ ಹೆಚ್ಚಿರುವುದರಿಂದ ಪ್ರತಿನಿಧಿಸಭೆಗೆ ಸಾಧ್ಯವಿರುವಷ್ಟು ಹೆಚ್ಚು ಸ್ವಾತಂತ್ರ್ಯ ಕೊಡುವುದು ಆವಶ್ಯಕ.

ಈ ಪ್ರತಿನಿಧಿಸಭೆಯ ಮಾರ್ಪಾಡುಗಳ ಸಂಬಂಧವಾಗಿ ಕಮಿಟಿಯವರು ಕೆಲವು ಶಿಫಾರಸುಗಳನ್ನು ಮಾಡಿದ್ದಾರೆ. ಇದರಿಂದ ಅಸೆಂಬ್ಲಿಯ ಶಕ್ತಿಯನ್ನು ಕಡಿಮೆಮಾಡಿದ್ದಾರೆಂದು ಅನೇಕರ ಮಾತಾಗಿದೆ. ಈಗಲೇ ಅಸೆಂಬ್ಲಿಯ ವಿಚಾರವಾಗಿ 'ಮಾತಿನ ಕೂಟ'ವೆಂದು ಅಪವಾದವಿದೆ. ಇದಕ್ಕಿಂತಲೂ ಹೆಚ್ಚು ಬಲಹೀನ ಮಾಡುವ ಪದ್ಧತಿಯನ್ನು ಜಾರಿಗೆ ತಂದಲ್ಲಿ ಅಸೆಂಬ್ಲಿಯೂ ಒಂದು ಅರ್ಜಿದಾರರ ಸಂಘವೆಂದೇ ವಾಡಿಕೆಯಾಗಬಹುದು. ಅಥವಾ ಸರಕಾರದವರ ಸಹಾಯಕಸಂಘವೆಂದಾದರೂ ಮಾರ್ಪಡಬಹುದು. ಹಾಗೆ ಮಾಡುವುದರಿಂದ ರಾಜ್ಯದಲ್ಲಿ ಸ್ವಾತಂತ್ರ್ಯೇಚ್ಛೆಯನ್ನು ತುಳಿದಂತೆಯಾಗುವುದು. ಅಧಿಕಾರಿಗಳ ಪ್ರವರ್ತನೆಗೆ ಅಡ್ಡಿಯೇ ಇಲ್ಲದಂತೆಯಾಗುವುದು.

× × × × ×

ನಮ್ಮ ಕೌನ್ಸಿಲ್ ಮೆಂಬರರಾದ ಮಾ॥ ರಾಜಗೋಪಾಲಾಚಾರಿಯವರು ಮೈಸೂರು ಸಿವಿಲ್ ಸರ್ವಿಸ್ ನೌಕರರ ವಿಚಾರದಲ್ಲಿ ಅನೇಕ ಹಿತವಾಕ್ಯಗಳನ್ನು ಹೇಳಿದ್ದಾರೆ. ಆಡಳಿತದಲ್ಲಿ ಈಗ ಮಾರ್ಪಾಡಾಗುತ್ತಿರುವ ಸಂದರ್ಭಗಳಿಗನುಸಾರವಾಗಿ ಇವರೂ ತಮ್ಮ ಕರ್ತವ್ಯಗಳನ್ನು ಹೊಂದಿಸಬೇಕೆಂದೂ, ಸಿವಿಲ್ ಸರ್ವಿಸಿನ ಅಧಿಕಾರವು ಮಾಯವಾಗಿ, ಅವರ ಕಾರ್ಯಗಳು ಕೇವಲ ಸಲಹಾರೂಪವಾಗುವುದೆಂದೂ, ಇವರು ಸದಾ ಜನಗಳ ಸಂತೋಷದ ಏಳಿಗೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದೂ ಅಪ್ಪಣೆ ಕೊಡಿಸಿದ್ದಾರೆ.

ಈಗಿನ ಅಧಿಕಾರಿಗಳಲ್ಲಿ ಅನೇಕರು ಇತರ ಥಳುಕುಬೆಳಕುಗಳ ಕೆಲಸವನ್ನು ಮಾಡುವದರಲ್ಲಿ ಅವರು ಮಾಡಬೇಕಾದ ಕರ್ತವ್ಯಗಳಲ್ಲಿ ಲೋಪಮಾಡುತ್ತಾರೆಂದು ಅವರ ಮಾತು. ಅದು ನಿಜ. ಸಿವಿಲ್ ಸರ್ವೆಂಟುಗಳು ಈಗಲೂ ಒಬೀರಾಯನ ಕಾಲದ ಅಧಿಕಾರಗಳನ್ನು ಚಲಾಯಿಸಿ, ರೈತರನ್ನು ಬೆದರಿಸಿಡುವುದರಲ್ಲಿ ಆಸಕ್ತರಾಗಿರುತ್ತಾರೆಯೇ ವಿನಃ ರೈತನ ಅಭಿವೃದ್ಧಿಗೆ ಸಾಧಕವಾದ, ಅವನ ಸುಖಸಂತೋಷಗಳಿಗೆ ಮಾರ್ಗವಾದ ದಾರಿಗಳನ್ನು ಹುಡುಕುವುದು ಕಡಿಮೆ. ಅನೇಕರು ರೈತನಿಗೆ ಹೊರೆಯಾಗಿರುವಂತೆ ಇರುವರು. ಅಂತಹವರನ್ನು ಸರ್ಕಾರದವರು ಕಂಡುಹಿಡಿಯುವುದು ಅಸಾಧ್ಯವೇನೂ ಅಲ್ಲ.

ಸಿವಿಲ್ ಸರ್ವೆಂಟುಗಳಲ್ಲಿ ಕೆಲವರು ಅವರಿವರ ಉಪಟಳಕ್ಕೆ ಸಿಕ್ಕಿರುವ ಕೊರತೆ, ಕೆಲವರು ಪಾನ ಮೊದಲಾದ ದುರ್ಭ್ಯಾಸಗಳಿಗೆ ಸಿಕ್ಕಿರುವ ಕೊರತೆ, ಇನ್ನೂ ಕೆಲವರು ಆದಾಯಕ್ಕಿಂತ ಹೇರಳವಾಗಿ ಸಾಲಗಾರರಾಗಿರುವ ಕೊರತೆಗಳಿಂದ ನರಳುತ್ತಿದ್ದಾರೆಯೇ? ಹಾಗಿದ್ದರೆ ಇವುಗಳಿಂದ ಅವರನ್ನುಳಿಸಲು ಸರ್ಕಾರದವರು ಸಹಾಯ ಮಾಡಬೇಕು. ಈ ಕಷ್ಟಗಳಿಂದ ಅವರು ರೈತರ ಕಷ್ಟಗಳನ್ನು ನೋಡಲಿಕ್ಕೆ ಸಾಧ್ಯವಿಲ್ಲದೇ ಬರಬಹುದು. ಪಾಪ! ಅವರ ದೇಹಸೌಖ್ಯ-ಮಾನಸಿಕ ಶಕ್ತಿಗಳೇ ಕುಂದುತ್ತ ಬರುತ್ತಿರಬಹುದು. ಇದಕ್ಕೆ ಮದ್ದೇನಾದರೂ ಉಂಟೇ? ಸ್ವಾವಿಮಾ!

ವಿ॥ ದಾಸಯ್ಯ.

ದಿಲ್‌ಕುಷ್ ಲೇಹಂ.

ಒಂದೇ-ಸಾರಿಯ ಸೇವನೆಯಿಂದ ಗುಣ. ಇಲ್ಲವಾದರೆ ಹಣ ಪರತ.

ಈ ಔಷಧರಾಜ, ಚುನಾಯಿತ ಔಷಧ, ಮೂಲಿಕೆ, ಲೋಹ ಮತ್ತಿತರ ನವಚೈತನ್ಯದಾಯಕ ಪದಾರ್ಥಗಳ ಶಾಸ್ತ್ರೀಯ ಸಮ್ಮಿಳನವಾಗಿದ್ದು, ನಮ್ಮ ಪೂರ್ವಿಕರು ಬಹಳ ಖರ್ಚಿನಿಂದ ಮಹಾರಾಜರು ಮತ್ತು ನವಾಬರುಗಳಿಗಾಗಿ ಪೂರ್ವದಲ್ಲಿ ತಯಾರಿಸುತ್ತಿದ್ದರು. ಈಗ ನಾವು ಈ ಲೇಹವನ್ನು ಗಂಡಸರ ಮತ್ತು ಹೆಂಗಸರ ಸಾರ್ವಜನಿಕ ಉಪಯೋಗಕ್ಕಾಗಿ ತಯಾರಿಸುತ್ತಿದ್ದೇವೆ. ಅದು ಅವರನ್ನು ಯಾವಾಗಲೂ ಯೌವನರಾಗಿರಿಸುತ್ತದೆ. ಅವರ ಪ್ರಕೃತಿಯನ್ನು ಅದು ನವಚೈತನ್ಯಗೊಳಿಸುತ್ತದೆ ಮತ್ತು ಗುಣವನ್ನು ಆರಂಭದಿಂದಲೇ ಕಾಣಬಹುದು. ದಿನೇ ದಿನೇ ಅವರ ಸಾಮರ್ಥ್ಯವೂ ವೀರ್ಯವೂ ವರ್ಧಿಸುವುದು. ಸಂಕ್ಷೇಪತಃ **ದಿಲ್‌ಕುಷ್** ಲೇಹದ ಸ್ವಲ್ಪ ಸೇವನೆಯು ಶರೀರಬಲವನ್ನೂ, ಆರೋಗ್ಯವನ್ನೂ ಮತ್ತು ನವಚೈತನ್ಯವನ್ನೂ ಕೊಡುವುದು.

ಒಮ್ಮೆ ಪರೀಕ್ಷಿಸಿರಿ ಮತ್ತದರ ವರಪ್ರದಾನವನ್ನು ಪಡೆಯಿರಿ.

ಕೃಯ: ಹದಿನೈದು ದಿನಗಳ ಸೇವನೆಯ ಡಬ್ಬಿ ಯೊಂದರ ರೂ. 1—12—0. ಒಂಡು ತಿಂಗಳ ಸೇವನೆಯ ಡಬ್ಬಿಯೊಂದರ ರೂ. 3—0—0.

ಬರೆಯುವರೆ ವಿಳಾಸ:-

Dr. K. Siva Prasada Rao,
Rajahmundry,
4, 26-6 East Godavary Dt.

The Pioneer General Insurance Agency of West Coast, Mangalore, S. K.

Invites application for the post of a cashier—salary Rs. 20/— per month, annual increment Rs. 5/—, to join service immediately. None but those who can afford to pay cash security of Rs. 500/— need apply.

Knowledge of Typing will be taken as a special qualification.

Application for agencies from ladies and gents on lucrative terms are also invited.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 316/35.

ವಾದಿ—ಬಸ್ರೂರು ವೆಂಕಟ್ರಮಣ ಕಾರಂತ.

ಪ್ರತಿವಾದಿ—ಪ್ಲಾಣಿ ನರಸಿಂಹ ಕಾರಂತ, ತಿಪ್ಪಯ್ಯ ಕಾರಂತರ ಮಗ, ಕುಂದಾಪುರ ತಾಲೂಕು, ನಂಬ್ರ 53ನೆ ವಡೇರಹೋಬಳಿ ಗ್ರಾಮ.

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಬಸ್ರೂರು ವೆಂಕಟ್ರಮಣ ಕಾರಂತರು ವಾದಿಯಾಗಿ ಪ್ರತಿವಾದಿಯ ಮೇಲೆ ಕುಂದಾಪುರ ಡಿ. ಮು. ಕೋರ್ಟಿನಲ್ಲಿ ದಾಖ್ಲು ಮಾಡಿದ O. S. No. 316/35ನೆ ದಾವೆಯು ತಾ. 29—6—1936ಕ್ಕೆ ತನ್ನಿಗೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪಗಳಿದ್ದರೆ ಅದೇ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉವಾಹರಿಸತಕ್ಕದ್ದು, ತಪ್ಪಿದರೆ ಕೋರ್ಟಿನವರು ನಿಮ್ಮನ್ನು ಶಿನ್ಯಾಮಾಡಿ ಏಕಪಕ್ಷವಾಗಿ ತೀರ್ಮಾನ ಮಾಡುವರು ಎಂಬದನ್ನು ಈ ಮೂಲಕ ತಿಳಿಸೋಣಾಗುತ್ತದೆ. ಕೋರ್ಟು ಹುಕುಂ ಪ್ರಕಾರ ನೋಟೀಸು ಕೊಟ್ಟದ್ದಾಗಿರುತ್ತದೆ.

ಕುಂದಾಪುರ, 22—6—'36. } K. S. Shetty, *Advocate for Plaintiff.*

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ ಕೋರ್ಟಿನಲ್ಲಿ
S. C. S. No. 17/36.

ರಾಮಕೃಷ್ಣ ತಂತ್ರಿ—**ವಾದಿ**
ಮತ್ತು
ಸೀತಾರಾಮು ಭಟ್ಟ—**ಪ್ರತಿವಾದಿ**
ಇವರೊಳಗೆ.

ಪ್ರತಿವಾದಿ ಸೀತಾರಾಮು ಭಟ್ಟ, ಅಣ್ಣಿಯಾನೆ ಅಣ್ಣುರಾಯ ಭಟ್ರ ಮಗ, ರೈತ, ಕಾರ್ಕಳ ತಾಲೂಕು, ಕಡಂದಲೆ ಕಸಬಾ ಗ್ರಾಮಸ್ತ—ಹಾಲಿ ಕೊಚ್ಚಿ ಸಂಸ್ಥಾನದ ಯರ್ನಾಕುಳಂ ಜಿಲ್ಲಾ ವಡಕಂಪಟ್ಟಣ ಶಾಂತಿಗಾರನಾಗಿ ಮಂಜಿಮಾ ಪೋಸ್ಟ್ ಎಂಬಲ್ಲಿರುವವರು—ಇವರಿಗೆ.

ನೀವು ಇದೇ ಕಳೆದ ತಾ. 8-4-1933ಲ್ಲು ನಿಮ್ಮ ಕುಟುಂಬದ ಪ್ರಯೋಜನದ ಬಗ್ಗೆ ಹೊಂದಿದ ನ್ಯಾಯವಾದ ಪ್ರತಿಫಲದಗೋಸ್ಕರ ಸೀತಾರಾಮು ಕುಂಞಣ್ಣಾಯ ಎಂಬವರಿಗೆ ಕಾರ್ಕಳ ತಾಲೂಕು ಪ್ರಾಂತ್ಯ ಗ್ರಾಮದಲ್ಲಿ ಬರಸಿಕೊಟ್ಟ ಡಿನಾಂಡು ನೋಟಿನಲ್ಲಿಯ ರೂ. 41—4—0 ಮತ್ತು ಇದರ ಬಾಬ್ತು ಸದರಿ ನೋಟಿನ ಶರ್ತ ಪ್ರಕಾರದ ಸಾಲಿಯಾನ ಸೇಕಡಾ ರೂ. 10ರ ದರದ ಬಡ್ಡಿ ಕೂಡಿಸಿ ನಿಮ್ಮಿಂದ ವಸೂಲು ಮಾಡುವ ಹಕ್ಕನ್ನು ನ್ಯಾಯವಾದ ಪ್ರತಿಫಲಕ್ಕೆ ತಾ. 17—2—'35ರಲ್ಲು ವೇಲೆ ಹೆಸರು ಕಾಣಿಸಿರುವ ವಾದಿಯು ಪರಾಭಾರೆಗೆ ಪಡೆದು ಈ ಪ್ರಕಾರ ನಿಮ್ಮಿಂದ ಸಲತಕ್ಕ ಅಸಲು ಬಡ್ಡಿ ವಗೈರೆ ಬರಮಾಡಿಕೊಳ್ಳುವರೇ ವಾದಿಯು ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಕಲು ಮಾಡಿದ್ದಾನೆ. ಸದರಿ ದಾವೆಯು ಸದರಿ ಕೋರ್ಟಿನಲ್ಲಿ ತಾ. 29—6—'36ಕ್ಕೆ ಆಖೈರ ತನ್ನಿಗೆ ಇಡೋಣಾಗಿಯದೆ. ಆ ದಿವಸ 11 ಗಂಟೆಗೆ ನೀವು ಸ್ವತಹ ಯಾ ವಕೀಲರ ಮುಖಾಂತರ ಈ ಕೋರ್ಟ ಮುಂದೆ ಹಾಜರಾಗದೆ ಇದ್ದಲ್ಲಿ ಸದರಿ ದಾವೆಯು ನಿಮ್ಮ ಗೈರ್‌ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ಎಂಬ ಸಂಗತಿ ನೀವು ತಿಳಿದಿರತಕ್ಕದ್ದು.

(ಕೋರ್ಟಿನವರ ಹುಕುಂ ಪ್ರಕಾರ).

ವಕ್ಕಾಂ: ಕಾರ್ಕಳ, ತಾ. 22—6—'36. } ಇಡ್ಯದ ವಾಸುದೇವಯ್ಯ, ವಾದಿ ಕಡೆ ವಕೀಲ್.

WANTED

Sub-agents under our Special Agency for West Coast to represent our Ashok Insurance Co., Ltd., Bombay. Persons with knowledge of Insurance business preferred. Good remuneration.

Apply:—Messrs. WELDON & CO., Karanje Building, Hampankatta, MANGALORE.

SOLE AGENTS

for Super Re-built Tyres, otomatic punture proof. Taterene that saves Motorists millions, FIT Boot and Shoe Sole and Heel stripes of patent rubber protectors.

FOR SALE

Some bank and other Shares, Pianos, Radio-Set, Remington No. 10 stud visible, Cane chairs, German Walking Sticks, House and Garden and Landed properties for sale and on Mortgage.

For particulars apply sharp to our above address and be satisfied.

DAYTON CYCLES & PARTS.

AN UP-TO-DATE CYCLE THAT SPELLS IT'S UNRIVALLED SUPREMACY.

GUARANTEED 10 YEARS!

THE REGAL CYCLE STORES,

CAR STREET : : : MANGALORE.

ಡಾಕ್ಟರ್ ಸಿ. ಮುತಾಯಸರ ಸಿದ್ಧೌಷಧಗಳು.

ಮಸ್ಕ್ ಪಿಲ್ಸ್—ಈ ಮಾತ್ರೆಗಳು ಮಕ್ಕಳ ಜೇಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1½ ರೂ.

ಇದಲ್ಲದೆ ಟಿಸ್ಯೂ ಮದ್ದುಗಳೂ, ಹೊಮ್ಯೊಪೆತಿಕ್ ಔಷಧಗಳೂ, ಹೊಮೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮುತಾಯಸ್, ಎಂ. ಡಿ. (ಹೊಮ್ಯೋ.) ಎಂ. ಬಿ. (ಆಯುರ್)
ಪೂವರ್ ಸರ್ವಿಸ್ ಲೋಜ್, ಮಂಗಳೂರು.

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕಿತ್ತಾನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.

ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅದ್ಭುತ ಫಲಗಳು.

(೧೧ ವರ್ಷದ ಅನುಭವ)

ಸಕಲ ಬಾಧೆಗಳನ್ನೂ ಪರಿಹರಿಸುವ ತಾಯಿತ ಈ ಕೆಳಗಿನ ಸಂಗತಿಗಳಲ್ಲಿ ಒಳ್ಳೆಯ ಫಲಕೊಡುತ್ತದೆ:—

ನಾವು ಮಕ್ಕಳ ಎಲ್ಲಾ ತರದ ರೋಗಗಳನ್ನೂ ಗುಣಪಡಿಸುವವಲ್ಲದೆ ಅವರನ್ನು ಆರೋಗ್ಯವಂತರನ್ನಾಗಿಯೂ ಸುಖಿಗಳನ್ನಾಗಿಯೂ ಮಾಡುವೆವು. ೨. ಕೈಕೊಂಡ ವ್ಯಾಪಾರದಲ್ಲಿ ಜಯವೊದಗಿಸುವುದು. ೩. ಅಗಲಿದ ಸ್ನೇಹಿತರನ್ನೂ ಬಂಧುಗಳನ್ನೂ ಒಡಗೂಡಿಸುವುದು. ೪. ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸುವುದು. ೫. ಶಕ್ತಿ, ಆನಂದಗಳನ್ನು ಪ್ರಾಪ್ತಮಾಡುವುದು ೬. ದೀರ್ಘ ಆಯುಸ್ಸನ್ನೂ ದೀರ್ಘಕಾಲ ಮಕ್ಕಳಿಲ್ಲದ ಸ್ತ್ರೀಯರಿಗೆ ಪುತ್ರಸಂಪತ್ತಿಯನ್ನೂ ಬರಿಸುವುದು. ಮೇಲೆ ಹೇಳಿದ ಯಾವ ವಿಷಯಕ್ಕಾದರೂ ಯಂತ್ರಗಳಿವೆ. ಬೆಲೆಗೆ ಬರೆದುಕೊಳ್ಳಿ. ಎಷ್ಟು ಹಳೆಯ ರೋಗವ್ಯಾದರೂ ೨೧ ದಿವಸಗಳಲೆ ಗುಣಹೊಂದುವುದು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾತ್ರ.

MYSTIC HOME
12, Vengai Chetty St., P. T.,
MADRAS.

POHOLATUM — **for Rheuma and Headache & Cold**
LUBA — **for weakness of lungs, coughs etc.**
COUGH-CURE — **for Colds, Coughs**
CURATIVE-EARTH — **for Constipation, Typhoid, Dysenterie**
OLYMPIA-TYPEWRITERS — **for better typing**
ASTRIDA-BLADES — **for quicker shaving**
EUCALYPTUS-BONBONS — **for hoarseness**
BOOKS — **for education**
STATIONERIES — **for home and Office-use**
LAMPS — **for better lights**

ALL THIS YOU HAVE TO GET

FROM

Basel Mission Book Depot (Canarag Ltd)

MANGALORE, S. K.

MISSION ROAD HAMPANKATTA

ಶಿವಳ್ಳಿ ಬ್ರಾಹ್ಮಣ ಸಮಾಜವೂ ಮಠಗಳೂ

ಲೇಖಾಂಕ ೩.

ಕಳೆದ ಎರಡು ಲೇಖಾಂಕಗಳಲ್ಲಿ ನಮ್ಮ ಸಮಾಜಮುಖಂಡರ ಪೈಕಿ ಕೆಲವರ ಅಭಿಪ್ರಾಯವನ್ನು ತಿಳಿಸಿದೆನು. ಈಗ ಹಿಂದಿನ ಲೇಖನದಲ್ಲಿ ಹೇಳಿದಂತೆ ಶ್ರೀ ಪೇಜಾವರ ಸ್ವಾಮಿಗಳು ಪರ್ಯಾಯ ಆರಂಭಿಸಿದಂದಿನಿಂದ ಮಾಡಿರುವ ಸುಧಾರಣೆಗಳ ಪೈಕಿ ಕೆಲವನ್ನು ವಿವರಿಸುವೆನು.

ಮಠದ ಭೋಜನವ್ಯವಸ್ಥೆಯಲ್ಲಿ ಸರಿಯಾದ ನಡವಳಿಕೆ ಇಲ್ಲವೆಂಬ ಅನೇಕ ವರ್ಷದ ಸಮಾಜಮುಖಂಡರ ದೂರುಗಳನ್ನು ನಿವೃತ್ತಿ ಪಡಿಸುವುದಕ್ಕೆ ಮೊತ್ತಮೊದಲು ಸ್ವಾಮಿಗಳು ಕೈ ಹಾಕಿದರು. ಏಕೆಂದರೆ ಸಕಲ ಜಾತಿಯವರೂ, ಸಕಲ ಮತದವರೂ, ನಮ್ಮ ಸಮಾಜದವರೇ ಆದ ಅನೇಕ ಮಹನೀಯರುಗಳೂ ಮಠದ ಧರ್ಮಾನ್ನವನ್ನು ಹೀಯಾಳಿಸುವುದಲ್ಲದೆ, ಧರ್ಮಾನ್ನವನ್ನು ಕೊಡುವವರನ್ನೂ ಧರ್ಮಾನ್ನ ಊಟಮಾಡುವವರನ್ನೂ ಒಂದೇ ಸವನೆ ಮನ ಬಂದಂತೆ ಟೀಕಿಸುತ್ತಾರೆ. ಅದರಲ್ಲಿರುವ ನಿಜಾಂಶವನ್ನು ಕಂಡು ಶ್ರೀ ಸ್ವಾಮಿಗಳು ಮೊತ್ತಮೊದಲು ಭೋಜನಸುಧಾರಣೆಗೇನೇ ಕೈಯಿಡಬೇಕಾಯಿತು.

೧. ಛಾಕಿಯಲ್ಲಿ (ಸ್ವಾಮಿಗಳ ಪಂಕ್ತಿ ಭೋಜನದಲ್ಲಿ) ಸ್ವಾಮಿಗಳಿಗೂ ಸ್ವಾಮಿಗಳ ಹತ್ತಿರ ಕೂತುಕೊಂಡಿರುವ ಕೆಲವು ವ್ಯಕ್ತಿಗಳಿಗೂ ತಿಂದು ತೇಗುವಷ್ಟು ಊಟ, ಅವರ ಸಮೀಪದಲ್ಲಿರುವ ಮತ್ತೆ ಕೆಲವರಿಗೆ ಸಾಧಾರಣವಾದ ಊಟ, ಬಾಕಿ ಇದ್ದವರಿಗೆ ಅರೆಹೊಟ್ಟೆಯೂಟ. ಇದರಿಂದ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುವವರಲ್ಲಿ ಅನೇಕ ಭೇದವಿದ್ದಂತಾಗುತ್ತದೆ. ಈ ಪದ್ಧತಿಯು ಅನೇಕ ವರ್ಷಗಳಿಂದ ಮಠದಲ್ಲಿ ನಡೆದುಬಂದದ್ದಾದರೂ ಈ ಪದ್ಧತಿಯನ್ನು ಕಂಡು ಅನೇಕರು ಟೀಕಿಸಿದ್ದರೂ ಅದರ ವ್ಯವಸ್ಥೆಗೆ ಯಾರೂ ಕೈಹಾಕಲಿಲ್ಲ. ಶ್ರೀ ಸ್ವಾಮಿಗಳು ಪರ್ಯಾಯವಾರಂಭವಾದ ಕೂಡಲೇ ಈ ತರದ ಭೇದವನ್ನು ಕಿತ್ತುಹಾಕಿ ಛಾಕಿಯ ಪಂಕ್ತಿಗಳಲ್ಲಿ ಕುಳಿತು ಊಟಮಾಡುವವರೆಲ್ಲರಿಗೂ ಒಂದೇ ವಿಧವಾದ ಭೋಜನವ್ಯವಸ್ಥೆಯನ್ನು ಮಾಡಿಸಿದರು. ಸ್ವಾಮಿಗಳಿಗೂ ಅದೇ ತರದ ಭೋಜನವ್ಯವಸ್ಥೆಯನ್ನು ಮಾಡಿಸಬೇಕೆಂದು ಅಭಿಪ್ರಾಯವಿಟ್ಟರೂ ಕೆಲವು ಸ್ವಾಮಿಗಳು ಈ ತರದ ಭೋಜನವ್ಯವಸ್ಥೆಗೆ ಸೈಗುಟ್ಟಲಿಕ್ಕಿಲ್ಲವೆಂದು ತಿಳಿದು ಬಾಕಿ ಸ್ವಾಮಿಗಳ ಮಟ್ಟಿಗೆ ಮಾತ್ರ ಪ್ರತ್ಯೇಕ ವ್ಯವಸ್ಥೆ ಮಾಡಿ ತಾನು ಸರ್ವ ಸಾಧಾರಣವಾದ ಭೋಜನವನ್ನೇ ಸ್ವೀಕರಿಸುವರು.

೨. ಸಂಸ್ಕೃತ ಮಹಾಪಾಠಶಾಲೆಯ ವಿದ್ಯಾರ್ಥಿಗಳೆಲ್ಲರಿಗೂ ಪ್ರತ್ಯೇಕವಾದ ಭೋಜನ ವ್ಯವಸ್ಥೆಯನ್ನು ಮಾಡಿಸಿದರು. ಮೊದಲು ಕಾಲೇಜಿನ ವಿದ್ಯಾರ್ಥಿಗಳಿಗೆ ಮಾತ್ರ ಈ ತೆರನಾದ ಪ್ರತ್ಯೇಕ ವ್ಯವಸ್ಥೆ ಇತ್ತು. ಹೈಸ್ಕೂಲಿನ ವಿದ್ಯಾರ್ಥಿಗಳು ಭೋಜನಶಾಲೆಯಲ್ಲಿಯೇ ಎಲ್ಲರ ಒಟ್ಟಿಗೆ ಸೇರಬೇಕಿತ್ತು. ಆದರೆ ವಿದ್ಯಾರ್ಥಿಗಳೆಲ್ಲರಿಗೂ ಸಕಾಲದಲ್ಲಿ ಭೋಜನವ್ಯವಸ್ಥೆಯನ್ನು ಯಾವ ಪಂಕ್ತಿಭೇದವೂ ಇಲ್ಲದೆ ಒಂದೇ ಕಡೆಯಲ್ಲಿ ಏರ್ಪಡಿಸಿದರು. ಇದರ ಪರಿಣಾಮವಾಗಿ ಈ ವರ್ಷದಲ್ಲಿ ಪ್ರತಿವರ್ಷಕ್ಕಿಂತಲೂ ಹೆಚ್ಚಾಗಿ ದೂರ ದೇಶದ ವಿದ್ಯಾರ್ಥಿಗಳು ಎಂಭತ್ತಕ್ಕೆ ಮಿಗಿ ಸೇರಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೂ ಪ್ರತ್ಯೇಕವಾದ ಒಂದು ವ್ಯವಸ್ಥೆಯನ್ನು ಸದ್ಯದಲ್ಲಿಯೇ ಮಾಡಲಿಕ್ಕಿರುವರೆಂದು ತಿಳಿದುಬರುತ್ತದೆ.

೩. ಮೃಷ್ಟಾನ್ನವೆಂಬ ಅಲಂಕಾರಪೂಜೆಯ ಪಂಕ್ತಿಯು ಕೇವಲ ಇಷ್ಟೆತ್ತನಾಲ್ಕು ಜನರಿಗೇ ಇರುವುದರಿಂದಲೂ, ಛಾಕಿ ಎಂಬ ಸ್ವಾಮಿಗಳ ಪಂಕ್ತಿಯು ಸ್ವಾಮಿಗಳಿಗೂ, ಪರಸ್ಥಳೀಕರಿಗೂ, ಯಾತ್ರಾರ್ಥಿಗಳಿಗೂ, ಇತರ ಕೆಲವು ಆಹ್ವಾನಿತ ಸದ್ಗೃಹಸ್ಥರಿಗೂ ಇರುವುದರಿಂದಲೂ, ಭೋಜನಶಾಲೆಯೆಂಬ ಪಂಕ್ತಿಯು ಎಲ್ಲರಿಗೂ ಇರುವುದರಿಂದಲೂ ಅಂತಹ ಭೋಜನಶಾಲೆಯ ಪಂಕ್ತಿಯು ಎಲ್ಲ ಪಂಕ್ತಿಗಳಿಗೂ ಮುಂಚಿತವಾಗಿಯೇ ಹಿಂದಿನಂತೆಯೇ ನಡೆದುಕೊಂಡು ಬಂದಲ್ಲಿ ಅನೇಕರಿಗೆ ಅನನುಕೂಲ ಉಂಟಾಗುತ್ತದೆಂಬುದನ್ನು ತಿಳಿದು ಎಲ್ಲ ಪಂಕ್ತಿಗಳಿಗಿಂತಲೂ ಮುಂಚಿತವಾಗಿ ನಡಿಸುವುದನ್ನು ನಿಲ್ಲಿಸಿ ಕಡೆಗೆ ಅಂದರೆ ಮಹಾಪೂಜೆಯಾದ ಮೇಲೆ ಜರಗಿಸುವ ವ್ಯವಸ್ಥೆಯನ್ನು ಮಾಡಿದರು. ಅದರೊಟ್ಟಿಗೆನೇ ಹಗಲಲ್ಲಿ ಎರಡು ಊಟಗಳ ವ್ಯವಸ್ಥೆಯನ್ನು ತೆಗೆದು ಒಂದೇ ಊಟವೆಂದೂ ನಿರ್ಧರಿಸಿದರು.

೪. ಈ ಮಹಾಪಂಕ್ತಿಯಲ್ಲಿ ನಿಜವಾಗಿಯೂ ನಿರ್ಗತಿಕರಾಗಿಯೂ, ಅಶಕ್ತರಾಗಿಯೂ ಇರುವವರಿಗೆ ಮಾತ್ರ ಪ್ರವೇಶವು ಸಿಗಬೇಕು ಎಂಬ ಆಶಯದಿಂದಲೂ, ಸ್ವತಃ ಸಮರ್ಥರಾಗಿಯೂ ಅನುಕೂಲವಂತರಾಗಿಯೂ ಇರುವವರು ಈ ಧರ್ಮಾನ್ನದ ಉಪಯೋಗವನ್ನು ಪಡೆದು ಸೋಮಾರಿಗಳಾಗಬಾರದೆಂಬ ಅಭಿಪ್ರಾಯದಿಂದಲೂ ಇದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಶಕ್ತರು ಯಾರು ಅನುಕೂಲವಂತರು ಯಾರು ಎಂಬುದನ್ನು ತಿಳಿಯುವುದು ಕಷ್ಟಸಾಧ್ಯವಾದುದರಿಂದ ಈ ಕೆಲಸವು ಮೆಲ್ಲನೆ ಸಾಗುತ್ತಿದೆ.

೫. ಕಳೆದ ಮೂವತ್ತು ವರ್ಷಗಳಿಂದ ಶ್ರೀ ಮಧ್ವಸರೋವರದಲ್ಲಿ ಶೇಖರಿಸಲ್ಪಟ್ಟ ಕೊಳೆಯನ್ನೂ ಕಶ್ಮಲವನ್ನೂ ತೆಗೆಯಿಸಿ ಶುದ್ಧ ಮಾಡಿಸಿದರು. ಯಾವಾಗಲೂ ಸ್ವಚ್ಛವಾದ ನೀರು ಸಿಕ್ಕಬೇಕೆಂಬ ವ್ಯವಸ್ಥೆಯನ್ನು ಮಾಡಬೇಕೆಂದು ಆರಂಭಿಸುವಾಗ ಆಕಸ್ಮಿಕವಾದ ಮಳೆ ಬಂದು ಕೆಲಸವನ್ನು ನಿಲ್ಲಿಸಬೇಕಾಯಿತು. ಬರುವ ವರ್ಷದಲ್ಲಿ ಆ ಕೆಲಸವನ್ನು ಪೂರೈಸ್ಯಾರೆಂದು ನಂಬುತ್ತೇನೆ. ಹಾಗೆಯೇ ಪಾತ್ರಗಳನ್ನು ತೊಳೆಯುವ ಇನ್ನೊಂದು ಕೆರೆಯನ್ನೂ ಕಶ್ಮಲ ತೆಗೆಯಿಸಿ ಶುದ್ಧಮಾಡಿಸಿದರು. ಆಕಸ್ಮಾತ್ತಾಗಿ ಒಂದು ಕಡೆಯು ಕುಸಿದು ಬಿದ್ದುದರಿಂದಲೂ, ಮಳೆಯು ಬಂದುದರಿಂದಲೂ ಕೆಲಸವನ್ನು ಸಂಪೂರ್ಣವಾಗಿ ಮುಗಿಸಲಿಕ್ಕಾಗಲಿಲ್ಲ. ಬರುವ ವರ್ಷ ಮುಗಿಸ್ಯಾರೆಂದು ಭರವಸೆ ಇದೆ.

೬. ಶ್ರೀಕೃಷ್ಣಪೂಜೆಯನ್ನು ನೋಡಲು ಬರಲಿಕ್ಕಿರುವ ಭಕ್ತರುಗಳಿಗೆ ಅನುಕೂಲವಾಗುವಂತೆ ಪೂಜೆಯ ಕಾಲವ್ಯವಸ್ಥೆಯನ್ನು ಮಾಡಿ ಆಯಾಯ ಕಾಲಗಳಲ್ಲಿ ಆಯಾಯ ಪೂಜೆಯ ವ್ಯವಸ್ಥೆ ಮಾಡಿದ್ದಲ್ಲದೆ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಮಹಾಪೂಜೆಯೂ, ರಾತ್ರಿ ೮ ಘಂಟೆಗೆ ಸರಿಯಾಗಿ ರಾತ್ರಿಪೂಜೆಯೂ ನಿಯತವಾಗಿ ನಡಿಯುವಂತೆ ಮಾಡಿರುತ್ತಾರೆ. ಇದೂ ಅಲ್ಲದೆ ಸಾಯಂಕಾಲ ಪುರಾಣಪ್ರವಚನಗಳನ್ನು ಕ್ಲುಪ್ತಕಾಲದಲ್ಲಿ ಶ್ರೀಕೃಷ್ಣದೇವರ ಸನ್ನಿಧಿಯಲ್ಲಿ ನಡಿಸುವ ವ್ಯವಸ್ಥೆ ಮಾಡಿರುತ್ತಾರೆ.

೭. ಮತ್ತೊಂದು ವ್ಯವಸ್ಥೆ ಏನೆಂದರೆ ಇಷ್ಟರ ವರೆಗಿನ ಮಠದ ನೌಕರರುಗಳಂತೆ ಈಗಿನ ಮಠದ ನೌಕರರುಗಳಲ್ಲ. ಏಜಂಟರ ಮೊದಲ್ಗೊಂಡು ಕೊಠಾರಿ ಕೆಲಸದ ವರೆಗೆ ಅನೇಕ ಕೆಲಸಗಾರರು ವಿದ್ಯಾವಂತರೇ ಆಗಿರುವರು. ಅವರಲ್ಲಿ ಕೆಲವು ಮಂದಿ ಮದ್ರಾಸ್ ಯುನಿವರ್ಸಿಟಿಯ ಶಿರೋಮಣಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಿದ್ದಾರೆ. ಕೆಲವರು ಬಿ.ಎಸ್. ಎಸ್. ಎಲ್. ಸಿ. ಪಾಸಾದವರೂ ಇದ್ದಾರೆ. ನಮ್ಮಂತಹ ವೈದಿಕ ಬ್ರಾಹ್ಮಣರು ಮಾತ್ರ ಕಮ್ಮಿ. ಆದುದರಿಂದಲೇ ಈ ಪರ್ಯಾಯದಲ್ಲಿ ಭಕ್ತರು ಮಾಡಿಸುವ ಮಹಾಪೂಜೆ ೧೮ ರೂಪ್ಯಾ ಒಂದರಂತೆ ಸಂಸ್ಕೃತ ಮಹಾಪಾಠಶಾಲೆಗೆ ವಂತಿಗೆಯನ್ನು ಕೊಡುವ ವ್ಯವಸ್ಥೆಯಾಗಿದೆ.

ಹೀಗೆಯೇ ಇನ್ನೂ ಕೆಲವು ಚಿಕ್ಕಪುಟ್ಟ ಸುಧಾರಣೆಗಳನ್ನು ಮಾಡಿರುತ್ತಾರೆ; ಇನ್ನೂ ಅನೇಕ ಮಾಡಲಿಕ್ಕಿರುವರು. ಒಟ್ಟಿಗೆ ಶ್ರೀಕೃಷ್ಣ ಮಠದ ಆಡಳಿತೆಯಲ್ಲಿಯೂ ಕ್ರಮಗಳಲ್ಲಿಯೂ ಸರಿಯಾದ ವ್ಯವಸ್ಥೆಯನ್ನು ಮಾಡುವುದೇ ಅವರ ಮುಖ್ಯ ಉದ್ದೇಶವೆಂದು ತಿಳಿದುಬರುತ್ತದೆ. ಈ ವ್ಯವಸ್ಥೆಗಳನ್ನು ನ್ಯಾಯಸಮ್ಮತವನ್ನಾಗಿ ಮಾಡಲಿಕ್ಕೆ ತಕ್ಕುದಾದ ಸ್ಕೀಮೊಂದನ್ನು ತಯಾರಿಸಲಿಕ್ಕಿರುವರೆಂದೂ, ಸದ್ರಿ ಸ್ಕೀಮು ತಿರಸ್ಕೃತವಾದಲ್ಲಿ ಎಂಡೋಮೆಂಟ್ ಬೋರ್ಡಿನ ವರೆಗೂ ಪ್ರಯೋಗಲಿಕ್ಕೆ ಹಿಂಜರಿಯುವುದಿಲ್ಲವೆಂದೂ ತಿಳಿದು ಬರುತ್ತದೆ. ಇವರ ಈ ಉದಾತ್ತ ಧ್ಯೇಯಕ್ಕೆ ದೇವರು ಸಹಾಯಮಾಡಲಿ.

ಈ ತರದ ಸುಧಾರಣೆಗಳು ನಿಜವಾಗಿಯೂ ಶ್ರೀಕೃಷ್ಣಮಠಕ್ಕೂ ಇತರ ಮಠಗಳಿಗೂ ನಮ್ಮ ಸಮಾಜಕ್ಕೂ ಭೂಷಣವೇ. ಆದರೆ ಶ್ರೀ ಸ್ವಾಮಿರು ಸುಧಾರಣೆಗಳನ್ನು ಮಾಡಲಿಕ್ಕೆ ಆರಂಭಿಸಿದಂದಿನಿಂದಲೇ ನಮ್ಮ ವೈದಿಕ ಬ್ರಾಹ್ಮಣರನೇಕರು ಟೀಕೆ ಮಾಡಲಿಕ್ಕಾರಂಭಿಸಿದರು. ಅಷ್ಟಲ್ಲದೆ ಕೆಲವರು ಪತ್ರಿಕೆಗಳಲ್ಲಿಯೂ ಸ್ವಾಮಿರ ಘೋರಣೆಯನ್ನು ಹೀಯಾಳಿಸಲಿಕ್ಕಾರಂಭಿಸಿದರು. ಸ್ವಾಮಿರನ್ನು ಸನಾರ್ಧಿಸಿ ಟೀಕೆಗಳನ್ನು ವಿರೋಧಿಸಿ ಮಾತಾಡಿದವರೇ ಕಮ್ಮಿ. ಸಮಾಜಮುಖಂಡರುಗಳೆಲ್ಲರೂ ದೂರದಲ್ಲಿಯೇ ಇದ್ದಾರೆ. ಸುಧಾರಣೆಗಳಾಗಬೇಕೆಂದು ಲೇಖನ-ಭಾಷಣಗಳನ್ನು ಮಾಡುವ ಮುಖಂಡರುಗಳು ಎಲ್ಲಿ ಹೋದರೋ, ದೇವರೇ ಗತಿ. ಕಡೆಗಾದರೂ ನಮ್ಮ ವೈದಿಕ ಬ್ರಾಹ್ಮಣ ಸಮಾಜಕ್ಕೆ ಕಂಟಕಪ್ರಾಯರಂತಿರುವ ಶ್ರೀಯುತ ಪಣಿಯಾಡಿಯವರೇ ಮುಂದೆ ಬಂದು ರಾಷ್ಟ್ರಬಂಧುವಿನಲ್ಲಿ ಪ್ರತಿಭಟಿಸಿದರು. ಕಡೆಗೇಕೋ ಅಲ್ಲಿಯೇ ಆ ಲೇಖನವು ನಿಲ್ಲಿಸಲ್ಪಟ್ಟಿತು. ಪಣಿಯಾಡಿಯವರೂ ಸುಮ್ಮನೆ ಕುಳಿತಿರುವರೆಂದು ಕಾಣುತ್ತದೆ. ಯಾವ ವಿಧವಾದ ಟೀಕೆಗಳು ಬಂದರೂ ಯಾರ ಬೆಂಬಲವು ಇಲ್ಲದಿದ್ದರೂ ಶ್ರೀ ಸ್ವಾಮಿರು ಮುಂದರಿಸುತ್ತಲೇ ಇದ್ದಾರೆ. ಆದುದರಿಂದಲೇ ಯಾವ ವಿಧವಾದ ಸಹಾಯವೂ ಸಿಕ್ಕದಂತೆ ನಮ್ಮ ವೈದಿಕಮುಂಡಲಿಯ ಮುಖಂಡರನೇಕರು ಪ್ರಯತ್ನಪಟ್ಟರೂ ಶ್ರೀ ಸ್ವಾಮಿರ ನವೀನ ಧೋರಣೆಯೊಂದಿಗೆ ಪರ್ಯಾಯಕ್ರಮವು ಚಂದವಾಗಿಯೇ ನಿರವೇರುತ್ತ ಬರುತ್ತದೆ.

ಶ್ರೀಕೃಷ್ಣಮಠದಲ್ಲಿ ಇತರ ಮಠಗಳಲ್ಲಿಯೂ ಸಮಾಜದಲ್ಲಿಯೂ ಅಗತ್ಯವಾಗಿರುವ ಸುಧಾರಣೆಗಳನ್ನು ಮುಂಮೊತ್ತುವರೆ ಸ್ವಾಮಿರು ಬದ್ಧಕಂಕಣರಾಗಿಯೇ ಇದ್ದಾರೆ. ಸಾಮಾಜಿಕ ಸುಧಾರಣೆಗಳು ಯಾವುವು ಅಗತ್ಯವೆಂಬ ವಿಷಯುಗಳಲ್ಲಿ ಇನ್ನಿತರ ವಿಷಯಗಳಲ್ಲಿಯೂ ಸಮಾಜದ ಪರಿಷತ್ತೊಂದನ್ನೆ ಅತ್ಯಲ್ಪಕಾಲದಲ್ಲಿಯೇ ಜರಗಿಸಲಿಕ್ಕಿರುವರೆಂದು ತಿಳಿದುಬರುತ್ತದೆ. ಅದಲ್ಲದೆ ಆಗಬೇಕಾದ ಸುಧಾರಣೆಗಳಲ್ಲಿ ಯಾರು ಬೇಕಾದರೂ ಕೊಟ್ಟ ಸಲಹೆಗಳನ್ನು ಪರಾವರ್ತಿಸಲಿಕ್ಕೆ ತಯಾರಿದ್ದಾರೆ.

ನಮ್ಮ ಸಮಾಜಕ್ಕೆ ಯಾವ ಸುಧಾರಣೆಗಳು ಅಗತ್ಯ, ಸಮಾಜವೂ ಮಠಗಳೂ ಒಂದಾದಲ್ಲಿ ಏನು ಮಾಡಬಹುದು ಎಂಬಿತ್ಯಾದಿ ವಿಷಯಗಳನ್ನು ಮುಂದಿನ ಲೇಖಾಂಕಗಳಲ್ಲಿ ವಿವರಿಸುವೆನು.

ವೈದಿಕ ಬ್ರಾಹ್ಮಣ.

ಶ್ರೀ. ಜಿ. ಎನ್. ಲಕ್ಷ್ಮಣ ಪೈಗಳವರಿಂದ ರಚಿತವಾದ ಪುಸ್ತಕಗಳು.

೧. ಸಚಿತ್ರ ಅಭಿನಯಗೀತಾವಳಿ— ಮುದರಾಸು, ಮುಂಬಯಿ, ಮೈಸೂರು ಟಿಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೧, ೨, ೩ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ. ಕ್ರಯ ೩ ಆಣೆ.

೨. ಸಚಿತ್ರ ಪದ್ಯರತ್ನಾವಳಿ (ಪ್ರಥಮ ಭಾಗ)—ಮುದರಾಸು, ಮುಂಬಯಿ, ಮೈಸೂರು ಟಿಕ್ಸ್ಟ್ ಬುಕ್ ಕಮಿಟಿಯವರಿಂದ ಮಂಜೂರಾಗಿರುವುದಲ್ಲದೆ ದಕ್ಷಿಣ ಕನ್ನಡ ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನವರಿಂದ ತಯಾರಿತವಾದ ಪಾಠಪಟ್ಟಿಯಲ್ಲಿ ೪, ೫ನೆ ದರ್ಜೆಗಳ ಪದ್ಯಪಾಠಕ್ಕೆ ನಿಯಮಿತವಾಗಿದೆ. ಕ್ರಯ ೩ ಆಣೆ.

೩. ಕೀರ್ತನಾಂಜಲಿ (ಪ್ರಥಮ ಭಾಗ)—ಮರಾಟಿ, ದಕ್ಷಿಣಾದಿ ಚಾಲುಗಳಿಂದ ಕೂಡಿದ ಭಜನಾ ಗೀತಗಳನ್ನುಳ್ಳ ಈ ಪುಸ್ತಕವು ಮಕ್ಕಳ 'ಪ್ರಾರ್ಥನೆ'ಯ ಪಾಠಕ್ಕೆ ಯೋಗ್ಯವಾಗಿದೆ. ಕ್ರಯ ೨ ಆಣೆ ೬ ಪೈ.

೪. ಯದ್ವಾತದ್ವ—ಒಂದು ಲಘುಕಥಾ ಪದ್ಯ. ಕ್ರಯ ೧ ಆಣೆ.

೫. ಕರ್ಣಾಟಕ ಸಂಗೀತ ಭಕ್ತವರೇಣ್ಯ ದಾಮೋಜಿಪಂತ ನಾಟಕ. (ಆಟ್ಟಿನಲ್ಲಿದೆ.)

ಹರಿಹರ ಪುಸ್ತಕಾಲಯ, ಪುತ್ತೂರು.

☞ ಎಲ್ಲಾ ಪ್ರಸಿದ್ಧ ಪುಸ್ತಕವ್ಯಾಪಾರಿಗಳಲ್ಲಿ ಪುಸ್ತಕದ ಪ್ರತಿಗಳು ಸಿಗುವವು.

Jai Vijaya Insurance Company, Limited.

Head Office:—16 LINGHI CHETTY STREET, POST BOX 251, MADRAS.

Jai Vijaya the most scientific and one of the best Companies of the east coast is famous for its strong directorate, efficient management, low and easy monthly payments suitable to poor and middle class people. This ideal life office is the only one which issues policies for Rs. 250 and multiples thereof.

MOST ATTRACTIVE BONUS.

A rebate of Rs. 2½% on yearly payment of premiums. Ask for particulars of Table IX.

WANTED

Wanted immediately Taluk Chief Agents on a monthly salary of Rs. 60. Only men of position and influence need apply.

For particulars write to:—**B. S. RAI,** *Organiser,*
Jai Vijaya Insurance Coy., Ltd., P. O. FARANGIPET, S. Kanara.

ವಿಶ್ವವಿಚಾರ

(ವಿಮಾನಪತ್ರ)

ಲೀಗ್ ಒಫ್ ನೇಶನ್ಸ್ ನಾವು ಹೇಳಿದಂತೆ ಒಣಚರ್ಚೆಯಲ್ಲಿ ಕಾಲಹರಣಮಾಡುತ್ತಿದೆ. ಅಷ್ಟರಲ್ಲಿ ಅಬಿಸ್ಸೀನಿಯದ ರಾಜಧಾನಿಯೂ ಇಟೆಲಿಯವರ ಕೈಸೇರಿತು. ಅಬಿಸ್ಸೀನಿಯದ ಚಕ್ರವರ್ತಿಯು ತನ್ನ ಸ್ಥಾನವನ್ನು ಬಿಟ್ಟು ಲೀಗ್ ಒಫ್ ನೇಶನ್ಸನ್ನು ತನ್ನ ಪಕ್ಷಕ್ಕೆ ತಿರುಗಿಸುವ ಲಾಲಸೆಯಿಂದ ಈಗ ಇಂಗ್ಲೆಂಡಿಗೆ ಹೋಗಿದ್ದಾನೆ. ಅವನ ಹೆಸರಿನಲ್ಲಿ ಕೊಟ್ಟ ಔತಣಕ್ಕೆ ಇಂಗ್ಲಿಷ ಮಂತ್ರಿಗಳ ಕೂಟದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಅನಿರೀಕ್ಷಿತವಾದ ಕಾರ್ಯವಿದ್ದು ಅವರು ಯಾರೂ ಹಾಜರಾಗಲಿಲ್ಲ. ಇಟೆಲಿಯ ರಾಜನನ್ನು ಅಬಿಸ್ಸೀನಿಯದ ಚಕ್ರವರ್ತಿಯಾಗಿ ಭಾವಿಸುತ್ತೀರೋ ಎಂದು ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಮಂತ್ರಿಕೂಟದೊಡನೆ ಕೇಳಲು ಅದಕ್ಕೆ ಸಮರ್ಪಕವಾದ ಉತ್ತರವಿಲ್ಲ. 'ಅಕ್ಕಿ ಮೇಲೆ ಜೀವ, ನೆಂಟರ ಮೇಲೆ ಪ್ರಾಣ' ಎಂಬಂತೆ ಬ್ರಿಟಿಶರ ಅವಸ್ಥೆ ಆಗಿದೆ. ಇಟೆಲಿಯೊಡನೆ ವ್ಯಾಪಾರಕ್ಕೆ ಹಾಕಿದ ನಿರ್ಬಂಧವು ಈಗ ಯುದ್ಧ ಮುಗಿದ ಮೇಲೆ ಅವಶ್ಯವುಂಟೆ ಎಂದು ಬ್ರಿಟಿಷರ ಮತ್ತು ಫ್ರೆಂಚರ ವಾದ. ಫ್ರಾನ್ಸಿನಲ್ಲಿ ಸಮತಾವಾದಿಗಳ ಮಂತ್ರಿಕೂಟವು ಅಧಿಕಾರಕ್ಕೆ ಬಂದನಂತರವಾದರೂ ಅಬಿಸ್ಸೀನಿಯದ ಕಡೆಗೆ ಫ್ರಾನ್ಸು ಒಲಿದೀತು ಎಂಬ ಆಸೆಯು ನಿರಾಶೆಯಾಯಿತು. ಈಗ ಲೀಗ್ ಕೂಟದ ಸಭೆ ಸೇರುವ ದಿನವು ಗಣಪತಿಯ ಮದುವೆಯಂತೆ ಮುಂದೆ ಮುಂದೆ ಬೀಳುತ್ತದೆ. ಅಂತು ಜರ್ಮನಿಯು ಗ್ಡಿನಲೆಂಡದಲ್ಲಿ ಕೋಟೆ ಇತ್ಯಾದಿಗಳನ್ನು ಕಟ್ಟಿ ಭದ್ರಪಡಿಸುತ್ತಿರುವುದರಿಂದ ಇತರರ ವ್ಯಾಜ್ಯದಲ್ಲಿ ಕೈ ಹಾಕಿ ನಾವು ಯಾಕೆ ಕೈಸುಟ್ಟುಕೊಳ್ಳಬೇಕು? ಎಂದು ಬ್ರಿಟಿಷರೂ ಫ್ರೆಂಚರೂ ತೆಪ್ಪಗೆ ಇದ್ದು ಬಿಟ್ಟರೆ ಮೊದಲಿನ ಯುದ್ಧದನಂತರ ಲೀಗ್ ಒಫ್ ನೇಶನ್ಸಿನ ನಾಲ್ಕು ಕಂಬಗಳಂತಿರುವವರ ಪೈಕಿ ಜಪಾನು ಲೀಗನ್ನು ಬಿಟ್ಟುಹೋಗಿದೆ. ಇಟೆಲಿಯು ತನ್ನ ಇಚ್ಛೆಗೆ ಎದುರಾಡುವವರ ಬಾಯಿಕಟ್ಟಿಸಲಿಕ್ಕೆ ತಾನು ಲೀಗನ್ನು ಬಿಟ್ಟು ಹೋಗುವುದಾಗಿ ಹೆದರಿಸುತ್ತದೆ. ಈಗ ನಿಜ ಸ್ಥಿತಿಯನ್ನು ಸ್ವಲ್ಪ ಗಮನಿಸಿದರೆ ಮತ್ತು ಲೀಗಿನ ಮೆಂಬರರು ಒಮ್ಮತವಾದರೆ ಇಟೆಲಿಯ ಮೂಗಿಗೆ ದಾರ ಹಾಕಲು ಸಾಧ್ಯವಾಗುತಿತ್ತು. ಪ್ರತಿಬಂಧಕದ ಏರ್ಪಾಡಿನಿಂದ ಈಗಲೇ ಇಟೆಲಿಗೆ ಬರುವ ಸಾಮಾನು ಶೇಕಡಾ ೬೦ರಷ್ಟು ತಗ್ಗಿದೆ; ಇಟೆಲಿಯಿಂದ ಹೊರ ಹೋಗುವ ಸಾಮಾನು ಸೇಕಡಾ ೪೮ರಷ್ಟು ತಗ್ಗಿದೆ. ಇಟೆಲಿಯ ಬೇಂಕಿನಲ್ಲಿ ಚಿನ್ನದ ರಿಜರ್ವ್ ೬೦ ಮಿಲ್ಲಿಯ ಪೌಂಡಿನಿಂದ ೨೦ ಮಿಲ್ಲಿಯ ಪೌಂಡಿಗೆ ತಗ್ಗಿದೆ. ಇಟೆಲಿಗೆ ಈಗಲೇ ಸಾಲ ಸಾಕಷ್ಟು ಇದೆ. ಇನ್ನು ಯುದ್ಧದ ಖರ್ಚು ಪೂರೈಸಲಿಕ್ಕೆ ಹಣ ಬೇಕಾಗಿದೆ. ಸಂಗ್ರಹವಾದ ಸೈನ್ಯದ ಜನರನ್ನು ಹಿಂದಕ್ಕೆ ಅವರವರ ಊರಿಗೆ ಕಳುಹಿಸುವ ಖರ್ಚು, ಅಬಿಸ್ಸೀನಿಯವನ್ನು ಹೊಸ ರೀತಿಯಿಂದ ರೂಪಿಸುವುದಕ್ಕೆ ಬೇಕಾದ ಖರ್ಚು ಇತ್ಯಾದಿಗಳಿಗೆ ಹೇರಳ ಹಣ ಬೇಕಾಗಿದೆ.

ಅಬಿಸ್ಸೀನಿಯದ ಉತ್ತರಭಾಗವು ಇಟೆಲಿಯ ವಶವಾದರೂ ದಕ್ಷಿಣಭಾಗದಲ್ಲಿ ಚಕ್ರವರ್ತಿಯ ಪ್ರತಿನಿಧಿಯಾಗಿ ಆಳುವ ಮಂತ್ರಿಕೂಟವು ತೆಪ್ಪಗೆ ಕುಳಿತುಕೊಳ್ಳದೆ ಇಟೆಲಿಯ ಸೈನ್ಯವು ಸ್ವಸ್ಥವಾಗಿ ಹಿಂದೆ ಹೋಗದಂತೆ ವಿಡ್ಡೂರಗಳನ್ನು ತಂದಿಕ್ಕಿ ಸಾಧಿಸುವುದು. ಹೀಗಾಗಿ ಅಬಿಸ್ಸೀನಿಯದಲ್ಲಿ ಯದ್ಧದ ಖರ್ಚಿನಗಿಂತಲೂ ಶಾಂತಿ ಸ್ಥಾಪನೆಯ ಖರ್ಚೇ ಹೆಚ್ಚಬಹುದು.

ಅಷ್ಟರಲ್ಲಿ ಒಸ್ಟ್ರಿಯದಲ್ಲಿ ಹೆಬ್ಸಬರ್ಗ ರಾಜಕುಟುಂಬದವನನ್ನು ರಾಜನಾಗಿ ಪಟ್ಟಕ್ಕೇರಿಸುವ ಪ್ರಯತ್ನವೂ ನಡೆಯುತ್ತದೆ. ಹಾಗೆಯೇ ಜರ್ಮನಿಯು ಒಸ್ಟ್ರಿಯವನ್ನು ಜರ್ಮನ ರೆಕ್ಕೆಗಳ ಅಡಿಯಲ್ಲಿ ಆಶ್ರಯವನ್ನು ಕೊಟ್ಟು ತನ್ನದಾಗಿ ಮಾಡಬೇಕು ಎಂದು ಜರ್ಮನಿಯು ಹಾತೊರೆಯುತ್ತಿದೆ.

ಅಷ್ಟೇ ಅಲ್ಲ, ಜರ್ಮನಿಗೆ ಆಫ್ರಿಕದಲ್ಲಿದ್ದ ತನ್ನ ವಸಾಹತುಗಳನ್ನು ಹಿಂದಕ್ಕೆ ಪಡೆಯುವ ಆಸೆಯು ಬಲವಾಗಿ ಇರುವುದರಿಂದ ಅವುಗಳ ಮೇಲೆ ಬೇಳಲಿಕ್ಕೆ ಯಾವುದೊಂದು ಕಾರಣವನ್ನು ಹುಡುಕುತ್ತಲೇ ಇದೆ.

ಹೀಗಿರುವ ಕಾಲದಲ್ಲಿ ಲೀಗ್ ಒಫ್ ನೇಶನ್ಸಿನ ಕೈ ಸಡಿಲಿಸಿ ಹೋದರೆ ಅದಕ್ಕೆ ಸೇರಿದ ರಾಜ್ಯಗಳಲ್ಲಿ ಒಮ್ಮತವಿಲ್ಲದೆ ಅವುಗಳ ಪ್ರಯತ್ನವು ಕಪ್ಪೆಗಳ ತುಲಾಭಾರದಂತೆ ಪ್ರಪಂಚದ ಪರಿಹಾಸ್ಯಕ್ಕೆ ಗುರಿಯಾಗುವುದು ಖಂಡಿತ. ಹಾಗಾದ್ದರಿಂದ ಲೀಗ್ ಒಫ್ ನೇಶನ್ಸನ್ನು ಮೋದಂಡಸ್ಥಿತಿಯಿಂದ ಇಂಜಕ್ಷನ್ ಕೊಟ್ಟು ಚೇತರಿಸುವಂತೆ ಮಾಡಬೇಕೋ ಅದನ್ನು ಕೊಂದು ಅದರ ಸಮಾಧಿಯ ಮೇಲೆ 'ಐಕಮತ್ಯದ ನಿಷ್ಕ್ರಮಣ' ಎಂದು ಅಕ್ಷರಗಳನ್ನು ಕೆತ್ತಿ ಮುಂದಿನ ಜನಾಂಗಕ್ಕೆ ಹಿಂದಿನ ಪಾಶ್ಚಾತ್ಯ ಜನಾಂಗಗಳ ರಾಜಕೀಯ ಇತಿಹಾಸದ ಪರ್ಯವಸಾನವನ್ನು ಕಾಣಿಸುವ ಸ್ಥಿತಿ ಬಂದೊದಗುತ್ತದೋ ನೋಡಬೇಕು.

ಜಪಾನದ ಎದೆಗಾರಿಕೆ:— ಈ ಮೂರು ವರ್ಷಗಳಿಂದ ಜಪಾನು ೪೩ ಮಿಲ್ಲಿಯ ಜನರನ್ನೂ ಫ್ರಾನ್ಸಿನ ಇಮ್ಮಡಿ ವಿಸ್ತಾರದ ಪ್ರದೇಶವನ್ನೂ ತನ್ನ ಅಧಿಕಾರಕ್ಕೆ ಚೀನದಿಂದ ಕಿತ್ತು ಕೊಂಡು ಸೇರಿಸಿತು. ಇದೇ ಮಂಚೂರಿಯದ ಪ್ರದೇಶ. ಇದಲ್ಲದೆ ಚೀನದ ಉತ್ತರಭಾಗವಾದ ನಾಲ್ಕು ಪ್ರಾಂತಗಳನ್ನು ತನ್ನ ಆಶ್ರಯದೊಳಗೆ ತಂದಿದೆ. ಇನ್ನೂ ಹೀಗೆ ಜಪಾನು ಮುಂದೊತ್ತುತ್ತ ಹೋದರೆ ಚೀನದ ೪೫೦ ಮಿಲ್ಲಿಯ ಜನರೂ ಜಪಾನದ ಅಧೀನರಾಗುವುದಕ್ಕೆ ಅಡ್ಡಿಯಿಲ್ಲ. ಅನ್ನುವಾಗ ಡಚ್ಚ ಈಸ್ಟ್ ಇಂಡಿಸ್ ಮಲಯ ಪ್ರಾಂತದ ಸ್ವಾತಂತ್ರ್ಯಕ್ಕೆ ಖಂಡಿತವಾಗಿಯೂ ಅಪಾಯವೇ ಸರಿ.

ಜಪಾನದ ಜನಸಂಖ್ಯೆ ಬಹು ಬೇಗನೇ ಬೆಳೆಯುತ್ತಿದೆ. ಜಪಾನ ದ್ವೀಪಗಳ ಜನಸಂಖ್ಯೆ ೯೦ ಮಿಲ್ಲಿಯ. ಕೈಗಾರಿಕೆಯಲ್ಲಿ ಆಸಕ್ತಿ, ಮಿತವ್ಯಯದ ಜೀವನ, ಯಂತ್ರ ಇತ್ಯಾದಿಗಳ ಒಳ್ಳೇ ಅನುಭವ, ಯುದ್ಧದಲ್ಲಿ ಶೌರ್ಯ, ನೌಕಾವಿದ್ಯೆಯಲ್ಲಿ ನಿಪುಣತೆ, ಅಚಲಿತವಾದ ದೇಶಪ್ರೇಮ ಇವೆಲ್ಲ ಜಪಾನೀಯರಿಗೆ ಅನುಕೂಲವಾದ ಗುಣಗಳು. ಇವರ ದೇಶಪ್ರೇಮವು ಜರ್ಮನರ ದೇಶವಾತ್ಸಲ್ಯಕ್ಕಿಂತ ವಿಶೇಷವಾದದ್ದು. ಇದು ಲೋಕವನ್ನೇ ನುಂಗುವುದಕ್ಕೆ ಒಂದು ಕಾಲದಲ್ಲಿ ಜರ್ಮನ ಜನಾಂಗದಲ್ಲಿ ಕೈಸರನ ರಾಜಕೀಯ ವಾತಾವರಣದಿಂದ ಹುಟ್ಟಿದ ರಾಕ್ಷಸೀಕಾಂಕ್ಷೆಯಂತೆ ವ್ಯಾಪಿಸುತ್ತ ಬಂದಿದೆ. ಇವರಿಗೆ ಒಸ್ಟ್ರೇಲಿಯದಲ್ಲಿ ಜನನಿವಾಸವಿಲ್ಲದೆ ಖಾಲಿ ಇರುವ ಸ್ಥಳದ ಮೇಲೆ ಬಹಳ ಕಾಲದಿಂದ ಕಣ್ಣಿದೆ.

ಚೀನ, ಜಾವಾ, ಸುಮಾತ್ರಾ ದೇಶಗಳಲ್ಲಿ ಜನನಿಬಿಡವಾಗಿದ್ದರೂ ಇವರು ಜಪಾನ್ಯರ ಕೈಗಾರಿಕೆ ವಸ್ತುಗಳನ್ನು ವಿನಿಯೋಗಿಸಿ ಜಪಾನ್ಯರ ಬೊಕ್ಕಸ ತುಂಬಿಸುವಂತೆ ಜಪಾನ್ಯರ ಆಸೆ. ಈ ಆಸುರೀ ಆಸೆಗೆ ಅಡ್ಡಿ ಬರುವ ಮಂತ್ರಿಗಳನ್ನು ಕೊಲ್ಲುವುದಕ್ಕಾಗಲಿ ತಮ್ಮ ಆಸೆಯನ್ನು ಪ್ರಜಾರಗೊಳಿಸುವುದಕ್ಕಾಗಲಿ ಈಗಿನ ಜಪಾನ ತರುಣರು ದಂಗೆ ಎಬ್ಬಿಸಲು ಹಿಂಜರಿಯಲಿಲ್ಲ. ಇದರ ಪರಿಣಾಮವು ಎಲ್ಲೆಲ್ಲಿ ಅಶಾಂತಿಯನ್ನು ಹರಡಿತೆಂದು ನೋಡಲಿಕ್ಕಿದೆ.



ಯೂ ಚಕ್ರವರ್ತಿ ಹೈಲ್ ಸಿಲಾಸ್ಸಿಯವರು ತಮ್ಮ ಸೇನಾನಾಯಕರನ್ನು ಹುರಿದುಂಬಿಸುವದು. ಇವರು ಮಾತ್ರ ಅಂದೇ ರಾತ್ರಿ ರಾಜಧಾನಿಯನ್ನು ತ್ಯಜಿಸಿ ಪಲಾಯನ.

ಶುದ್ಧ ರಕ್ತವು ಸಂಪೂರ್ಣ ಆರೋಗ್ಯವನ್ನೂ ದೇಹವ್ಯಾಪಾರವು ಯೋಗ್ಯವಾಗಿದೆ ಎಂಬುದನ್ನೂ ದೃಢಪಡಿಸುತ್ತದೆ.

NIMBIN



ಕಬ್ಬಿಣ, ಟಾನಿಕುಗಳು ಮತ್ತೂ ಜೀರ್ಣಕಾರಿ ಪದಾರ್ಥಗಳೊಡನೆ ಕೂಡಿರುವ ಬೇವಿನ ಅದ್ವಿತೀಯವಾದ ಸಿದ್ಧೌಷಧ. ನಿಂಬಿನ್ ರೋಗದ ಮೂಲದ ವರೆಗೂ ಹೋಗಿ, ನಿಮ್ಮನ್ನು ಸಶಕ್ತರನ್ನಾಗಿಯೂ, ಉತ್ಸಾಹಿಗಳನ್ನಾಗಿಯೂ ಇರಿಸುತ್ತದೆ. ನಿಂಬಿನ್ ಎಲ್ಲ ಅಶುದ್ಧತೆಗಳನ್ನೂ ನಿರ್ಮೂಲಿಸಿ, ದೇಹವ್ಯಾಪಾರವು ಕ್ರಮವಾಗಿಯೂ, ಸಮತೂಕವಾಗಿಯೂ ಇರುವಂತೆ ಮಾಡುತ್ತದೆ.

ದೀರ್ಘಜೀವನಕ್ಕೆ, ಯಾವ ರೋಗವು ಇಲ್ಲದ ಶರೀರ ಸ್ಥಿತಿಗೆ, ಸಂಪೂರ್ಣ ಆರೋಗ್ಯಕ್ಕೆ, ದೇಹವ್ಯಾಪಾರದ ಯೋಗ್ಯ ಕೆಲಸಕಾರ್ಯಗಳಿಗೆ ಬೇವಿಗೆ ಸರಿಯಾದುದು ಇನ್ನೊಂದಿಲ್ಲ.

ರಕ್ತದ ಕೊರತೆ.

ರಕ್ತದ ಅಶುದ್ಧತೆ ಮತ್ತೂ ಶರೀರದ ಸಾಮಾನ್ಯ ನಿತ್ರಾಣ, ಎಲ್ಲಾ ಸಂದರ್ಭಗಳಲ್ಲಿಯೂ, ಡಾಕ್ಟರರು ವಿವೇಕ ಬುದ್ಧಿಯಿಂದ ಶಿಫಾರಸು ಮಾಡುವುದು ಇದನ್ನೇ. ಬೆಲೆ ಬಾಟಲಿ ೧ಕ್ಕೆ ರೂ. ೧—೧೦—೦
ಪ್ಯಾಕಿಂಗ್ ಮತ್ತು ಪೋಸ್ಟೇಜ್ ಪ್ರತ್ಯೇಕ.

SOLE DISTRIBUTORS:
VARIETY TRADING CORPORATION, 257, Chickpet, Bangalore City.
Stockists: APPAH & CO., China Bazaar Road, Madras.

೧೯೩೩ನೇ ಇಸ್ವಿಯಲ್ಲಿ ವಿಮಾ ಉದ್ಯಮವನ್ನು ಪ್ರಾರಂಭಿಸಿ ವರ್ಷ ವರ್ಷಕ್ಕೆ ಅಭಿವೃದ್ಧಿಯನ್ನು ತೋರಿಸುತ್ತಾ ಈಗ ಜೀವನಿಮೆಯನ್ನೂ ಕೈಕೊಂಡು ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದ

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ
ಶ್ರೀಯುತ ಎಸ್. ಕೆ. ಹೊಸಮನಿ, ಬಿ. ಎ., ಎಲ್.ಎಲ್. ಬಿ., ಎಂ. ಎಲ್. ಎ.,
ಮತ್ತು ಚೆಯರ್ಮ್ಯಾನ್
ಶ್ರೀಯುತ ವಿ. ವಿ. ಹಾಲಭಾವಿ, ಬಿ. ಎ., ಎಲ್.ಎಲ್. ಬಿ.,
ರಿಟಾಯರ್ಡ್ ಫಸ್ಟ್ ಕ್ಲಾಸ್ ಸಬ್ ಜಡ್ಜ್, ಧಾರವಾಡ
ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ ವ್ಯಾಪಾರ ಉದ್ಯೋಗಗಳನ್ನು ಬೆಳಿಸಲಿಚ್ಛಿಸುವ ಸ್ವದೇಶೀ ಕಂಪೆನಿಯಲ್ಲಿಯೇ ವಿಮೆ ಇಳಿಸಿರಿ.

ಧಾರವಾಡ, ಬೆಳಗಾಂವ, ಬಿಜಾಪುರ, ಕಾರವಾರ, ಬಳ್ಳಾರಿ, ರಾಯಚೂರ ಮತ್ತು ಮೈಸೂರ ಸ್ಟೇಟಿನಲ್ಲಿಯೂ, ಅಭಿಮಾನದಿಂದ ಕೆಲಸ ಮಾಡುವ ಕುಶಲ ಏಜಂಟರು ಬೇಕಾಗಿದ್ದಾರೆ.

ವಿಶೇಷ ಮಾಹಿತಿಯನ್ನು ಸಮಕ್ಷಮ ಇಲ್ಲವೇ ಪತ್ರದ್ವಾರದಿಂದ ತಿಳಕೊಳ್ಳಬೇಕು.

The Manager,
The Swaraj Banking & Insurance Co., Ltd., Dharwar.

ಹೊಲಿಗೆ ಕೆಲಸ ಮಾಡುವವರಿಗೂ, ಕಲಿಯುವವರಿಗೂ ಇದೊಂದು ಅಲಭ್ಯ ಲಾಭ!
ಹೆಸರಾದ ಹೊಲಿಗೆಯ ಶಾಲೆಗಳಲ್ಲಿ ಪಠ್ಯ ಪುಸ್ತಕವೆಂದು ಮಾನ್ಯತೆಪಟ್ಟ

ಸಚಿತ್ರ ಕರ್ತನಕಲಾ-ವಿಜ್ಞಾನ.

(ಭಾಗ ೧ — ಮರಾಠಿ.)

ಈ ಮೊದಲನೇ ಭಾಗದಲ್ಲಿ ೬ ತರದ ಪೈರಣಿ, ೧೯ ತರದ ಶರ್ಟುಗಳು, ೨ ನಮೂನೆಯ ಸೆಪರೇಟ ಕೊಲರು, ೨ ಜಾತಿಯ ಬಟನ್‌ಗಳು ಮತ್ತು ೪ ತರದ ಇಜಾರುಗಳು ಕತ್ತರಿಸುವ ಶಾಸ್ತ್ರೀಯ ಪದ್ಧತಿಯು ಅಗದೀ ಸುಲಭ ರೀತಿಯಿಂದ ವಿವರಿಸಲ್ಪಟ್ಟಿದೆ. ಈ ವಿಷಯದ ೨೬ ಜಾತಿಯ ಫ್ಯಾಶನ್ನು ಆರ್ಟ ಫೋಟೋಗ್ರಫಿವೆ. ಈ ಪುಸ್ತಕದ ಸಹಾಯದಿಂದ ಯಾರೂ ವಸ್ತ್ರ ಕತ್ತರಿಸುವ (ಕಟಿಂಗ್) ಕಲೆಯನ್ನು ಸುಲಭವಾಗಿ ಕಲಿಯಬಹುದು.

ವಸ್ತ್ರದ ಬ್ಯಾಂಡಿಂಗ ಸಮೇತ ಪ್ರತಿ ೧ಕ್ಕೆ ರೂ. ೨—೮—೦. (ಅಂಚೆ ಹಾಸಲು ಬೇರೆ).

ಸೂಚನೆ:— ಈ ಪುಸ್ತಕವನ್ನು ಕನ್ನಡಿಸಿ ಪ್ರಕಟಿಸುವ ಸಂಕಲ್ಪವಿದೆ. ಕನ್ನಡದಲ್ಲಿ ಇಂಥ ಪುಸ್ತಕವು ಇದೇ ಮೊದಲನೇದಾದ್ದರಿಂದ ಬೇಕಷ್ಟೇ ಪ್ರತಿಗಳನ್ನು ತೆಗೆಯುವೆವು. ಕಟಿಂಗ ಕಲೆಯನ್ನು ಶಾಸ್ತ್ರೀಯ ಪದ್ಧತಿಯಿಂದ ಕಲಿಯಬಯಸುವವರು ಈ ಪುಸ್ತಕಕ್ಕಾಗಿ ಇದೀಗಲೇ ರೂ. ೨—೮—೦ ಕಳಿಸಿ ಹೆಸರು ದಾಖಲೆಪಡಿಸಿಕೊಳ್ಳುವುದು. ಜೂನ್ ತಿಂಗಳ ಕೊನೆಯೊಳಗೆ ಹೆಸರು ದಾಖಲೆಪಡಿಸುವವರಿಗೆ ಅಂಚೆ ವೆಚ್ಚ ಮಾಫಿಯಿಂದ ಜುಲ್ಯೆ ತಿಂಗಳಲ್ಲಿ ಪುಸ್ತಕವನ್ನು ಕಳಿಸಿಕೊಡುತ್ತೇವೆ.

ಟೇಲರ್ಸರಿಗೆ ಬೇಕಾಗುವ ಫ್ಯಾಶನ್ ಬೂಕುಗಳನ್ನೂ, ಫ್ಯಾಶನ್ ಪ್ಲೇಟುಗಳನ್ನೂ, ಬಾಗಲಿಗೆ ಹಚ್ಚುವ ದೊಡ್ಡ ರಂಗೀತ ಚಿತ್ರಗಳನ್ನೂ, ಇತರೇ ಆವಶ್ಯಕ ಸಾಮಾನುಗಳನ್ನೂ ಯೋಗ್ಯ ದರದಿಂದ ಕಳಿಸಿ ಕೊಡುವೆವು. ಈ ಮುಂದಿನ ಎರಡು ಭಾಗಗಳನ್ನು ಅದಷ್ಟು ಬೇಗನೇ ಪ್ರಸಿದ್ಧಿಸುವವರಿದ್ದೇವೆ.

ವಿಶೇಷ ಮಾಹಿತಿ ಬೇಕಾದರೆ ಈ ಕೆಳಗಿನ ಪತ್ತೆಗೆ ಬರೆಯಿರಿ:—

ROYAL ART PUBLISHERS,
Amir Building, Tribhuvan Road,
BOMBAY, 4.

ರೋಯಲ್ ಆರ್ಟ್ ಪಬ್ಲಿಶರ್ಸ್,
ಅಮೀರ ಬಿಲ್ಡಿಂಗ್, ತ್ರಿಭುವನ ರೋಡ್,
ಮುಂಬಯಿ, 4.

ESTD: 1906.

CANARA BANK
LIMITED.

HEAD OFFICE: MANGALORE.

Subscribed Capital	....	....	6,00,000.
Paid up Capital	....	....	3,33,000.
Reserves	....	....	4,50,000.
Deposits	....	....	61,92,000.
Working Capital	....	....	73,40,000.

OFFICES

Bombay-Fort, Bombay-Mandvi, Hubli, Calicut, Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ನಂದೆ ಧೀರರು ತಾ- ।
ವೆಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N

XVIII] ಮಂಗಳೂರು, ತಾರೀಕು ೨೬—೬—೧೯೩೬ [೨೬
ರಜಿಲ ಧಾತು ಸಂವತ್ಸರದ ಆಷಾಢ ಶು। ೭ ಶುಕ್ರವಾರ.

ಪಂಡಿತ ಹೃದಯಾನಾಥ ಕಂಜ್ರೂಯವರ ಭಾಷಣ.

ಪೂನೆಯ 'ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿ'ಯ ೫೧ನೆಯ ವರ್ಷವರ್ಧಂತಿಯ ಕಾಲದಲ್ಲಿ, ಅದರ ಪ್ರೆಸಿಡೆಂಟರಾದ ಪಂಡಿತ ಹೃದಯಾನಾಥ ಕಂಜ್ರೂಯವರ ಸನ್ಮಾನಾರ್ಥವಾಗಿ ಒಂದು 'ಎಟ್—ಹೋಮ್' ಪಾರ್ಟಿಯನ್ನೇರ್ಪಡಿಸಿದ್ದಾಗ, ಪಂಡಿತರೊಂದು ಉದಾತ್ತ ಭಾಷಣ ಮಾಡಿದರು.

ಪ್ರಥಮತಃ ಅವರು ದಿವಂಗತರಾದ ಶ್ರೀ. ಜಿ. ಕೆ. ದೇವಧರರ ಪ್ರಸ್ತಾವ್ಹವನ್ನೆತ್ತಿದರು. ಕಳೆದ ಎಂಟೂವರೆ ವರ್ಷಗಳಿಂದ ಈ ಸೊಸೈಟಿಯನ್ನು ಮುನ್ನಡೆಯಿಸಿದ ಅವರ ನಿಧನದಿಂದ ಈ ಸೊಸೈಟಿಗೆ ಅಪಾರವಾದ ನಷ್ಟವಾಗಿದೆ ಎಂದರು. ಬಡವರ ಹಕ್ಕಿನ ಸಂಬಂಧವಾದ ಅವರ ಕಾದಾಟ, ಜನಾಂಗದ ಸ್ವಾತಂತ್ರ್ಯದ ಕಡೆಗೆ ನಡೆಯಿಸಲಿರುವ ಅವರ ಸಾಮಾಜಿಕ ಸೇವೆ, ರಾಜಕೀಯ ವಾತಾವರಣವನ್ನು ವಿಸ್ತಾರಗೊಳಿಸಲು ಅವರು ಮಾಡಿದ ನ್ಯಾಯಸಮ್ಮತವಾದ ಅತುಲ ಸಾಹಸ,—ಇವುಗಳನ್ನು ಕೊಂಡಾಡುತ್ತ, ಹಿಂದೆ ಸಾರ್ವಜನಿಕ ಕಾರ್ಯಕ್ರಮದಲ್ಲಿ ಸಮಾಜಸೇವೆಗಿದ್ದ ದುರ್ಬಲ ಸ್ಥಾನವನ್ನೂ, ಇಂದು ದೇವಧರರು, ತಮ್ಮ ಪರಿಶ್ರಮದಿಂದೆ, ಅದೇ ಸೇವೆಗೆ ಒದಗಿಸಿಕೊಟ್ಟ ಪ್ರಬಲ ವ್ಯಾಪ್ತಿಯನ್ನೂ ನಿರ್ದೇಶಿಸಿದರು. ಅಷ್ಟೇ ಅಲ್ಲ; ದೇವಧರರ ಚಟುವಟಿಕೆಗಳಲ್ಲಿ ಗ್ರಾಮೋದ್ಧಾರ ಕಾರ್ಯವೂ ಒಂದು ಎಷ್ಟು ಮಟ್ಟಿಗೆ ಯಶಸ್ವಿಯಾಗಿ ನಡೆದಿದ್ದಿತೆಂಬುದನ್ನು, ಅವರ ಸ್ಮಾರಕಕ್ಕಾಗಿ ಬೊಂಬಯಿಯಲ್ಲಿಯೂ, ಪೂನೆಯಲ್ಲಿಯೂ ನಂತಿಗೆಯೆತ್ತಲು ಏರ್ಪಾಡಾದ ಕಮಿಟಿಗಳ ನಿರ್ಮಾಣದ ಉದಾಹರಣೆಯಿಂದ ಮನಗಾಣಿಸುವವರಾದರು.

ಪೂನೆಯ ಸೇವಾಸದನವು ಮಿಸೆಸ್ ರಮಾನಂದ ರಾನಡೆಯವರ ಬೆಂಬಲದಿಂದಲೂ, ಸಹಕಾರದಿಂದಲೂ ಸ್ಥಾಪಿತವಾಗಿದ್ದಿತಷ್ಟೆ. ಅದನ್ನು ಪ್ರಕೃತದ ಉಚ್ಚಸ್ಥಿತಿಗೆ ತಂದು ನಿಲ್ಲಿಸಿದವರು ದೇವಧರರೇ ಎಂದು ಪಂಡಿತರೆಂದರು. ಈ ಸಂಬಂಧ ಸುಮಾರು ೧ ಲಕ್ಷ ರೂಪಾಯಿಯಷ್ಟು ಸಾಲವಾಗಿದ್ದು, ಅದು ಈ ಸಂಸ್ಥೆಯ ಅಸ್ತಿತ್ವವನ್ನೇ ಬೆದರಿಸುತ್ತಿರುವುದರಿಂದ, ದೇವಧರರ ಹೆಸರಲ್ಲಿ ಹೊರಟ ಆ ಸ್ಮಾರಕವು, ಈ ಸಾಲಕ್ಕೊಂದು ಸಹಾಯರೂಪವಾಗಿ ಪರಿಣಮಿಸಿದರೆ ಯುಕ್ತವಾದೀತೆಂದು ನುಡಿಯುತ್ತ, ಈ ಸಂದರ್ಭದಲ್ಲಿ ಆ ಸ್ಮಾರಕಕ್ಕೆ ಉದಾರವನಸ್ಸಿನಿಂದ ೫ ಸಾವಿರ ರೂಪಾಯಿಗಳ ದ್ರವ್ಯಸಾಹಾಯ್ಯವನ್ನು ನೀಡಿದ, ಮಹಿಳೆಯರ ಉನ್ನತಿಯಲ್ಲಿ ವಿಶೇಷ ಆದರವನ್ನು ತೋರುತ್ತಿರುವ ಸಾಂಗಲಿಯ ರಾಣೀ ಸಾಹೇಬರನ್ನು ಅವರು ವಂದಿಸಿದರು. ಸರ್ವಪ್ರಕಾರದಲ್ಲಿಯೂ ಸರ್ವಜನೋಪಕಾರಬುದ್ಧಿಯಿಂದ, ನಾನಾ ರೀತಿಯ ಸೇವೆಯನ್ನು ನಮ್ಮ ಇಂಡಿಯಕ್ಕೆ ಸಮರ್ಪಿಸಿ ಕೃತಕೃತ್ಯರಾದ ಈ ಮಹನೀಯರ ಜೀವನಚರಿತ್ರೆಯೊಂದು ಮರಾಠೀ ಭಾಷೆಯಲ್ಲಿ ಸಿದ್ಧವಾಗಿ, ಸದ್ಯದಲ್ಲಿಯೇ ಪ್ರಕಟವಾಗಲಿರುವುದು ಸಂತೋಷದ ಸುದ್ದಿಯಾಗಿದೆ.

ಅನಂತರ ಪಂಡಿತರು, ರಾಜನೀತಿಗೂ, ಅರ್ಥಶಾಸ್ತ್ರಕ್ಕೂ ಸಂಬಂಧಿಸಿದ ಗೋಖಲೆ ಸಂಸ್ಥೆಯನ್ನು ಸ್ಥಾಪಿಸಿಯೂ, ಅದರ ಊರ್ಜಿತಕ್ಕಾಗಿ ಒಂದು ಲಕ್ಷದಷ್ಟು ರೂಪಾಯಿಗಳ ಸಹಾಯಧನವನ್ನು ಓದಗಿಸಿ ಕೊಟ್ಟೂ ತಮ್ಮ ಜೀವನವನ್ನು ಕೃತಕೃತ್ಯವನ್ನಾಗಿ ಮಾಡಿಕೊಂಡ ಕೀರ್ತಿಶೇಷರಾದ ದಿವಾನ್ ಬಹದೂರ್ ಆರ್. ಆರ್. ಕಾಳೇಯವರ ಮಹೋಪಕಾರವನ್ನು ಸ್ಮರಿಸಿ, ಅದರೊಡನೆ, ಈ ಸೊಸೈಟಿಯ ೧೯೩೫—೩೬ನೆ ಇಸ್ವಿಯ ಕಾರ್ಯಕಲಾಪಗಳನ್ನು ನಿರೂಪಿಸಿದರು. ಆಶ್ರಿತ ಸಂಸ್ಥಾನದ ಪ್ರಜೆಗಳು, ತಮ್ಮ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಕಾಯ್ದುಕೊಳ್ಳುವಲ್ಲಿ ಅವರಿಗೆ ಈ ಸೊಸೈಟಿಯಿಂದ ದೊರಕಿದೆ ಸಹಾಯವೇನು, ಪತಿತವರ್ಗಕ್ಕೆ ಕೊಟ್ಟ ಬೆಂಬಲವೆಷ್ಟು, ಜನ ಸಾಮಾನ್ಯವು, ನಾಗರಿಕರ ಸ್ವಾತಂತ್ರ್ಯವನ್ನು ಸಾಧಿಸಲು, ಅದಕ್ಕೆ ಈ ಸೊಸೈಟಿಯು ಒದಗಿಸಿದ ಬೆಂಬಲದ ಸ್ವರೂಪವು ಯಾವುದು ಎಂಬುದನ್ನು ವಿವರಿಸುತ್ತ, ಗ್ರಾಮೋದ್ಧಾರಕಾರ್ಯದಲ್ಲಿ, ನಮ್ಮ ಮಾನ್ಯ ವೈಸರಾಯರು ತೋರುತ್ತಿರುವ ಅತಿಶಯ ಶ್ರದ್ಧೆಯ ವಿಷಯದಲ್ಲಿ ಸಂತೋಷವನ್ನು ಸೂಚಿಸಿ, ಸೇವಾಸಮಿತಿಯು ಹುಡುಗರ ಸ್ಕೌಟ್ ಸಂಘದ ಚಟುವಟಿಕೆಗಳನ್ನು ಮುಂದೆ ತರುವಲ್ಲಿ, ಈ ಸ್ಕೌಟ್ ಚಳವಳವು, ವಿದ್ಯಾಸಂಬಂಧವಾದ, ಜನಾಂಗನಿರ್ಮಾಣದ ಪ್ರಾಮುಖ್ಯ ವಿಚಾರವೆಂದರು.

'ವಿಮೆನ್ಸ್ ಫೆಲೊಶಿಪ್ ಆಫ್ ಸರ್ವೀಸ್' ಎಂಬೀ ವಿಷಯದಲ್ಲಿ ಪಂಡಿತರು ಅಪ್ಪಣೆ ಕೊಡಿಸಿದುದರಲ್ಲಿ, ಅದೊಂದು ಮಹಿಳಾವರ್ಗದ ಸ್ವತಂತ್ರವಾದ ಸಂಘಟನಾಸಂಘವೆಂದು ವ್ಯಕ್ತವಾಗುತ್ತದೆ. ಈ ಸೇವಾಸ್ಸಂಘದವರು, ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯವರ ಉದ್ದೇಶಗಳಿಂದಲೇ ಪ್ರೇರಿತರೂ, ಉತ್ತೇಜಿತರೂ ಆಗಿ ಇದನ್ನು ಸ್ಥಾಪಿಸಿದ್ದಾರೆ. ಆ ಸೊಸೈಟಿಯವರಂತೆ ಇವರಿಗೂ ಶಿಕ್ಷಣ ದೊರಕುತ್ತದೆ. ಆದರೆ ಇಂಡಿಯಾ ಸೊಸೈಟಿಗೂ, ಇದಕ್ಕೂ ಒಂದು ಮುಖ್ಯ ವ್ಯತ್ಯಾಸವೇನೆಂದರೆ, ಈ ಸರ್ವೀಸಿನವರು ಮದುವೆಯಾಗಕೂಡದು; ಆದರೆ ಈ ಸರ್ವೀಸನ್ನು ಬಿಟ್ಟು ಹೊರಡಬೇಕು. ಈ ಸರ್ವೀಸಿನವರಿಗೆ ಇಂಡಿಯಾ ಸೊಸೈಟಿಯವರು ಧನಸಹಾಯವನ್ನೇನೂ ಮಾಡುವುದಿಲ್ಲ; ಆದರೆ ಇತರ ಎಲ್ಲ ಬಗೆಯ ಸಹಾಯವನ್ನೂ ಸದ್ಯಕ್ಕೆ ಮಾಡುತ್ತಿದ್ದಾರೆ. ಈ ಸರ್ವೀಸಿಗೆ ಉಚ್ಚವಿದ್ಯಾವತಿಯರೂ ಬಂದು ಸೇರುತ್ತಿದ್ದಾರೆ ಎಂಬುದಕ್ಕೆ ಪೂನೆಯ ಇಬ್ಬರು ಮಹಿಳೆಯರು,—ಮಿಸ್ ಶಾಂತಾ ಭಾಲಾವ್ರಾವೊ, ಎಂ. ಏ.ಯವರೂ, ಮಿಸ್ ಗೋದಾವರಿ ಗೋಖಲೆ, ಬೀ. ಏ., ಎಲ್. ಎಲ್. ಬಿ. ಇವರೂ—ಅಂದು ಆ ಸರ್ವೀಸಿಗೆ ಬಂದು ಸೇರಿದರೆಂದು ಪಂಡಿತರು ಸಭೆಯಲ್ಲಿ ತಿಳಿಸಿದುದೇ ಇತರ ಮಹಿಳೆಯರನ್ನೂ ಸೇವೆಗಾಗಿ ಉತ್ತೇಜನಗೊಳಿಸುವ ಒಂದು ಉಜ್ವಲ ದೃಷ್ಟಾಂತ.

ಕೊನೆಯ ಮಾತಾಗಿ, ಪಂಡಿತರು ಇಂಡಿಯದ ಪ್ರಕೃತದ ರಾಜಕೀಯ ಪರಿಸ್ಥಿತಿಯ ಕುರಿತು ಮಾತನಾಡಿ, ಈ ದಿಕ್ಕಿನ ಸೊಸೈಟಿಯ ಕರ್ತವ್ಯವೇನೆಂದು ನಿರ್ದೇಶಿಸಿದರು. 'ಹೊಸ ರಾಜ್ಯರಚನೆಯು ಎಲ್ಲ ಪ್ರಮುಖ ರಾಜಕೀಯ ಪಂಗಡಗಳಿಂದಲೂ ತಿರಸ್ಕರಿಸಲ್ಪಟ್ಟಿದೆ. ಈ ಹೊಸ ಸುಧಾರಣೆಗಳು ಸಮರ್ಪಕವಾಗಿಲ್ಲ' ಎಂದೂ, ಸರಕಾರವನ್ನು ಬಗ್ಗಿಸಿ ನಮ್ಮ ಕಡೆಗೆ ಒಲಿಸಿಕೊಳ್ಳಲು ಇದೇ ಸುಸಂದರ್ಭವೆಂದೂ, ಬ್ರಿಟಿಷ್ ಇಂಡಿಯದ ಪ್ರಜೆಗಳಿಗೂ, ಆಶ್ರಿತ ಸಂಸ್ಥಾನದ ಪ್ರಜೆಗಳಿಗೂ ಈ ಹೊಸ ಸುಧಾರಣೆಗಳ ಕುರಿತು ಶಿಕ್ಷಣ ಕೊಟ್ಟು ಜನಾಭಿಪ್ರಾಯವನ್ನು ಬಲಗೊಳಿಸಬೇಕಾದುದು ಅಗತ್ಯವೆಂದೂ, 'ಸೋಶಿಯಲಿಜಮ್ಮಿನ' ಕುರಿತು, ಇಂಡಿಯದ ವರೂ, ವಿವೇಕದೃಷ್ಟಿಯಿಂದ ವಿವೇಚಿಸುವುದು ಅನಿವಾರ್ಯವೆಂದೂ ಶ್ರುತಪಡಿಸಿ, ' ಇವೆಲ್ಲ ಕಾರ್ಯಗಳಲ್ಲಿಯೂ ಈ ಚಿಕ್ಕ ಸಂಸ್ಥೆಯು ಮಾಡಬಹುದಾದ ಕೆಲಸಗಳೇನೆಂದು ಸೂಚಿಸಿದರು.

ದಿ ಪ್ರೊಪ್ಯುಲರ್ ಇನ್ಶುರೆನ್ಸ್ ಕೊ., ಲಿಮಿಟೆಡ್, ಮಂಗಳೂರು.

೧೯೩೫ನೇ ಇಸವಿ ದಶಂಬರ ತಾ. ೩೧ಕ್ಕೆ ಅಂತ್ಯವಾಗುವ, ಈ ಸಂಸ್ಥೆಯ ೬ನೆಯ ವರ್ಷದ ವರದಿಯನ್ನು ಅತ್ಯಾದರದಿಂದ ಸ್ವೀಕರಿಸಿ ಪರಿಶೀಲಿಸುವಲ್ಲಿ, ನಮ್ಮ ಜಿಲ್ಲೆಯ ಈ ಸಂಸ್ಥೆ ಚಿಕ್ಕದಾದರೂ, ಅದು ಭದ್ರವಾದ ತಳಹದಿಯ ಮೇಲೆ, ಸುವ್ಯವಸ್ಥೆಯೊಡನೆ, ಉತ್ಸಾಹಪೂರ್ಣವಾದ, ಸರ್ವತೋಮುಖವಾದ ಚಟುವಟಿಕೆಗಳೊಡನೆ ಮುಂಬರಿಯುತ್ತ ದಿನೇ ದಿನೇ ಸ್ಥಿರವಾದ ಅಭಿವೃದ್ಧಿಯನ್ನು ಪಡೆಯುತ್ತ ಬರುತ್ತಿದೆ ಎಂದು ವ್ಯಕ್ತವಾಗುತ್ತದೆ. ಹಿಂದಿನ ವರ್ಷಕ್ಕೂ ಹೆಚ್ಚಾಗಿ ಈ ಸಂಸ್ಥೆ ದೊರಕಿಸಿಕೊಂಡ ಪೊಲಿಸಿಗಳಲ್ಲಿ ಸ್ವೀಕೃತವಾದ ಪೊಲಿಸಿಯ ಮೊತ್ತ, ವರದಿಯ ವರ್ಷದಲ್ಲಿ, ರೂ. ೬,೧೦,೦೦೦; ಹಾಗೇ, ಅದೇ ವರ್ಷ, ಹೆಚ್ಚಾಗಿರುವ ಪ್ರೀಮಿಯಮ್ ಮೊದಲಾದುದರ ಉತ್ಪತ್ತಿ ರೂ. ೫೭,೧೧೩—೯-೧೦; ಮತ್ತೆ ಪ್ರಾಮುಖ್ಯವಾಗಿ ಎದ್ದು ತೋರುವ, ವರದಿಯ್ದ ವರ್ಷದ, ಲ್ಯಾಪ್ಸ್ ಫಂಡಿನ ರೂ. ೧೭,೬೯—೯-೩ ಕೂಡ, ಆ ಫಂಡಿನ ಜುಮ್ಲಾ ಮೊತ್ತ ರೂಪಾಯಿ ೬೪,೯೯೧—೫—೧೧; ಅಲ್ಲದೆ, ವೈದ್ಯಕೀಯ ವಿಚಕ್ಷಣತೆಯಿಂದ ಮೃತರ ಸಂಬಂಧ, ವರದಿಯ ವರ್ಷ, ತೆರಬೇಕಾಗಿ ಬಂದ, ಬಹು ಸಾಮಾನ್ಯ ಮೌಲ್ಯದ ೨ ಕ್ಲೈಮುಗಳ ರೂಪಾಯಿ ೨೦೧೦;—ಇವಿಷ್ಟು ಈ ಸಂಸ್ಥೆಯ ಸ್ಥಿರ ಅಭಿವೃದ್ಧಿಯ ಹೆಗ್ಗುರುತುಗಳಾಗಿವೆ. ಮೇಲಾಗಿ, ಗತವರ್ಷದ ಪ್ರಥಮ ಮೂಲ್ಯವೇತನದ ಫಲವಾಗಿ,—ಪಾಲಿಸಿದಾರರಿಗೆ ಅನೇಕ ಜೀವವಿಮಾ

ಮಂಗಳೂರು

ಮಂಗಳೂರು ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಗಳ ಸಮಯ ಬದಲಾವಣೆ:—ಜುಲ್ಯಾ ತಿಂಗಳ ೧ರಿಂದ ಜೆಪ್ಪು ಮತ್ತು ಬೋಳೂರಲ್ಲಿರುವ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಗಳ ಪುಕೃತ ಚಾಲ್ತಿಯಲ್ಲಿ ಇರುವ ೪ರಿಂದ ೬ರ ವರೆಗಿನ ಸಮಯವನ್ನು ಸಾಯಂಕಾಲ ೫½ ಗಂಟೆಯಿಂದ ೫½ಗೆ ಬದಲಾಯಿಸಲ್ಪಡುವುದು. ಬೆಳಿಗ್ಗಿನ ಸಮಯವು ಎಂದಿನಂತೆ ೪½ ಗಂಟೆಯಿಂದ ೧೦ರ ತನಕ ಇರುವುದು.

ಶ್ರೀ ಜ್ಞಾನೋದಯ ಸಮಾಜ ಮಂದಿರಲ್ಲಿ ಕಳೆದ ಆದಿತ್ಯವಾರ ಒಂದು ಆದರ್ಶ ವಿವಾಹವು ಜರಗಿತು. ವರನು—ಮುಂಬಯಿಯಲ್ಲಿ ವ್ಯಾಯಾಮ ವಿದ್ಯಾವಿಶಾರದರಾಗಿರುವ ಶ್ರೀಮಾನ್ ಪ್ರೊಫೆಸ್ಸರ್ ಡಿ. ಟಿ. ಸುವರ್ಣರು, ವಧುವು—ಕಳೆದ ಸತ್ಯಾಗ್ರಹ ಚಳವಳಿದಲ್ಲಿ ಭಾಗವಹಿಸಿ ಕಾರಾಗೃಹಶಿಕ್ಷೆಯನ್ನನುಭವಿಸಿದ್ದ ಹೊನ್ನಗೆ ಬಜಾರದ ಶಾಂತಮ್ಮ ಎಂಬ ಕನ್ನಡಿಕೆಯು. ಶ್ರೀಯುತರುಳಿ. ವೋಹನಪ್ಪ ತಿಂಗಳಾಯರು ಇವರ ವಿವಾಹಸಂಸ್ಕಾರವನ್ನು ವೈದಿಕ ವಿಧಿ ಪ್ರಕಾರ ಜರಗಿಸಿ ದಾಂಪತ್ಯಜೀವನದ ಕುರಿತು ಉಪದೇಶವನ್ನು ಕೊಟ್ಟರು. ಈ ವಿವಾಹಸಮಾರಂಭಕ್ಕೆ ಐನೂರಕ್ಕಿಂತ ಹೆಚ್ಚು ಮೊಗವೀರ ಸ್ತ್ರೀಪುರುಷರೂ, ಮಾನ್ಯ ಗೃಹಸ್ಥರೂ, ಮಾನ್ಯ ಮಹಿಳೆಯರೂ ದಯಮಾಡಿಸಿದ್ದರು. ಅಂತ್ಯದಲ್ಲಿ ವರವಧೂಪ್ಪಿಣೆಯು ಹಾವಳಿಯ ಕುರಿತು ಶ್ರೀ. ತಿಂಗಳಾಯರು ಭಾಷಣ ಕೊಟ್ಟ್ರು ಸಂತೆಯಲ್ಲಿ ಕೋಣ, ಕುರಿ, ಕೋಳಿಗಳ ಕ್ರಯ-ವಿಕ್ರಯವಾಗುವಂತೆ ವಿವಾಹದ ಸಂತೆಯಲ್ಲಿ ಈಗಿನ ತರುಣರು ತಮ್ಮನ್ನು ಮಾರಾಟಕ್ಕಿಟ್ಟು ಬೆಲೆ ನಿಶ್ಚಯಿಸಿಕೊಳ್ಳುವುದು ಕಾಡಾಡಿತನವೆಂದು ಹೇಳಿ, ಏನೊಂದೂ ವರದಕ್ಷಿಣೆಯನ್ನು ಅಪೇಕ್ಷಿಸದೆ ಇಂದು ವಿವಾಹವಾದ ಶ್ರೀ. ಸುವರ್ಣರ ಉದಾಹರಣೆಯನ್ನು ಯುವಕರೆಲ್ಲರೂ ಅನುಸರಿಸಬೇಕೆಂದು ಕೇಳಿಕೊಂಡರು.

ಈ ವಿವಾಹಸಮಾರಂಭವು ಕೇವಲ ಪಾನಕ ಫಲಾಹಾರಗಳಿಂದ ಕೊನೆಗಂಡಿತು.

'ಕಂಠೀರವ'ನ ಇದೇ ತಿಂಗಳ ತಾ. ೧೬ನೇ ಸಂಚಿಕೆಯಲ್ಲಿ ಪ್ರಕಟಿಸಿದ, ಗೋರಕ್ ವಿದ್ಯಾಯನ ಸಮಿತಿಯ ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಜಿಯವರ ಸ್ಥಾನಕ್ಕೆ ಆರಿಸಲ್ಪಟ್ಟ ಮಿ. ಬಿ. ಪೈ೦ಬಯ್ಯ, ಮಿ. ಯವ್. ನ. ನಾರಾಯಣ, ಮಿ. ಕೆ. ಗಣಪತಿ, ಈ ಮೂರು ಜನರಿಗೆ ತತ್ಕಾಲಕ್ಕೆ ಮೇಲಿನ ಈ ಗೌರವ ಕಾರ್ಯಸ್ಥಾನಗಳನ್ನು ವಹಿಸಿಕೊಳ್ಳುವರೆ ಅಶಾಧ್ಯವಾದುದರಿಂದ ಅವರ ಸ್ಥಾನಕ್ಕೆ ಬೇರೆಯವರನ್ನು ಆರಿಸಿ ಅವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾದೀತು.

ಮುಲ್ಕಿಯಲ್ಲಿ ಹೈಸ್ಕೂಲಿನ ೬ನೆಯ ಫಾರ್ಮನ್ನು ತೆರೆಯಲು ಸರಕಾರದಿಂದ ಅನುಮತಿ ಸಿಕ್ಕಿ ವಿದ್ಯಾರ್ಥಿಗಳು ಒಮ್ಮಿಗೆ ಪ್ರವಾಹದಂತಾಯಿತು. ಆದರೆ, ಅಲ್ಲಿನ ಹಾಯರ್ ಎಲಿಮೆಂಟರಿ ಕ್ಲಾಸುಗಳನ್ನು ರದ್ದು ಮಾಡಬೇಕೆಂದೂ, ಹುಡುಗಿಯರ ಶಾಲೆಯನ್ನು ಇನ್ನೆಲ್ಲಿಗಾದರೂ ವರ್ಗಾಯಿಸಬೇಕೆಂದೂ ಸರಕಾರವು ಅಪ್ಪಣೆ ಕೊಟ್ಟಿರುವುದಾಗಿಯೂ ತಿಳಿದುಬರುತ್ತಿದೆ. ಈ ಸಂದರ್ಭದಲ್ಲಿ, ನಮ್ಮ ಡಿ॥ ಬೋ॥ ಪ್ರೆಸಿಡೆಂಟರು, ಅಲ್ಲಿ ಈಚೆಗೆ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ, ಈ ಶಾಲೆಯು ಪೂರ್ವೋತ್ತರ ಚರಿತ್ರೆಯನ್ನು ಇದ್ದಂತೆ ವಿವರಿಸಿ, ಹಿಂದಿನ ಕಥೆ,—ಉಪಕಥೆಗಳನ್ನು ಬಹಿರಂಗ ಪಡಿಸುವುದರೊಡನೆ, ಇಂದಿನ ಪ್ರಯತ್ನಗಳೇನೆಂದೂ ನಿರೂಪಿಸಿ, ತನ್ಮೂಲಕ ಶಾಲೆಯು ಹಿತಚಿಂತನೆಯಲ್ಲಿ ತಮಗಿರುವ ಅತಿಶಯ ಶ್ರದ್ಧೆಯನ್ನು ಪ್ರದರ್ಶಿಸಿರುವರೆಂದೂ, ಆ ಶಾಲೆಗೆ ಹೆಚ್ಚಿನ ಸರಕಾರದ ಗ್ರಾಂಟೇನೂ ದೊರೆಕದೆಂದೂ, ಅಲ್ಲದೆ, ಈ ಶಾಲೆಯಲ್ಲಿ ಗಣಿತ ವಿಷಯವನ್ನೂ ತೆರಿಸಬೇಕು; ಫ್ಯಾಲಾಲಜಿಯನ್ನೇ ಎಲ್ಲ ವಿದ್ಯಾರ್ಥಿಗಳೂ ತೆಗೆದುಕೊಳ್ಳಬೇಕೆಂದರೆ ಸಾಧ್ಯವಲ್ಲ, ಎಂಬೀ ಪರಿಸ್ಥಿತಿಯು ಕೆಲವರ ದೂರಿನ ಅರಿಕೆಯು, ನಮ್ಮ ಪ್ರೆಸಿಡೆಂಟರ ಬಳಿಗೆ ಬಂದಿರುವುದೆಂದೂ ತಿಳಿದುಬರುತ್ತಿದೆ.

(೭ನೇ ಪುಟಕ್ಕೆ ಮುಂದರಿಸಿಯದೆ.)

ಸಂಸ್ಥೆಗಳು ಹಂಚಲು ಸಾಧ್ಯವಾಗದೆ ಹೋದ,—ಯಥಾಯೋಗ್ಯ ಬೋನಸ್ಸನ್ನೂ, ಪಾಲುದಾರರಿಗೆ ತೃಪ್ತಿಕರವಾದ ಲಾಭಾಂಶವನ್ನೂ ಈ ಸಂಸ್ಥೆ ಹಂಚಿ, ಹಲವು ಪ್ರಾಮುಖ್ಯ ಪತ್ರಿಕೆಗಳ ಪ್ರಶಂಸೆಗೂ, ಮಹಾಜನರ ಮೆಚ್ಚಿಕೆಗೂ ಪಾತ್ರವಾಗಿರುವುದೂ; ವಿಜೆಸ್ಸಿಯ ಸ್ಥಾಪನೆಯ ಕಾರ್ಯವು, ವರದಿಯ ವರ್ಷದಲ್ಲಿಯೂ, ಆನಂತರವೂ, ಭರದಿಂದ ಸಾಗಿ, ತಮಿಳುನಾಡು, ಪಂಜಾಬು, ದಿಲ್ಲಿ, ಸಂಯುಕ್ತ ಪ್ರಾಂತ ಮೊದಲಾದ ಉತ್ತರ-ದಕ್ಷಿಣ ಹಿಂದುಸ್ಥಾನಗಳೆಲ್ಲೆಲ್ಲ ಹಲವೆಡೆಗಳಲ್ಲಿ ಈ ಸಂಸ್ಥೆಯ ಪ್ರಾತಿನಿಧ್ಯ ಮುಂಬರಿಯುತ್ತಿರುವುದೂ. ಈ ಕಂಪೆನಿ ಮುಂದಿನ ವೃದ್ಧಿಯ ಶುಭಚಿಹ್ನೆಯಾಗಿದೆ. ನಿಯು ಉತ್ತರೋತ್ತರವನ್ನು ಪಡೆದು, ಹೆಚ್ಚಾಗಿ ವಿಮಾ ವ್ಯವಹಾರವನ್ನು ಬ ನಡೆಯಿಸಿ ಕನ್ನಡಿಗರು ಹೆಮ್ಮೆಗೊಳ್ ಯಾಗಿ ಪರಿಣಮಿಸಲೆಂದು ಹಾರೈ

ವಿದೇಶ

ಪ್ರಿವಿ ಕೌನ್ಸಿಲಿನ ಜೂಡಿಶಿಯಲ್ ಕಮಿಟಿಯ ಮೆಂಬರರಲ್ಲೊಬ್ಬರಾದ ಸರ್ ಶಾದಿ ಲಾಲ ರವರು ತಮ್ಮ ಹುದ್ದೆಗೆ ರಾಜಿನಾಮೆಯನ್ನಿತ್ತು ಹಿಂದೂ ಸ್ಥಾನವ ರಾಜಕೀಯ ರಂಗಕ್ಕೆಳೆಯಲು ಯೋಚಿಸುತ್ತಿರುವರಂತೆ.

ಜಿಬೂಟಿಯಿಂದ ಬಂದಿರುವ ವಾರ್ತೆಯ ಮೇರೆಗೆ ಇಟೆಲಿಯವರು ಅಬಿಸೀನಿಯದ ಮುಖ್ಯ ಪಟ್ಟಣಗಳನ್ನು ಮಾತ್ರ ವಶಪಡಿಸಿಕೊಂಡಿರುವರು. ಒಳ ಪ್ರದೇಶಗಳಲ್ಲಿ ಅವರ ಅಧಿಕಾರವೇನೂ ಇರುವುದಿಲ್ಲ.

ಟಿಂಟ್ಸಿನ್‌ನ ಜಪಾನಿ ಪತ್ರಿಕೆಗಳ ಮೇರೆಗೆ ಚೀನಿಯರ ಕಸ್ಟಮ್ಸ್ ಹಡಗವೊಂದು ಚಿಕೊ ಬಳಿ ಜಪಾನಿ ಹಡಗೊಂದರ ಮೇಲೆ ಗುಂಡನ್ನು ಹಾರಿಸಿದೆ.

ಪಾಲೆಸ್ತೀನದಲ್ಲಿ ಎಮರ್ಜೆನ್ಸಿ ರೆಗ್ಯೂಲೇಷನನ್ನು ಬಲಪಡಿಸಿದ್ದು, ಅದರ ಮೇರೆಗೆ ಯಾರಾದರೂ ಕೋವಿ, ಮದ್ದು, ಬಾಂಬ್ ಇತ್ಯಾದಿ ಅಸ್ತ್ರಗಳನ್ನು ಇಟ್ಟುಕೊಂಡಲ್ಲಿ ಆಜನ್ಮಶಿಕ್ಷೆಗೊಳಪಡಿಸಲಾಗುವುದು.

ವಾಸಿಸಲು ದೇಶವಿಲ್ಲದ ೩೫೦ ಸಾವಿರ ಮಂದಿ ಗಂಡಸರು, ಹೆಂಗಸರೂ, ಮಕ್ಕಳೂ ಸೇರಿ, ತಮಗೊಂದು ದ್ವೀಪವನ್ನು ಕ್ರಯಕ್ಕೆ ಕೊಂಡು ಕೊಡಬೇಕೆಂದು ಜನಾಂಗಸಂಘಕ್ಕೊಂದು ಅರ್ಜಿ ಕಳುಹಿಸಿರುವರು.

ಜನಾಂಗಸಂಘದ ಮುಂದಣ ಅಧಿವೇಶನಗಳಲ್ಲಿ ಇಟೆಲಿಯು ಇಥಿಯೋಪಿಯವನ್ನು ತನ್ನ ರಾಜ್ಯಕ್ಕೆ ಕೂಡಿಸಿಕೊಂಡಿರುವದರ ವಿಷಯವಾಗಿ ಇಂಗ್ಲಾಂಡು ಪ್ರಸ್ತಾಪವನ್ನೆತ್ತುವದಿಲ್ಲವಂತೆ.

ಚೀನಿಯರ ಕಸ್ಟಮ್ ಖಚೇರಿಯೊಂದು ಜಪಾನಿಯರ ಮತ್ತು ಕೊರೆಯದವರ ಗುಂಪೊಂದರಿಂದ ಮುತ್ತಲ್ಪಟ್ಟಿತು.

ನಾವಿಕರ ಮುಷ್ಕರದಿಂದಾಗಿ ಮಾರ್ಸೆಲಿಸ್ ಬಂದರದಲ್ಲಿ ಹಡಗುಚಲಾವಣೆಗೆ ಸ್ವಲ್ಪ ಅಭ್ಯಂತರ ವಾಯಿತು.

ಕ್ವೀನ್ ಮೇರಿ ಹಡಗವು ನ್ಯೂಯೋರ್ಕಿಗೆ ತನ್ನ ಎರಡನೇ ಪ್ರಯಾಣವನ್ನು ಸಾಂಗವಾಗಿ ಜರಗಿಸಿತು.

ರಾಡಿಕಲ್ಸ್ ಸಂಬಂಧವಾದ ಅಂತರ್ರಾಷ್ಟ್ರೀಯ ಪರಿಷತ್ತು ಪೊಂಟ್ರಿಯಾದಲ್ಲಿ ಆರಂಭವಾಗಿಯಿದೆ.

ಬೆಲ್ಜಿಯಮ್ಮಿನಲ್ಲಿ ನಡೆಯುತ್ತಿದ್ದ ಮುಷ್ಕರವು ಶಿಲ್ಲಿಸಲ್ಪಟ್ಟಿದೆ.

ಪಾಲೆಸ್ತೀನದ ದಂಗೆಯು ಜೋರಾಗುತ್ತ ಬರುತ್ತಿದೆ. ಜೆರೂಸಲೇಮಿನಿಂದ ಹೊರಟಿದ್ದ ರೈಲುಬಂಡಿಯೊಂದು ಮಾರ್ಗದಲ್ಲಿ ಅಡ್ಡಕಟ್ಟಲ್ಪಟ್ಟು ಅದರ ಕಾವಲಿಗಿದ್ದ ಸೈನಿಕರು ಜಖಂಗೊಂಡಿರುವರು.

ಹಿಂದೀ ಕ್ರಿಕೆಟ್ ಆಟಗಾರರಿಗೆ ಬುಧವಾರದಿನ ಹೌಸ್ ಆಫ್ ಕೋಮನ್ಸಿನಲ್ಲಿ ಔತಣವಿತ್ತು. ಪ್ರಧಾನ ಬೊಲ್ಡ್‌ವಿನ್‌ರವರು ಶ್ರೇಯಸ್ಸನ್ನು ಕೋರಿದರು. ಶುಕ್ರವಾರ ದಿನ ಈಗ ಸರ್ ಬಿರುದಾಂಕಿತರಾಗಿರುವ ಮಹಾರಾಜಕುಮಾರರು ತಮ್ಮ ಆಟಗಾರ ರೊಡನೆ ಸವ್ಯಾಟರವರ ಸಂದರ್ಶನಲಾಭ ಹೊಂದುವರು.

ಕಾಮನ್ಸ್ ಮಂದಿರದಲ್ಲಿ ಮಿ. ಎಟ್ಲೀಯವರು ಸರಕಾರದ ಮೇಲೆ ತಂದ ಸೆನ್ಸರ್ ಓಟಿನ ಠರಾವು ತಿರಸ್ಕೃತವಾಯಿತು.

ಪ್ಯಾಲಸ್ತೈನಿನಲ್ಲಿ ಬ್ರಿಟಿಷ್ ಸೋಲ್ಜರರಿಬ್ಬರನ್ನು ಕೊಂದೂ, ಕೆಲವರನ್ನು ಗಾಯಪಡಿಸಿಯೂ ಇರುವ ಸಂಬಂಧ ಜರುಸಲೇಮ್-ಜಾಫಾ ರಸ್ತೆಯಲ್ಲಿ, ಸುಮಾರು ೧೬ ವೈಲುಗಳ ಪ್ರದೇಶದಲ್ಲಿ ಕರ್ಫ್ಯೂ ಆರ್ಡರ್ ಜಾರಿಗೆ ಬಂದಿದೆ.

ಮಾಜೀ ಅಬಿಸೀನಿಯದ ಚಕ್ರವರ್ತಿಗಳು ಜನಾಂಗಸಂಘದ ಸಭೆಯಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳಬಹುದಾಗಿ ವಾರ್ತೆ ಇದೆ.

ಅಮೇರಿಕದಲ್ಲಿ ಅನೇಕ ಬಗೆಯ ವಿಜ್ಞಾನ ಶೋಧನೆಗಳನ್ನು ನಡೆಯಿಸಿದ ವಿಖ್ಯಾತ ಪಂಡಿತನಾದ ಮಿ. ಡಿ. ಎಂ. ಮೂರರನ್ನು ಯಾರೋ ಕೊಲೆ ಮಾಡಿದ್ದಾರೆ.

ನಮ್ಮ ಚಕ್ರವರ್ತಿಗಳ ಜನ್ಮೋತ್ಸವದ ಆಚರಣೆಯು ಸಾಮ್ರಾಜ್ಯದ ಎಲ್ಲ ಭಾಗಗಳಲ್ಲಿಯೂ ಅತ್ಯಂತ ಉತ್ಸಾಹಪೂರ್ವಕವಾಗಿ ನೆರವೇರಿಸಲ್ಪಟ್ಟಿತು.

ನಮ್ಮ ಇಂಡಿಯದ ಕ್ರಿಕೆಟ್ ಟೀಮಿನೊಡನೆ ವಿಲಾಯಿತಿಗೆ ತೆರಳಿದ್ದ ಪ್ರಸಿದ್ಧ ಆಟಗಾರರಾದ ಶ್ರೀ. ಅಮರನಾಥರು, ಟೀಮಿನ ಶಿಸ್ತಿಗೆ ಸರಿಯಾಗಿ ನಡೆದುಕೊಳ್ಳಲಿಲ್ಲವೆಂದೂ, ಆ ರೀತಿ ಮಾಡಬಾರದಾಗಿ, ಪದೇ ಪದೇ ಅವರನ್ನು ಎಚ್ಚರಿಸಿದರೂ ಅವರಾ ಮಾತನ್ನು ಮನ್ನಿಸಲಿಲ್ಲವೆಂದೂ ಕೊನೆಗೆ ಅವರನ್ನು ಇಂಡಿಯಕ್ಕೆ ಹಿಂದಿರುಗಿ ಕಳುಹಬೇಕಾಯಿತೆಂದೂ ಟೀಮಿನ ವೇತ್ತೆಗಳಾದವರು ಹೇಳುತ್ತಿದ್ದಾರೆ. ಹಾಗೇ ಅಮರನಾಥರು ತಮ್ಮ ಹೇಳಿಕೆಯನ್ನೂ ಕೊಟ್ಟಿದ್ದಾರೆ. ಒಟ್ಟಿನಲ್ಲಿ ನಮ್ಮವರಲ್ಲಿ ಐಕ್ಯವಿಲ್ಲವೆಂಬುದು ಇದರಲ್ಲಿಯೂ ಕಂಡುಬರುತ್ತಿದೆ.

ಹಿಂದೂದೇಶ

ಸಾಂತಾ ಕ್ರೂಜಿನಲ್ಲಿ ಹೊಸತಾಗಿ ತೆರೆಯಲ್ಪಟ್ಟಿರುವ ಇಗರ್ಜಿಗೆ, ಪೋಪರವರು ತಮ್ಮ ಶುಭಾಶೀರ್ವಾದಗಳನ್ನು ಕೇಬಲ್ ಮೂಲಕ ಕಳುಹಿಸಿರುವರು.

ಕಳೆದ ಶನಿವಾರ ಶಾಹಿದ್‌ಗಂಜ್ ಮಸೀದಿಯ ಸಂಬಂಧವಾಗಿ ಲಾಹೋರಿನ ಮುಸ್ಲಿಮರು ನಡೆಸಿದ ಸಭೆಯು ತುಂಬಾ ಗಲಭೆಯಿಂದ ಕೂಡಿತ್ತು.

ಸರ್ ಫೆರೋಝ್ ಖಾನ್ ನೂನ್‌ರವರು ತಾನು ಲಂಡನಿನಲ್ಲಿ ಇಂಡಿಯದ ಹ್ಯಾ ಕಮಿಶನರ್ ಆಂದರೆ ಹಿಂದೂಸ್ಥಾನದ ಜನರ ಏಜೆಂಟವೆಂದು ಕರಾಚಿಯಲ್ಲಿ ಹೇಳಿಕೊಂಡಿರುವರು.

ರೂರಿಯಾ ಇದ್ದಲ ಗಣಿಗಳಲ್ಲುಂಟಾದ ಬಿಂಕಿಯ ಸಂಬಂಧವಾಗಿ ಇಂಡಿಯಾ ಸರಕಾರದವರು ಇದ್ದಲ ಗಣಿಗಳ ವಿಷಯವಾಗಿ ಇನ್ನಷ್ಟು ಉತ್ತಮ ವಿಧಾನಗಳನ್ನನುಸರಿಸುವಂತೆ ಮಾಡುವದಾಗಿದೆ.

ಮಿರತ್ ಪೋಲೀಸಿನವರು, ಹಿಂದೂಗಳ ಗುಂಪೊಂದು ಅವರ ಮೇಲೆ ಕಲ್ಲೆಸೆದುದಕ್ಕಾಗಿ ಲಾಠಿ ಪ್ರಯೋಗವನ್ನು ಮಾಡಬೇಕಾಯಿತು.

ಸೌತ್ ಆಫ್ರಿಕದ ಪರವಾಗಿ ಬರುವ ಸಪ್ಟಂಬರದಲ್ಲಿ ಹಿಂದೂಸ್ಥಾನರನ್ನು ಸಂದರ್ಶಿಸಲಿರುವ ಸಮಿತಿಯ ಸದಸ್ಯರ ಹೆಸರುಗಳು ಪ್ರಕಟವಾಗಿವೆ.

ಮುಂಬಾಯಿಯಲ್ಲಿರುವ ಇಟೆಲಿಯ ಕೊನ್ಸುಲ್ ಜನರಲರವರು ಕೂಡಲೆ ಇಟೆಲಿಗೆ ಬರತಕ್ಕುದೆಂದು ತಂತಿಯು ಬಂದಿರುತ್ತದೆ.

ಸಾರ್ವಭೌಮರ ಜನ್ಮದಿನದ ಬಿರುದುಗಳ ಪಟ್ಟಿಯು ಪ್ರಕಟವಾಗಿಯಿದೆ.

ಕಲ್ಲಿಕೋಟೆಯು ಪ್ರಾಂತದ ಪಾಂಡಿಕಾಡಿನ ಒಂದು ಎಲಿಮೆಂಟರಿ ಶಾಲೆಯ ಕೊರಾನ್ ಉಪಾಧ್ಯಾಯನಾದ ಉಣ್ಣಿಯನ್ ಮುಸ್ಲಿಯಾರ್ ಎಂಬಾತನು ಅದೇ ಶಾಲೆಯ ಹೆಡ್ಮಾಸ್ಟರ್ ತರಗಲ್ ಎಂಬವರೊಡನೆ, ತನ್ನ ಸಂಬಳದ ಬಾಕಿಗಾಗಿ ಜಗಳವಾಡಿ ಉದ್ರೇಕಗೊಂಡು ಹೆಡ್ಮಾಸ್ಟರರನ್ನು ಕೊಂದ ತಪ್ಪಿಗೆ ಕಲ್ಲಿಕೋಟೆಯು ಸೆಷನ್ ಜಡ್ಜರು ದ್ವೀಪಾಂತರನಾಸನೆಯನ್ನು ಮುಸ್ಲಿಯಾರರಿಗೆ ವಿಧಿಸಿದ್ದಾರೆ.

ಅಲ್ಲಪ್ಪಿ ಪ್ರಾಂತದ ಒಂದು ಹಳ್ಳಿಯಲ್ಲಿ ತಿರುನಿ ಒಂದೇ ಮನೆಯಲ್ಲಿ, ಒಮ್ಮೆಗೇ. ಅಲ್ಲಿ ಪಾಂಡರಮ್ ಒಬ್ಬನು, ಅವನ ಎರಡನೆಯ ಹೆಂಡತಿ, ಇವರ ಒಬ್ಬ ಮಗ ಇಷ್ಟು ಮಂದಿಯೂ ಖೂನಿಯೋಗಿದ್ದಾರೆ. ಕೊಂದವನು ಮೃತನ ಮೊದಲನೆ ಹೆಂಡತಿಯ ಮಗನೆಂದು ಅವನ ಖೈದಾಗಿದೆ.

ಕರ್ನಾಟಕ

ಶ್ರೀಮನ್ಮಹಿಸೂರು ಮಹಾರಾಜರವರು, ಇಂಗ್ಲೆಂಡಿಗೆ, ಪರಿವಾರಸಹಿತ ಹೊರಟಿರುವರು.

ಬೆಂಗಳೂರು, ಅಲ್ಲಿಂದ ಮದ್ರಾಸು ಇಲ್ಲಿಗೆ ದಯೆ ಮಾಡಿಸಿ ಅಲ್ಲಿಂದ ಪೂನಾ—ಬೊಂಬಯಿಗೆ ತಲುಪಿ, ನಾಳೆ ಬೊಂಬಯಿಯಲ್ಲಿ ಹಡಗು ಹತ್ತುವರು.

ಸುಮಾರು ೧೧ ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಲ್ಪಟ್ಟಿರುವ ರಾಯಚೂರಿನ ನೀರು ಸರಬರಾಯಿಯ ಹೊಸ ಕಾರ್ಯಾರಂಭವನ್ನು ನೈಜಾಂ ರವರು ನೆರವೇರಿಸಿದರು. ಇವರು ಸ್ಪೆಶಲ್ ಟ್ರೈನಿನಲ್ಲಿ ಬಂದಿದ್ದರು. ಪುರಪ್ರಮುಖರೂ, ತಾಲೂಕ್ದಾರರೂ, ಸುಬೇದಾರರೂ ನೈಜಾಂರವರನ್ನು ಆದರಪೂರ್ವಕವಾಗಿ ಸ್ವಾಗತೀಕರಿಸಿದರು. ಮುನಿಸಿಪಾಲಿಟಿಯವರು ಮಾನಪತ್ರವನ್ನರ್ಪಿಸಿದರು.

ಹೊಸಪೇಟೆ ಮತ್ತದರ ಸುತ್ತುಮುತ್ತಲಿನ ಕೆಲವು ಹಳ್ಳಿಗಳಲ್ಲಿ ಕಲ್ಲಾಟಿಕೆಯು ನಡೆಯುತ್ತಾ ಇದೆ. ಪೋಲೀಸಿನವರು ತನಿಖೆ ನಡಿಸುತ್ತಿರುವರು.



ಸಂಡೂರಿನ ರಾಜರವರು ಪಟ್ಟವನ್ನೇರಿದ ದಿನಾಚರಣೆಯು ತಾ. ೨೦ರಲ್ಲು ಸಂಡೂರಿನಲ್ಲಿ ಸಂಭ್ರಮ ಪೂರ್ವಕವಾಗಿ ಆಚರಿಸಲ್ಪಟ್ಟಿತು. ಪ್ರಾತಃಕಾಲದಲ್ಲಿ ಗಾಂದಿ ಪೂಜೆಯಿದ್ದಿತು. ಸಾಯಂಕಾಲದಲ್ಲಿ ಸಡ್ಡೂರ್ ದರ್ಬಾರ್ ನಡೆಯಿತು. ಚಿಕ್ಕ ಸತ್ಕಾರ ಕೂಟವೊಂದೂ ಇದ್ದಿತು.

ಬಳ್ಳಾರಿ ಜಿಲ್ಲೆಯಲ್ಲಿ ಮಲೇರಿಯಾ ಸಂಶೋಧನಾಕಾರ್ಯವನ್ನು ನಡೆಸಲೋಸುಗ ಆಲೋಚಿಸಲಿಕ್ಕಾಗಿ ಮಲೇರಿಯಾ ಆಫೀಸರರಾದ ಮಿ. ಡಿ. ಕೆ. ವಿಶ್ವನಾಥನ್‌ರವರು ಬಂದಿರುವರು.

ಮೈಸೂರು ದಿವಾನರಾದ ಸರ್. ಮಿರ್ಜಾ ಇಸ್ಮಾಯೇಲ್‌ರವರು, ಬೆಂಗಳೂರಿನ ಮಿಂಟೋ ಅಪ್ಪ

ತ್ರಿಯ ವಠಾರದಲ್ಲಿ ವೆಲ್‌ಫೇರ್ ಕಟ್ಟಡಗಳ ಶಂಕು ಸ್ಥಾಪನೆಯ ಮಹೋತ್ಸವವನ್ನು ನೆರವೇರಿಸಿದರು.

ಅನಂತಪುರ ಜಿಲ್ಲಾ ಬೋರ್ಡಿನವರು ಕಲ್ಯಾಣದುರ್ಗ ಮಿಡ್ಲ ಸ್ಕೂಲಿನಲ್ಲಿ IV ಫಾರ್ಮನ್ನು ತೆರೆಯಲು ಆಪೇಕ್ಷಿಸಿತ್ತಿರುವರು. ಈ ಮಿಡ್ಲ ಸ್ಕೂಲನ್ನು ಹೈ ಸ್ಕೂಲು ಮಾಡುವದಾದರೆ ರೂ. ೧೦,೦೦೦ವನ್ನು ಕೊಡುವದಾಗಿ ಕಲ್ಯಾಣದುರ್ಗದ ಕರಣಂ ಚಿಕ್ಕಪ್ಪನವರು ವಾಗ್ದಾನವಿತ್ತಿರುವರು. ಇದನ್ನು ಜಿಲ್ಲಾ ಬೋರ್ಡಿನವರು ಸ್ವೀಕರಿಸಿರುವರು.

HYDROCELE

CURE FOR HYDROCELE TUMOUR Hernia, Varicocele, Elephantiasis and all swelling diseases. Guaranteed to cure radically by external application. Free from injurious drugs. Highly recommended by medical authorities. Price complete course 8 oz. Rs. 10, 2 oz. Rs. 3. Postage extra.

Send stamp for reply.

Alliance Laboratory P. O., Amherst Street, CALCUTTA.

8, 26-6.

ದ. ಕನ್ನಡ

ಮೂಡಬಿದ್ರೆ:—ಅನೇಕ ಊರುಗಳಲ್ಲಿ ತಿರುಗಾಡಿ ಬಂದ ಮಾಸ್ಟರ್ ಪಿ. ಕೆ. ಕಾರ್ನಾಡಕಾರರ ಸಂಗೀತಕಚೇರಿಗಳು ನಡೆದುವು. ೧ನೇದು ತಾ. ೫ರಲ್ಲು ಗೌಡಸಾರಸ್ವತ ಬ್ರಹ್ಮವೃಂದದ ಶ್ರೀ ಕಾಶೀಮಠಾಧೀಶರಾದ ಭೂತಪೂರ್ವ ಪರಮಗುರು ಶ್ರೀಮತ್ ವರದೇಂದ್ರ ತೀರ್ಥ ಶ್ರೀಪಾದಂಗಳವರ ಪುಣ್ಯತಿಥಿಯ ಆರಾಧ್ಯ ದಿವಸ ಇಲ್ಲಿಯ ಬೇಂಕರ ಅನಂತ್ರಾಯ ಪ್ರಭುಗಳ ಪ್ರೋತ್ಸಾಹದಿಂದ ಹೊಸ ವೆಂಕಟರಮಣ ದೇವಸಟ್ಟಿನದಲ್ಲಿ ಜರುಗಿತು. ೨ನೇ ಜಲ್ಸವು ನಮ್ಮನ್ನಾಳುವ ಎಂಟನೇ ಎಡ್ವರ್ಡ್ ಚಕ್ರವರ್ತಿಗಳ ಜನ್ಮದಿನೋತ್ಸವದಂದು ತಾ. ೩ರಲ್ಲು ಇಲ್ಲಿಯ ಡಾನಸಾಲೆಯಲ್ಲಿ ಮಠದ ಶ್ರೀ ಚಾರುಕೀರ್ತಿ ಯತಿವರ್ಯರ ಪ್ರೋತ್ಸಾಹದಿಂದ ಬಹು ಯಶಸ್ವಿಯಾಗಿ ಜರುಗಿತು. ಮಾಸ್ಟರ್ ಕಾರ್ನಾಡಕಾರರು ಹೀಗೆಯೇ ಸಂಗೀತಕಲೆಯಲ್ಲಿ ಕೀರ್ತಿ ಪಡೆಯಲಿ ಎಂದು ಹಾರೈಕೆ.

(೬ನೇ ಪುಟದಿಂದ)

ಹೆಬ್ರಿ ಪ್ರಾಂತದಲ್ಲಿ ಹುಲಿಗಳ ಕಾಟ ವಿಶೇಷವಾಗಿ ಮನುಷ್ಯರ ಅನೇಕ ಪ್ರಾಣಗಳು ನಷ್ಟವಾಗಿಯೂ, ಆಗುತ್ತಲೂ ಇವೆ. ಇದುವರೆಗೆ ಹುಲಿಗಳನ್ನು ಕೊಲ್ಲಲು ನಡೆಸಿದ ಯತ್ನಗಳು ವಿಫಲವಾಗಿವೆ. ಆದುದರಿಂದ, ಹೆಬ್ರಿ ಗ್ರಾಮದ ಅಸುಪಾಸಿನಲ್ಲಿ, ಗ್ರಾಮಸ್ಥರು, ರಿಜರ್ವ್ ಕಾಡುಗಳಲ್ಲಿ, ಫಾರೆಸ್ಟ್ ರೇಂಜ್ ಆಫೀಸರರ ಸಮಕ್ಷಮ, ಜುಲ್ಮಾ ತಾರೀಕು ೨೮ರಿಂದ ತಾರೀಕು ೭ರ ವರೆಗೆ ಹುಲಿಗಳ ಬೇಟೆಯಾಡಬಹುದಾಗಿದೆ. ಅಲ್ಲದೆ ಆದೇ ಆಫೀಸರರು ಶಿಕಾರಿ ಪಾರ್ಟಿಗಳನ್ನೂ ಏರ್ಪಡಿಸುವವರಾಗಿದ್ದು, ಮಂಗಳೂರಿನ ವಕೀಲ್ ಮಿ. ಸಿ. ಎಲ್. ಲೋಬೋರವರೂ ಈ ಶಿಕಾರಿಯಲ್ಲಿ ಭಾಗವಹಿಸುವವರಾಗಿದ್ದಾರೆ. ಶಿಕಾರಿ ಪಂಗಡವು ಬರುವ ತಿಂಗಳಲ್ಲಿ ಬೇಟೆಗೆ ಹೊರಡುವುದಾಗಿದೆ. ಬೇಟೆಯಲ್ಲಿ ಹುಲಿ ಮತ್ತೂ ಕಿರಬಗಳನ್ನು ಮಾತ್ರ ಕೊಲ್ಲಬಹುದು. ಕೊಂದವರಿಗೆ, ನಿಯಮದಂತೆ, ಬಹುಮಾನವಿದೆ; ಮತ್ತೂ ಈ ಶಿಕಾರಿಯಲ್ಲಿ ಸಹಾಯ ಮಾಡಿ, ಫೈಯರ್‌ಸ್ಟೈಯರ್‌ಗಳನ್ನು ತೋರುವವರಿಗೆ, ಕಾರ್ಕಳ ತಹಶೀಲ್ದಾರರು ಶಿಫಾರಸು ಮಾಡಿದಲ್ಲಿ, ಕೋವೀ ಲೈಸನ್ಸು ದೊರಕುವುದು.

'ದಿ ಕೆನರಾ ಬ್ಯಾಂಕಿಂಗ್ ಕಾರ್ಪರೇಶನ್, ಉಡ್ಪಿ, ಲಿಮಿಟೆಡ್' ಎಂಬೀ ಸಂಸ್ಥೆಯ ಒಂದು ಶಾಖೆಯು, ಸಕಲೇಶಪುರದಲ್ಲಿ, ಅಲ್ಲಿನ ಸಬ್ ಡಿವಿಜನಲ್ ಆಫೀಸರರಾದ ಅಬ್ದುಲ್ ಹುಸೇನ್ ಶರೀಫ್, ಎಸ್ಕ್ವೈರ್, ಬಿ. ಏ., ಇವರಿಂದ, ಇದೇ ತಾ. ೨೮ನೇ ಆದಿತ್ಯವಾರ ಸಂಜೆ ಗಂಟೆ ೪ಕ್ಕೆ ತೆರೆಯಲ್ಪಡುವುದು. ಅಂದು ಪ್ರೆಸಿಡೆಂಟರ ಚುನಾವಣೆ, ಅತಿಥಿಗಳ ಸ್ವಾಗತ, ಸಭಿಕರ ಭಾಷಣ, ಪ್ರೆಸಿಡೆಂಟರ ವ್ಯಾಖ್ಯಾನ ಮತ್ತೂ ಶಾಖೆಯನ್ನು ತೆರೆವ ಸಮಾರಂಭ, ಫಲಾಹಾರ, ವಂದನಾರ್ಪಣ ಮೊದಲಾದ ಹಲವು ಕಾರ್ಯಕ್ರಮಗಳಿವೆ.

ನಮ್ಮ ಮುನಿಸಿಪಾಲಿಟಿಯು ಖಾಲಿಬಿದ್ದ ವೈಸ್ ಚೇಯರ್‌ಮನ್ನರ ಸ್ಥಾನಕ್ಕೆ ಮ್ಯಾನರನ್ನು ಆರಿಸಲು, ಮುನಿಸಿಪಲ್ ಮಂದಿರದಲ್ಲಿ ಇದೇ ಬರುವ ಜುಲ್ಮಾ ತಾ. ೨ನೇ ಗುರುವಾರ ಸಂಜೆ ಗಂಟೆ ೫ಕ್ಕೆ ಒಂದು ವೋಟಿಂಗು ನಡೆಯುವುದು.

ಪತ್ರವ್ಯವಹಾರ.

ಸೂಚನೆ:—[ಪಾತಮಿದಾರರ ಅಭಿಪ್ರಾಯಗಳು ಕಂಠೀರವದ ಅಭಿಪ್ರಾಯಗಳಲ್ಲ. ಎಲ್ಲ ಪತ್ರಗಳನ್ನು ಬರೆಯುವವರು ತಮ್ಮ ಹೆಸರು ವಿಳಾಸ ಕೊಡಬೇಕಾಗಿದೆ– ಸಂ.]

ಚುನಾವಣೆಗಳೂ ಕಾಂಗ್ರೆಸ್ಸೂ.

ಸಂತೆ ನೆರೆಯುವ ಮೊದಲು ಗಂಟು ಕಳ್ಳರಿಂಬಂತೆ, ಪ್ರಾಂತಿಕ ಚುನಾವಣೆಗಳ ಗದ್ದಲವು ಈಗಾಗಲೇ ಆರಂಭವಾಗಿಯದೆ. ಪ್ರಾಥಮಿಕ ಓಟರರ ಪಟ್ಟಿಗಳು ಸಿದ್ಧವಾಗಿ, ಆಗುತ್ತಾ, ಆಗುವುದರಲ್ಲಿವೆ. ಅಷ್ಟರಲ್ಲೆ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೆಗಳಲ್ಲಿ ಕೊಂಗ್ರೆಸು, ಜಸ್ಟೀಸ್ ಇಂಡಿಪೆಂಡೆಂಟ್ ಉಮೇದು ವಾರಿಗಳೆಂದು ಪ್ರಕಟಣೆಗಳು ಹೊರಬೀಳಲಾರಂಭಿಸಿವೆ. ಕೆಲವರು ತಮ್ಮ ಪರಾಕ್ರಮಗಳ ಮಾಹಿತಿಯುಳ್ಳ ಕಟಲಾಗುಗಳನ್ನೂ ಪ್ರಕಟಿಸಲಾರಂಭಿಸಿದ್ದಾರೆ. ಟೀಕೆಗಳಿಗೂ, ಟೂಕೆಗಳಿಗೂ ಕಡಿಮೆಯಿಲ್ಲವೆನ್ನಿ. ಪ್ರಶ್ನೋತ್ತರಮಾಲಿಕೆಗಳೂ ರಾಷ್ಟ್ರಧ್ವಜದಂತೆ ತಲೆಯೆತ್ತಲಾರಂಭಿಸಿವೆ. ಆದರೆ ಇವೆಲ್ಲವುಗಳಿಂದ ಮತದಾರರಿಗೆ ಲಭಿಸುವ ಪ್ರಯೋಜನವೇನು? ಮತದಾನವನ್ನು ಅವರು ಪಾತ್ರಾಪಾತ್ರತೆಯನ್ನರಿತು ಮಾಡುವರೇ ಅಥವಾ ಒತ್ತಾಯಕ್ಕೊಳಪಟ್ಟು ಮಾಡುವರೇ ಎಂಬುದು ದೊಡ್ಡ ಫಜೀತಿ.

ನಾನು ದಕ್ಷಿಣ ಕನ್ನಡ ಜಿಲ್ಲೆಯನ್ನು ಆಗಾಗ್ಗೆ ಸಂಚರಿಸುತ್ತಿರುವೆನಾದುದರಿಂದ ನನ್ನ ಅನುಭವದ ಮಟ್ಟಿಗೆ ಇಲ್ಲಿ ಕಾಂಗ್ರೆಸ್ ಪಕ್ಷವೆಂದಾಗಲೀ ಜಸ್ಟಿಸ್ ಪಕ್ಷವೆಂದಾಗಲಿ ಯಾವ ಪಕ್ಷವೇ ಆಗಲಿ ಕೃಷ್ಣಪಕ್ಷ ಶುಕ್ಲಪಕ್ಷ ಹೊರತು ಇರುವದಿಲ್ಲ. ಇದು ಬರೇ ಕಾಲ್ಪನಿಕ ಪಕ್ಷ ನಿರ್ಮಾಣ. ಜಾತೀಯತೆಯ ಪ್ರಶ್ನೆ, ವೈಯಕ್ತಿಕ ಹಾಗೂ ಕೌಟುಂಬಿಕ ದ್ವೇಷ, ಸ್ವಾರ್ಥ ಮತ್ತು ಅಸೂಯೆ ಇವೇ ಈ ಪಕ್ಷಗಳೆಂಬುದರ ಹಿಂದಿರುವ ಸೂತ್ರದ ಗೊಂಬೆಗಳು. ಜನರಿಗೆ ಕಾಂಗ್ರೆಸಿನ ಮೇಲೆ ಅಭಿಮಾನ ಹೆಚ್ಚಿತ್ತೆಂಬುದು ನಿಸ್ಸಂದೇಹವಾದುದು. ಆದುದರಿಂದ ಈ ಕಾಂಗ್ರೆಸಿನ ಹೆಸರನ್ನು ತಮ್ಮ ಸ್ವ ಪ್ರಯೋಜನಕ್ಕಾಗಿ ಉಪಯೋಗಿಸುವ ಹಂಚಿಕೆಗಳು. ನಾಲ್ಕಾಣೆಯನ್ನು ತೆತ್ತ ಅಭಿಮಾನವೇ ಕಾಂಗ್ರೆಸಿನ ಮೇಲೆ ಜಾಸ್ತಿಯಲ್ಲದೆ ಖಾದಿ ಧರಿಸುವಿಕೆಯೂಗಲಿ ಇತರ ದೇಶವಾತ್ಸಲ್ಯವಾಗಲಿ ನಾಸ್ತಿ. ಅತ್ಯಂತ ನಾಜೂಕಾದ ಕೋಟು ಪೆಂಟಲೂನುಗಳೂ, ಸಿಲ್ಕು ಶರ್ಟುಗಳೂ ನಮ್ಮ ಅನುನಿತ್ಯದ ಸಾದಾ ಉಡುಗೆಯಾಗಬೇಕು. ಇವನ್ನು ಒಗೆಯಲು 'ಸನ್‌ಲ್ಯಾಟ್' ಸಾಬೂನೇ ನಮಗೆ ಬೇಕು. ಆದರೂ ಪಕ್ಷ ಮಾತ್ರ ಬಾಯಲ್ಲಿ ಕಾಂಗ್ರೆಸು. ಜನರನ್ನು ಮರುಳುಗೊಳಿಸಲು ಈ ಪಕ್ಷದ ಹೆಸರಿಗಿಂತಲೂ ಮನಮುಗ್ಧಕರವಾದ ಪಕ್ಷದ ಹೆಸರು ಬೇರೊಂದಿಲ್ಲ. ಪಿತೃಪಕ್ಷವೂ ಕೂಡ ಅಲ್ಲ. ಕೆಲವರಿಗಂತೂ ಈ ಉಮೇದುವಾರಿಕೆಯೆಂಬುದು ಮೂಲಗೇಣಿಯ ಹಕ್ಕು ವ ಆಜನ್ಮಸಿದ್ಧ ಹಕ್ಕು ಎಂಬಂತಾಗಿರುತ್ತದೆ. ಪ್ರಾಯಶಃ ಅವರ ಮನಸ್ಸಿನಲ್ಲಿ ತಮ್ಮ ಹೊರತು ಇತರರು ಯಾರೂ ನಮ್ಮ ಜಿಲ್ಲೆಯಲ್ಲಿ ಪ್ರಾತಿನಿಧ್ಯವನ್ನು ವಹಿಸುವವರು ಹುಟ್ಟಿಲ್ಲವೆಂದೇ ಭಾವನೆಯಿರಬಹುದು.

ಮಂಗಳೂರು ಪಟ್ಟಣದಲ್ಲಿ ಕೆಲವು ಕಾಂಗ್ರೆಸು ಸ್ವಯಂಸೇವಕರು ಮತದಾರರ ಹೆಸರುಗಳನ್ನು ಪಟ್ಟಿಯಲ್ಲಿ ದಾಖಲ್ಮಾಡಿಸಲು ಪಡುವ ಪ್ರಯತ್ನಗಳನ್ನು ಬಿಟ್ಟರೆ ನಮ್ಮ ಜಿಲ್ಲೆಯ ಬೇರೆ ಕಡೆಗಳಲ್ಲಿ ವ ಕಾಂಗ್ರೆಸು ಕಮಿಟಿಯವರು ಏನು ಪ್ರಯತ್ನಗಳನ್ನು ಮಾಡುತ್ತಿದ್ದಾರೋ ಶಿವನೇ ಬಲ್ಲ. ಡಿ॥ ಬೋ॥ ಚುನಾವಣೆಯ ಸಮಯದಲ್ಲಿ ಜಿಲ್ಲೆಯ ದಿಗ್ವಿಜಯವನ್ನೇ ಗೈಯುತ್ತಿದ್ದ ಮಹಾನುಭಾವರು ಯಾವ ಮೂಲೆ ಪಾಲಾಗಿರುವರೋ? ಅಥವಾ ಕಮಿಗೆ ಡಿ॥ ಬೋ॥ ಮೆಂಬರಿಕೆ ಲಭಿಸಿರುವದರಿಂದ ತಮ್ಮ ಕೆಲಸವಾಯಿತೆಂದು ತೆಪ್ಪಗಿರುವರೇ? ಪ್ರಾಯಶಃ ಇನ್ನೊಮ್ಮೆ ಡಿ॥ ಬೋ॥ ಚುನಾವಣೆ ಬರುವಾಗ ಕಾಂಗ್ರೆಸಿನ ನೆನಪು ಇವರಿಗೆ ಹುಟ್ಟಬಹುದು.

ಡಿ॥ ಬೋ॥ ಚುನಾವಣೆಯ ಕಾಲದಲ್ಲಿ ಪವಿತ್ರ ಕಾಂಗ್ರೆಸಿನ ಹೆಸರಲ್ಲಿ ಅನೇಕ ಮಾಯಾ-ಮೋಹನ-ಮಾಟಗಳು ಹೂಡಲ್ಪಟ್ಟವು. ಜನರು ಮಂಕುಗೊಳಿಸಲ್ಪಟ್ಟರು. ಕೆಲವೊಂದು ಪತ್ರಿಕೆಗಳಲ್ಲಿ ಯಥಾರ್ಥಸ್ಥಿತಿಗಳು ತಿಳಿಸಲ್ಪಟ್ಟರೂ ಅವೆಲ್ಲವೂ ದೂಷಿಸಲ್ಪಟ್ಟವು. ಕೊಂಗ್ರೆಸಿಗೆ ನಿಜವಾಗಿ ಸೇರದವರನ್ನು ಕಾಂಗ್ರೆಸಿನ ಕಡೆಯ ಉಮೇದುವಾರರಾಗಿ ಒತ್ತಾಯದಿಂದ ನೀವು ನಿಲ್ಲಿ, ನೀವು ನಿಲ್ಲಿ ಎಂಬ ನಾಟಕ ದೃಶ್ಯಗಳೇ ಜಾಸ್ತಿಯಾಯಿತು. ಕೊನೆಗಂತೂ ಈ ಕೊಳಕು ಮೋರೆಯ ದುರ್ವರ್ತನೆಯು ಬಟ್ಟಬಯಲಾಯಿತು. ಕಾಂಗ್ರೆಸುಪಕ್ಷದಲ್ಲಿ ಬಹುಮತದ ಸಂಖ್ಯೆಯಿದೆಯೆಂದು ಒಣಜಂಭ ಕೊಚ್ಚಿಕೊಳ್ಳುತ್ತಿದ್ದವರು, ತಾವು ಸಿದ್ಧಗೊಳಿಸಿಟ್ಟಿದ್ದ ಪುಷ್ಕಾಲಂಕೃತ ಕಾರುಗಳನ್ನೂ, ಟೀ ಪಾರ್ಟಿಗಳನ್ನೂ ಕೈಬಿಟ್ಟು ಸಂಭಾವಿತರ ಮುಂದೆ ತಲೆಯೆತ್ತಲು ಸಾಧ್ಯನಿಲ್ಲದವರಾಗಿ ತಮ್ಮ ಮಾಯಾಜಾಲದ ಯತ್ನಗಳೆಲ್ಲವೂ ನಿಷ್ಫಲವಾದುದಕ್ಕಾಗಿ ಯಾವಜ್ಜೀವವೂ ಕೊರಗುವಂತಾಯಿತು. ಸಂಕ್ಷೇಪತಃ ಕಾಂಗ್ರೆಸಿಗೆ ಎಂದೂ ಮಾಜದ ದೊಡ್ಡ ಕಳಂಕವನ್ನೇ ತಂದೊಡ್ಡುವನವರಾದರು.

ಒಂದೊಮ್ಮೆ ದಿನಕ್ಕೆ ಹತ್ತಾರು ಸಲವೆಂಬಂತೆ ಸೇರುತ್ತಿದ್ದ ಡಿ॥ ಬೋ॥ ಕಾಂಗ್ರೆಸು ಮೆಂಬರರ ಬೋರ್ಡ್ ಇಂದೀಗ 'ಕೋರಂ' ಇಲ್ಲದೆ ಸೇರುವದೇ ಇಲ್ಲ. ಇದಕ್ಕಿಂತಲೂ ನಾಚಿಕೆಕರ ವರ್ತನ ಬೇರಿರಬೇಕೇ? ಈ ಕಾಂಗ್ರೆಸಿನವರೆಂದೆನ್ನಿಸಿಕೊಳ್ಳುವವರಲ್ಲಿ ಕಾಂಗ್ರೆಸಿನ ಮೇಲಣ ಅಭಿಮಾನವೂ ಇನ್ನೂ ಇದ್ದರೆ ತಮಿಳುನಾಡು ಕಾಂಗ್ರೆಸಿಗೆ ಸೇರಿದವರು ವೆಲ್ಲೂರಿನಲ್ಲಿ ಮಾಡಿದಂತೆ ಇವರು ಈಗಲೇ ತಮ್ಮ ಡಿ॥ ಬೋ॥ ಸ್ಥಾನಗಳಿಗೆ ರಾಜಿನಾಮೆಯನ್ನಿತ್ತು ಪುನಃ ಚುನಾವಣೆಯನ್ನು ಅಪೇಕ್ಷಿಸತಕ್ಕದು. ಇದರಲ್ಲಿ ಮುಂದಾಗಿ ಕಾಂಗ್ರೆಸ್ ಪಾರ್ಟಿಯ ಲೀಡರ್, ಡಿಪ್ಯೂಟಿ ಲೀಡರ್, ವ್ಹಿಪ್ ಎಂಬವರೂ ಹಾಗೂ ಕಾಂಗ್ರೆಸ್ ಕಡೆಯಿಂದ ಅಧ್ಯಕ್ಷತನಕ್ಕೆ ಉಮೇದುವಾರಿಯಾಗಿ ನಿಂತವರೂ ಪ್ರಥಮತಃ ತಮ್ಮ ಸ್ಥಾನಗಳಿಗೆ ಎಳ್ಳುನೀರು ಬಿಟ್ಟು ಇತರರಿಗೆ ಮಾರ್ಗದರ್ಶಿತ್ವವನ್ನು ತೋರಬೇಕು. ಆಗ ತಾನೇ ಕಾಂಗ್ರೆಸಿನ ಮೇಲಣ ಇವರ ಅಭಿಮಾನವು ಜನರಿಗೆ ತಿಳಿದಂತಾಗುವದು.

ತಮ್ಮ ಪ್ರಾಂತವನ್ನೇ ಅವಹೇಳನಗೊಳಿಸಿರುವ ಇಂತಹದೊಂದು ಉಪಸಮಿತಿಯ ವಿಚಾರವಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಾದರೂ ಏನು ಆಲೋಚನೆಗೈದಿರುವರೆಂದು ತಿಳಿದಿರುವದಿಲ್ಲ. ಮುಂದಿನ ಪ್ರಾಂತಿಕ ಚುನಾವಣೆಗಳೂ ಅವರ ವತಿಯಿಂದಲೇ ನಡೆಯತಕ್ಕುವೆಂದು ತಿಳಿಯುತ್ತೇನೆ. ಸುಮ್ಮನೆ ಧಾರವಾಡದೊಳಗೆ ಪದ್ಮಾಸನ ಹಾಕಿ ಕುಳ್ಳಿತುಕೊಂಡು ಮಂಗಳೂರ ಪತ್ರಪತ್ರಿಕೆಗಳನ್ನು ವಿಮರ್ಶಿಸಿ ಜ್ಞಾಕಶುದ್ಧ ಅಪ್ಪಣೆ ಹೊರಡಿಸಿ ಪ್ರಯೋಜನವಿಲ್ಲ. ಶಿಸ್ತನ್ನೂ, ಪ್ರತಿಷ್ಠೆಯನ್ನೂ ಕಾಪಾಡಿಕೊಳ್ಳುವದು ಅದರ ಕರ್ತವ್ಯ. ನಮ್ಮ ಧಾರವಾಡದ ಬಂಧುಗಳು ಕೂಡಲೇ ಜವಾಬುದಾರ ಗೃಹಸ್ಥರೊಬ್ಬರನ್ನು ಈ ಜಿಲ್ಲೆಗೆ ಕಳುಹಿ ಯಾವತ್ತೂ ವಿಚಾರಗಳನ್ನು ವಿಮರ್ಶಿಸಬೇಕು. ಡಿ॥ ಬೋ॥ ಚುನಾವಣೆಯ ಕಾಲದಲ್ಲಿ ಕಾಂಗ್ರೆಸಿಗೆ ಕಳಂಕವನ್ನು ತಂದೊಡ್ಡಿದವರ ವಿಚಾರವಾಗಿ ಕೂಡಲೇ ತಕ್ಕ ಶಾಸ್ತಿಯನ್ನು ತೆಗೆದುಕೊಳ್ಳಬೇಕು. ಪ್ರಾಂತಿಕ ಸಭೆಗಳ ಚುನಾವಣೆಗೆ ತಾಜ್ಯಾ ಕಾಂಗ್ರೆಸು ಸದಸ್ಯರನ್ನು ಚುನಾಯಿಸಬೇಕು. ಈ ವಿಚಾರ ಸ್ವತಃ ತನಿಖಿನಡಿಸಬೇಕು. ಇಜಾರು-ಬೂಟು ಗಳಿಗೂ, ಸಿಲ್ಕ್ ಶರ್ಟುಗಳಿಗೂ, ವಜ್ರದ ಒಂಟಿಗಳಿಗೂ ಮರುಳಾಗಬಾರದು. ಕಾಂಗ್ರೆಸಿನ ನಿಬಂಧನೆಗಳನ್ನು ಸರಿಯಾಗಿ ಪಾಲಿಸುವವರಾದರೆ ಮಾತ್ರ ಅವರನ್ನಾರಿಸಬೇಕು. ಇನ್ನೊಂದು ವಿಚಾರ. ಹಿಂದುಳಿದವರ ಪರವಾಗಿಯೂ ಯೋಗ್ಯ ಉಮೇದುವಾರರನ್ನು ಆರಿಸಬೇಕು. ಇವರಲ್ಲಿ ವಿದ್ಯಾವಂತರಿಲ್ಲವೆಂದಿಲ್ಲ. ಕ. ಪ್ರಾಂ. ಕಾಂ. ಕಮಿಟಿಯವರೇ ಇನ್ನಾದರೂ ನಿದ್ದೆಯಿಂದೆಚ್ಚತ್ತು ಧಾರವಾಡದಿಂದ ಕೂಡಲೇ ಮಂಗಳೂರಿಗೆ ಬಂದು ವಿಚಾರಣೆನಡಿಸುವಿರಾ ಅಥವಾ ಮೊದಲೇ ಮುಖಕ್ಕೆ ಹಚ್ಚಲ್ಪಟ್ಟಿರುವ ಮಸಿಯನ್ನು ಇನ್ನಷ್ಟು ಕಪ್ಪುಗೊಳಿಸುವಿರಾ?

ಕಾಂಗ್ರೆಸು ಸದಸ್ಯ.

ಅಯ್ಯಾ, ಸಂಪಾದಕರೇ,

ಮಂಜೇಶ್ವರದ ಶ್ರೀಮದನಂತೇಶ್ವರ ದೇವಸ್ಥಾನದ ಹಾಯರ್ ಎಲಿಮೆಂಟರಿ ಶಾಲೆಯ ತಾ. ೧೧—೫—'೩೬ರಲ್ಲಿ ಜರುಗಿದ ವರ್ಧಂತ್ಯುತ್ಸವದ ವರದಿಯು ಮುದ್ರಿತವಾಗಿ ಹಲವರ ಕೈಸೇರಿದವು. ಶಾಲಾ ಬಾಬ್ತು ಸದ್ರಿ ವರದಿಯಲ್ಲಿ ಪ್ರಕಟಿಸಿದ ಆಯವ್ಯಯದ ಪಟ್ಟಿಯಲ್ಲಿ ತೋರುವ ಹಲವು ಸಂಗ್ತಿಗಳ ಕುರಿತು ಈ ಕೆಳಗಿನ ಪ್ರಶ್ನೆಗ್ಳಿಗೆ ಯುಕ್ತ ಉತ್ತರವು, ಸಂಬಂಧಪಟ್ಟ ಅಧಿಕಾರಿಗಳಿಂದ ಸಿಗಬಹುದಾಗಿ ನಂಬುತ್ತೇನೆ.

೧. ಜಮೆಯಲ್ಲಿ ತಾ. ೧—೪—'೩೫ರಲ್ಲು, ಶಿಲ್ಕು ಬಾಕಿ ರೂಪ್ಯಾ ೪೯—೦—೬, ಎಂತಲೂ; ಖರ್ಚಿನಲ್ಲಿ, ರೂಪ್ಯಾ ೪೯-೦-೬; ಬಾಬ್ತು ಲೆಕ್ಕಾಚಾರವನ್ನು ಮಾಜಿ ಹೆಡ್ ಮಾಸ್ತರರು ಕೊಡಬೇಕೆಂತೆಲೂ, ತೋರುವ ದಾದರೂ, ಮಾಜಿ ಹೆಡ್ ಮಾಸ್ತರರಿಂದ, ಈಗಿನ ಹೆಡ್ ಮಾಸ್ತರರು, ಇದೇ ಕಳೆದ ಜನವರಿ ತಿಂಗಳಲ್ಲಿ, ಚಾರ್ಜನ್ನು ವಹಿಸಿಕೊಂಡಿರುತ್ತಾ, ಈವರೆಗೆ, ಸದ್ರಿ ಏವೇಜನ್ನು ಮಾಜಿ ಹೆಡ್ ಮಾಸ್ತರರ ಮೇಲೆ, ಬಾಕಿ ಇಡಲು ಕಾರಣವೇನು? ಸದ್ರಿ ಲೆಕ್ಕಾಚಾರದ ಕುರಿತು, ಶಾಲಾ ಮೆನೇಜರರಾಗಲೀ, ಶಾಲಾ ಮೆನೇಜ್‌ಮೆಂಟಿನವರಾಗಲೀ ಯಾವ ತರದ ಏರ್ಪಾಡನ್ನು ಮಾಡಿರುತ್ತಾರೆ? ಕಳೆದ ವರ್ಷ ತಾ. ೧೦—೫—೪೫ರಲ್ಲು ಜರುಗಿದ ಸದ್ರಿ ಶಾಲಾ ವರ್ಧಂತ್ಯುತ್ಸವದ ವರದಿಯಲ್ಲಿ, ತಾ. ೪೦—೪—'೩೫ರ ತನಕ ಆಯವ್ಯಯದ ಪಟ್ಟಿಯಲ್ಲಿ, ಅಮಾನತು ಖಾತೆಗೆ ರೂ. ೧೫ ಜಮೆಯೂ, ಖರ್ಚಿನಲ್ಲಿ ಹೊರಗೆ ಸಲ್ಲತಕ್ಕ ರೂಪ್ಯಾ ೧೮—೪—೦, ದೇವಸ್ಥಾನದ ಭಂಡಾರದಲ್ಲಿ ಠೇವಣಾತಿಯಿಟ್ಟ ರೂ. ೩೨—೦—೬, ಕೈಯ್ಯಲ್ಲಿರುವ ಶಿಲ್ಕು ರೂಪ್ಯಾ ೦—೨—೫, ಎಂತ ಕಾಣಿಸಿರುತ್ತದೆ. ಸದ್ರಿ ಆಯವ್ಯಯದ ಪಟ್ಟಿಗೆ ದಸ್ಕತು ಇಲ್ಲ; ವ ಅವನ್ನು ಒಡಿಟ್ ಮಾಡಿರುವದಾಗಿ ಸಹಾ ಕಾಣಿಸಲಿಲ್ಲ. ಹಾಗಾದರೆ, ಈ ಎರಡು ಆಯವ್ಯಯದ ಪಟ್ಟಿಗಳಲ್ಲಿ ಯಾವದು ಸರಿ?

೨. ಕಳೆದ ೧೯೩೪-೧೯೩೫ನೇ ವರ್ಷದ ವರದಿಯಲ್ಲಿ, ಲ್ಯಾಬ್ರೆರಿ ಫೀ ಜಮಾ ರೂಪ್ಯಾ ೩೫—೧೫—೦, ಗೇಮ್ಸ್ ಫೀ ಜಮಾ ರೂಪ್ಯಾ ೬೬—೫—೦ ಎಂತ ಕಂಡುಬರುತ್ತದೆ. ಕಳೆದ ವರ್ಷದಂತೆ ಈಗಿನ ವರ್ಷದಲ್ಲಿಯೂ (೧೯೩೫-೧೯೩೬) ಕಡ್ಡಾಯವಾಗಿ ಹಣ ವಸೂಲುಮಾಡಿರುತ್ತಾರೆಂದು ಕೇಳುತ್ತೇನೆ. ೪ನೇ ದರ್ಜೆಯಿಂದ ೭ನೇ ದರ್ಜೆಗಳವರೆಗೆ, ಸುಮಾರು ೧೫೦ ಹುಡುಗರಿರುತ್ತಾರೆಂತಲೂ, ಪ್ರತಿಯೊಬ್ಬ ಹುಡುಗನಿಂದ ವರ್ಷಕ್ಕೆ ೦—೮—೦ಯಂತೆ ಗೇಮ್ಸ್ ಫೀಸ್ ವಸೂಲು ಮಾಡಿರುತ್ತಾರೆಂತಲೂ, ಹಾಲಿ ಹೆಡ್ ಮಾಸ್ತರರೇ ಗೇಮ್ಸ್ ಸುಪರಿಂಟೆಂಡೆಂಟರಾಗಿರುತ್ತಾರೆಂತಲೂ ಕೇಳುತ್ತೇನೆ. ಹಾಗೆಯೇ ೮ನೇ ೭ನೇ ಯಿಂದ ೭ನೇಯ ವರೆಗಿನ ದರ್ಜೆಗಳಲ್ಲಿ, ಸುಮಾರು ೬೦ ಮಕ್ಕಳು ಇರುವರಲ್ಲದೆ, ಅವರೊಳಗಿನ ಪ್ರತಿಯೊಬ್ಬನಿಂದ ವರ್ಷಕ್ಕೆ ೦—೮—೦ಯಂತೆ ಲ್ಯಾಬ್ರೆರಿ ಫೀಸು ವಸೂಲು ಮಾಡಿರುತ್ತಾರೆ. ಹಣ ಪಾವತಿ ಬಗ್ಗೆ ರಶೀದಿಗಳನ್ನು ಕೂಡಾ ಕೊಟ್ಟಿರುತ್ತಾರೆ. ಆದರೆ ವರದಿಯಲ್ಲಿ ಗೇಮ್ಸ್ ಫೀಸ್ ಜಮಾ ರೂಪ್ಯಾ ೨೪—೧೦—೦, ಲ್ಯಾಬ್ರೆರಿ ಫೀಸ್ ಜಮಾ ರೂಪ್ಯಾ ೧೩—೧—೦ ಎಂತ ಮಾತ್ರ ತೋರುತ್ತದೆ. ಇದರ ತಾತ್ಪರ್ಯವೇನು? ವಿದ್ಯಾರ್ಥಿಗಳಿಂದ ಹಣ ವಸೂಲಾಗಲಿಲ್ಲವೇ? ಈ ಸಂಗ್ತಿಯು ಶಾಲಾ ಮೆನೇಜರರ ಯಾ ಶಾಲಾ ಆಡಳಿತೆಯವರ ತಿಳುವಳಿಕೆಗೆ ಬಂದಿರುತ್ತದೆಯೇ? ಈ ವಿಷಯದಲ್ಲಿ ಅವರು ಏನು ಮಾಡಿರುತ್ತಾರೆ?

೩. ಕಳೆದ ವರ್ಷದ ವರದಿಯಲ್ಲಿ, ಗೇಮ್ಸ್ ಬಗ್ಗೆ ರೂಪ್ಯಾ ೧೧೫—೨—೩ ಖರ್ಚು ಎಂತ ಕಾಣಿಸಿರುತ್ತದೆ. ಈ ವರ್ಷದಲ್ಲಿ, ಕಳೆದ ವರ್ಷಕ್ಕಿಂತ ಅಧಿಕವಾದ ಆಟಗಳು ನಡೆದಿರುತ್ತಾ, ಗೇಮ್ಸ್‌ನ ಖರ್ಚಿಗೆ ಬರೇ ರೂಪ್ಯಾ ೨೬—೪—೦ ತಗಲಿರುವದಾಗಿ ಕಾಣುತ್ತದೆ. ಇದು ಹೇಗೆ ಸಾಧ್ಯ?

೪. ಕಳೆದ ವರ್ಷದ ವರದಿಯಲ್ಲಿ, ಸದ್ರಿ ವರ್ಧಂತಿ ಉತ್ಸವದ ಬಗ್ಗೆ ವಸೂಲಾದ ವಂತಿಗೆ, ವ ಖರ್ಚಿನ ವಿವರವನ್ನು ಆಗ ಪ್ರಕಟಿಸದೆ, ಈ ವರ್ಷದ ವರದಿಯಲ್ಲಿ ಸಂಕ್ಷಿಪ್ತವಾಗಿ ಪ್ರಕಟಿಸಲು ಕಾರಣವೇನು? ಕಳೆದ ವರ್ಷದ ಆಯವ್ಯಯದ ಪಟ್ಟಿಯಲ್ಲಿ, ಆಯಕ್ಕಿಂತಲೂ, ಖರ್ಚು ಹೆಚ್ಚಿಗೆ ಕಾಣುತ್ತದೆ ಇದು ಹೇಗೆ ಸಾಧ್ಯ? ಖರ್ಚಿನ ಜುಮ್ಲಾ ರೂಪ್ಯಾ ೧೫೫—೧—೧ ಭರ್ತಿಯಾಗಲಿಕ್ಕೆ ದೇವಸ್ಥಾನದ ಭಂಡಾರದಿಂದ, ರೂ. ೬೮-೫-೪ನ್ನು ಪಡಕೊಳ್ಳತಕ್ಕದ್ದೆಂದು ತಾ. ೨೧-೫-೪೫ರಲ್ಲು ಕಾಣಿಸಿರುತ್ತದಾದರೂ ಹಾಲಿ ಹೆಡ್ ಮಾಸ್ತರರು, ತಾ. ೪—೬—೪೬ರಲ್ಲು ರೂಪ್ಯಾ ೬೭—೧—೦ನ್ನು ಮಾತ್ರ ಸದ್ರಿ ದೇವಸ್ಥಾನದ ಭಂಡಾರದಿಂದ ಪಡಕೊಂಡಿರುವುದಾಗಿ ಕಾಣಿಸಿರುತ್ತದೆ. ಸದ್ರಿ ಹಣವನ್ನು ಅವರು ಹೇಗೆ ವಿನಿಯೋಗಿಸಿರುತ್ತಾರೆ? ಈ ಹಣವನ್ನು ಇಷ್ಟು ವಿಳಂಬವಾಗಿ ಭಂಡಾರದವರು ಕೊಡಲು ಕಾರಣವೇನು? ಕಳೆದ ವರ್ಷ ಈ ಬಗ್ಗೆ ರೂಪ್ಯಾ ೧೫೫—೧—೧೧ಯನ್ನು ಖರ್ಚು ಮಾಡಿದ್ದು ಯಾರು? ಸಂಬಧಪಟ್ಟ ಅಧಿಕಾರಿಗಳು ಮೇಲಿನ ಪ್ರಶ್ನೆಗಳಿಗೆ ಯುಕ್ತ ಸಮಾಧಾನವನ್ನು ಆದಷ್ಟು ಬೇಗನೆ ಪ್ರಕಟಿಸುವಿರಾಗಿ ನಂಬುತ್ತೇನೆ.

ಮಂಜೇಶ್ವರ,
ತಾ. ೧೯-೬-'೩೬. } **'ಸ್ಥಳೀಯ ನಿವಾಸಿ'**

3 ಸಹಾಯಕಗಳು
1936ರ ನಿಮ್ಮ ವಿಜಯಕ್ಕೆ
1936 ನಿಮ್ಮ ಪ್ರಗತಿಯ ವರ್ಷವಾಗಿರಲಿ

1936ರ ಉಳಿದ ಭಾಗದ ವಾರ್ಷಿಕ ವಿವರಗಳು.

ನಿಮ್ಮ ಉದ್ಯೋಗ, ಸಂಪತ್ತು, ಆರೋಗ್ಯ, ಮನೆ, ಪ್ರೇಮ, ಭಾಗ್ಯ ಇವುಗಳ ವರ್ಷದ ಪ್ರತಿಯೊಂದು ಮಾಸದ ಅನುಕೂಲ ಮತ್ತು ಪ್ರತಿಕೂಲದ ತಾರೀಕುಗಳು 1936ನೇ ವರ್ಷದ ನಿಶ್ಚಿತ ತಾರೀಕುಗಳೊಡನೆ ವಿವರಿಸಲ್ಪಟ್ಟು, ಮಾಸ ಮತ್ತು ವಾರ ಭವಿಷ್ಯಗಳನ್ನು ಕೊಡುತ್ತದೆ. ನಿಮ್ಮ ಜನನತಾರೀಕನ್ನು ತಿಳಿಸಿರಿ. ಕ್ರಯ ರೂ. 2 ಮಾತ್ರ.

ಮೂನ್ ಟೇಬಲ್ ಗ್ಯಾಡ್ 1936ಕ್ಕೆ

ಈ ಚಿಕ್ಕ ಪುಸ್ತಕದಲ್ಲಿ 1936ನೇ ವರ್ಷದ ಪ್ರತಿಯೊಂದು ದಿನದ ಛಂದ್ರಸ ಸ್ಥಾನವು ಕೊಡಲ್ಪಟ್ಟಿದ್ದು ನಿಮ್ಮ ಜೀವನದ ಮುಖ್ಯ ಘಟನೆಗಳಿಗೆ ಬೇಕಾದ ಶುಭದಿನಗಳನ್ನು ತೋರಿಸುತ್ತದೆ. ಇದರಲ್ಲಿ 1936ರ ಹಿಂದೂಸ್ಥಾನದ ಭವಿಷ್ಯವೂ ಇದೆ. ಬಹಳ ಪ್ರಯೋಜನಕಾರಿ. ಕ್ರಯ ಆ. 4 ಮಾತ್ರ.

ಕಬಾಲಾ ರಕ್ಷೆ 1936ಕ್ಕೆ

ಇದು ತಾಜಾ ಬೆಳ್ಳಿಯಲ್ಲಿ ಗ್ರಹಗಳ ಚಿಹ್ನೆಗಳೊಡನೆ ಮಾಡಲ್ಪಟ್ಟಿದೆ; ಈ ಶುಭ ರಕ್ಷೆಯು ನಿಮ್ಮ ವೈದ್ಯೋಗಿಕ, ಸಾಂಪತ್ತಿಕ ಮತ್ತು ಆರೋಗ್ಯದ ವಿಷಯಗಳಲ್ಲಿ, ಅನಿಷ್ಟ ಗ್ರಹಗಳ ಬಾಧೆಯನ್ನು ನಿವಾರಿಸಿ ನಿಮಗೆ ಶುಭವನ್ನುಂಟುಮಾಡುತ್ತದೆ. ಒಂದನ್ನು ಧರಿಸಿ ಮತ್ತು 1936ರಲ್ಲಿ ಭಾಗ್ಯಶಾಲಿಗಳಾಗಿರಿ. ಕ್ರಯ ರೂ. 2—6—0.

ಹೆಚ್ಚಿನ ವಿವರಗಳು ಉಚಿತ.

Please conduct all correspondence in English only. The reading will be sent in English only.

PROFESSOR SEKHAR,
B.A. (Wash) M.I.B.M. (U.S.A.),
THE GREAT MESMERIST,
ELLORE,
(WEST GODAVARI DISTRICT).

For your Diamonds
enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

ನಿಮ್ಮ ಆರೋಗ್ಯದ ಸಲುವಾಗಿ ಚೆನ್ನಾಗಿ ನಡೆಯಿರಿ.

ಅಂದವಾಗಿ ನಡೆಯುವದೆಂದರೆ ಬೆನ್ನೆಲುಬು ತನ್ನ ಸರಿಯಾದ ಸ್ಥಾನದಲ್ಲಿದೆಯೆಂದೂ, ಎದೆಯು ಸರಿಯಾಗಿ ಉಬ್ಬಿದೆಯೆಂದೂ ಮತ್ತು ಶ್ವಾಸಕೋಶಗಳು ಪ್ರಾಣವನ್ನು ಕೊಡತಕ್ಕಂಥಾ ಆಮ್ಲಜನಕ ವಾಯುವಿನಿಂದ ತುಂಬಿವೆಯೆಂದೂ ಅರ್ಥ. ದೇಹದೊಳಗಣ ಇಂದ್ರಿಯಗಳ ಆರೋಗ್ಯವು ಬಹಳವಾಗಿ ಬೆನ್ನೆಲುಬು ಸರಿಯಾದ ಸ್ಥಾನದಲ್ಲಿರುವುದರ ಮೇಲೆ ಹೊಂದಿಕೊಂಡಿದ್ದು, ಜೋಲುಬಿದ್ದು ನಡಿಯುವದನ್ನು ಅಥವಾ ಬಗ್ಗುವದನ್ನು ನಿವಾರಿಸಿದಲ್ಲಿ ಮುದಿತನವನ್ನು ದೂರದಲ್ಲಿರಿಸಬಹುದೆಂದು ಡಾಕ್ಟರರು ಅಭಿಪ್ರಾಯಪಡುತ್ತಾರೆ.

ನಡಿಯುವಾಗ ಯಾ ನಿಂತುಕೊಳ್ಳುವಾಗ ದೇಹದ ಸರಿಯಾದ ಸ್ಥಾನವೆಂದರೆ ನೆಟ್ಟಗಾಗಿರುವುದು, ಸೊಂಟದಿಂದ ಮೇಲಣ ಭಾಗವು ಎತ್ತಿದಂತಿರಬೇಕು. ಆದರೆ ಇದು ಸುಲಭವಾಗಿಯೂ, ಸ್ನಾಯುಗಳ ಮೇಲೆ ವಿಶೇಷವಾದ ಪರಿಶ್ರಮ ಬೀಳದ ರೀತಿಯಲ್ಲಿಯೂ ಇರಬೇಕು. ಈ ದೇಹದ ಎತ್ತುವಿಕೆಯು, ಹೆಗಲುಗಳನ್ನು ಎತ್ತದೆನೇ ಹೆಗಲ ಭಾಗವನ್ನು ಚಟ್ಟಿಯಾಗಿರಿಸುತ್ತದೆ. ಬೆನ್ನೆಲುಬು ನೆಟ್ಟಗಾಗಿರಬೇಕು. ಆದರೆ ಬೆನ್ನು ಟೊಳ್ಳಾಗಿರಕೂಡದು. ತಲೆಯನ್ನು ಎತ್ತಗವಾಗಿ ನಿಲ್ಲಿಸಬೇಕು. ಗಡ್ಡದ ಭಾಗವು ಸ್ವಲ್ಪ ಒಳಗಾಗಿರಬೇಕು. ಈ ಸ್ಥಾನವನ್ನು ಪಡೆದು ನಿಮ್ಮ ಕೋಣೆಯಲ್ಲಿಯೇ ಮುಖಕನ್ನಡಿಯ ಮುಂಭಾಗದಲ್ಲಿ ಆಚೀಚೆ ನಡಿಯುತ್ತಾ ಅಭ್ಯಾಸಿಸಿರಿ. ಪಾದಗಳನ್ನು ಜಾಗ್ರತೆಯಾಗಿ ಇಡಿರಿ, ಕಾಲಿನ ಹೆಬ್ಬೆಟ್ಟುಗಳನ್ನು ಒಳಗಾಗಲಿ, ಹೊರಗಾಗಲಿ ತಿರುಗಿಸದೆ, ಸರೂತವಾಗಿ ಮುಂದಾಗಿ ಇಡಿರಿ. ಕಾಲಿನ ಕೆಳಭಾಗದ ಬುಡವೂ ತಲೆಯೂ ಏಕಕಾಲದಲ್ಲಿ ನೆಲವನ್ನು ಮುಟ್ಟಬೇಕು.

* * * *

ಒಂದು ಅಂಗಸಾಧನೆ.

ಸರಿಯಾಗಿ ನಡೆಯುವದಕ್ಕೆ ಸಹಾಯ ಮಾಡುವ ಒಂದು ಅಂಗಸಾಧನೆಯೆಂದರೆ ನೆಟ್ಟಗೆ ನಿಂತು ಕೈಗಳನ್ನು ಸೊಂಟದ ಮೇಲಿರಿಸಿ, ದೇಹದ ಮೇಲ್ಭಾಗವನ್ನು ಬಲದಿಂದ ಎಡಕ್ಕೂ, ಮತ್ತು ಎಡದಿಂದ ಬಲಕ್ಕೂ ಅದು ಸೊಂಟದಲ್ಲಿ ಕೀಲುಹೊಡೆಯಲ್ಪಟ್ಟಿದೆಯೋ ಎಂಬಂತೆ ತಿರುಗಿಸಬೇಕು. ಹೀಗೆ ಮಾಡುವಾಗ ಮೊಣಕಾಲುಗಳನ್ನೂ, ಪಾದಗಳನ್ನೂ ಸಂಪೂರ್ಣ ನೆಟ್ಟಗಾಗಿ ನಿಲ್ಲಿಸಬೇಕು. ಮತ್ತಿವು ತೊಡೆಗಳ ಮತ್ತು ಸೊಂಟದ ಚಲನಗಳಿಗೆ ತೊಡಕನ್ನುಂಟುಮಾಡಬಾರದು. ಈ ಅಂಗಸಾಧನೆಯನ್ನು ಕ್ರಮವಾಗಿ ಅಭ್ಯಾಸಿಸಿದರೆ ನಿಮ್ಮ ನಡಿಯುವಿಕೆಯು ಅಂದವೂ, ಸಮತೂಕವೂ ಆಗುವುದು.

ಕೋಣೆಯ ಸುತ್ತಲೂ ಕಾಲಿನ ಹೆಬ್ಬೆಟ್ಟಿನ ಮೇಲೆ ನಡೆಯುವ ಶಾಲಾ ಅಂಗಸಾಧನೆಯು ನಮ್ಮ ಅಜ್ಜಿಗಳ ಕಾಲದ್ದಾಗಿರಬಹುದು. ಆದರೆ ಯಾರಾದರೂ ಮನಸ್ಸುಕೊಟ್ಟು ದಿನಂಪ್ರತಿ ಇದಕ್ಕಾಗಿ ಕೆಲವು ನಿಮಿಷಗಳನ್ನು ವಿಾಸಲಾಗಿರಿಸಿದರೆ ಅವರು ಅಂದವಾಗಿ ನಡೆಯುವುದು ಕಣ್ಣುರೆಪ್ಪೆ ಬಡಿಯುವಷ್ಟೇ ಸುಲಭವೆಂದು ಕಂಡುಕೊಳ್ಳುವರು.

ಆರೋಗ್ಯ ವಿಜ್ಞಾನ

ಜೇನು.

(ಆಸುತೋಷ)

ಒಂದು ಭಾಷೆಯ ಹೆಸರು ಕೂಡ 'ತೇನ' ಜೇನು ಎಂಬ ಶಬ್ದದಿಂದ ಹುಟ್ಟಿ ತೆನುಗು ತೆಲುಗು ಎಂದಾದ ಮೇಲೆ ಜೇನಿನ ಪ್ರಭಾವವು ಸಾಮಾನ್ಯವಲ್ಲ. 'ಜೇನಿನಂತಹ ಮಾತು' 'ಮುಂಗೈಗೆ ಜೇನು ಹಚ್ಚಿಬಿಟ್ಟಿದ್ದಾರೆ' ಎಂಬ ಗಾದೆಗಳನ್ನು ಕೇಳದವರು ವಿರಳ. ಜೇನಿನ ಉಪಯೋಗವು ನಮ್ಮ ಇಂಡಿಯದಲ್ಲಿ ಬಹು ಪುರಾತನ ಕಾಲದಿಂದ ನಡೆದುಬಂದಿದೆ. ವೇದಗಳು ಕೂಡ ಜೇನಿನ ಪ್ರಯೋಜನವನ್ನು ಹೇಳುತ್ತಿವೆ. ಲೋಕದ ಬೇರೆ ದೇಶಗಳಲ್ಲಿ ಕೂಡ ಜೇನನ್ನು ಉಪಯೋಗಿಸದವರಿಲ್ಲ. ಪ್ರಾಚೀನ ಕಾಲದ ಗ್ರೀಕರು ಸಕ್ಕರೆಯ ಬದಲಾಗಿ ಆಹಾರ ಪದಾರ್ಥಗಳಿಗೆ ಜೇನನ್ನು ಉಪಯೋಗಿಸುತ್ತಿದ್ದರು. ಕ್ರೈಸ್ತರ ಧರ್ಮಗ್ರಂಥವಾದ ಬೈಬಲಿನಲ್ಲಿ ಕೂಡ ಜೇನಿನ ವಿಷಯವಾದ ಮಾತು ಬಂದಿದೆ. ಇಂಗ್ಲೆಂಡಿನ ಸಾಕ್ಸನ್ ಜನರು ಸರಾಯಿಯೊಂದಿಗೆ ಜೇನು ಬೆರಸಿ ಗಾಯಗಳಿಗೆ ಹಚ್ಚುತ್ತಿದ್ದರೆಂದು ತಿಳಿದುಬಂದಿದೆ. ಅಂದಿನಿಂದ ಅವರು ಕೂಡ ಜೇನನ್ನು ಔಷಧಿಯ ರೂಪದಲ್ಲಿ ಉಪಯೋಗಿಸಲು ಆರಂಭಿಸಿರಬೇಕು.

ಹಿಂದೂದೇಶದ ಆಯುರ್ವೇದೌಷಧದ ಅನುಪಾನದಲ್ಲಿ ಜೇನಿನ ಭಾಗವೇ ಹೆಚ್ಚು. ಮಗುವಿಗೆ ಶೀತವಾಗಿದೆ ಎಂದು ಮಾತೆತ್ತಿದರೆ ಸರಿ, 'ಸ್ವಲ್ಪ ಶುಂಠಿಯನ್ನೂ, ಬಜೆಯನ್ನೂ, ಹಿಪ್ಪಲಿಯನ್ನೂ ನೀರಿನಲ್ಲಿ ತೇದು ಜೇನು ಕಲಸಿ ಕೊಡಿ' ಎಂದು ಹಳ್ಳಿಯ ಕುರುಬನಾದರೂ ಹೇಳಬಲ್ಲನು. ಕಫವಾಗಿದೆ—ಆಡುಸೋಗೆ ರಸಕ್ಕೆ ಜೇನು ಹಾಕಿ ಒಂದು ಚಮ್ಮಚದಷ್ಟು ಕೊಡಿ. ಬೆಂಕಿ ಬಿದ್ದು ಮೈಸುಟ್ಟಿತು-ಜೇನನ್ನು ಹಚ್ಚಿರಿ. ಮಕ್ಕಳ ಶರೀರವನ್ನು ಪೋಷಿಸಲಿಕ್ಕೆ ಜೇನು ಉತ್ತಮವಾದ ಆಹಾರ. ಶರೀರದ ಕಫಾದಿ ದೋಷಗಳನ್ನು ಸಂಪೂರ್ಣ ಕೆರೆದು ಹೋಗಲಾಡಿಸಿ ಕರುಳುಗಳನ್ನು ಸ್ವಚ್ಛವಾಗಿರಿಸುತ್ತದೆ. ತಾಯಮೊಲೆಹಾಲಿನೊಂದಿಗಾಗಲಿ ಕಾಸಿದ ದನದ ಹಾಲಿನೊಂದಿಗಾಗಲಿ ಜೇನು ಬೆರಸಿ ಕೊಡುವುದರಿಂದ ಮಗುವಿಗೆ ಬಹಳ ಹಿತವಾಗುತ್ತದೆ.

ಆಯುರ್ವೇದಿಗಳಿಗೆ ಜೇನಿಲ್ಲದೆ ಜೀವನ ನಡೆಯದು. ಆಸವ, ಅರಿಷ್ಟ, ಲೇಹ್ಯ, ಗುಟಿಕಾ ಮೊದಲಾದುವುಗಳ ತಯಾರಿಗೂ ಕಷಾಯ, ಮಾತ್ರೆಗಳ ಅನುಪಾನಕ್ಕೂ ಅಲ್ಲಲ್ಲಿ ಆಗಾಗ ಜೇನು ಬೇಕು. ಹಿಂದೂದೇಶದ ಹಳ್ಳಿಗಳಲ್ಲಿ ಬಡ ಕೂಲಿಗಳು ಕೂಡ ತುಸು ಜೇನನ್ನು ಮದ್ದಿಗಾಗಿ ಸಂಗ್ರಹಿಸಿಡದಿರರು. 'ಮಾಜೆಂಟಿ ಜೇನು' ಅಥವಾ ಸಣ್ಣ ಜೇನು ಎಂಬುದು ಕಣ್ಣಿನ ಅನೇಕ ರೋಗಗಳನ್ನು ಗುಣಪಡಿಸುವುದರಲ್ಲಿ ಸಹಾಯಕವಾಗುತ್ತದೆ. ಅನೇಕ ವಿಧದ ಜೇನಿನ ವರ್ಣನೆಯು ಆಯುರ್ವೇದಗ್ರಂಥಗಳಲ್ಲಿ ಬರೆದಿದೆ. ಶರೀರದಲ್ಲಿ ಚರ್ಬಿ ಬೆಳೆದವರು ನಿತ್ಯವೂ ತಣ್ಣೀರಿನೊಂದಿಗೆ ಜೇನು ಸೇರಿಸಿ ಪ್ರಾತಃಕಾಲದಲ್ಲಿ ಸೇವಿಸಿದರೆ ಶರೀರದ ಕೊಬ್ಬು ಕಡಿಮೆಯಾಗುವುದು. ಜೇನಿನೊಂದಿಗೆ ವಿಷವು ಪ್ರಮಾಣದಲ್ಲಿ ತುಪ್ಪ ಸೇರಿಸಿ ಸೇವಿಸುವುದರಿಂದ ಶರೀರಪುಷ್ಟಿಯಾಗುವುದು.

ಎಲೋಪೆಥಿಕ್ ಚಿಕಿತ್ಸಾವದ್ಧತಿಯಲ್ಲಿಯೂ ಜೇನಿನ ಉಪಯೋಗವು ಬಹುಮುಖವಾಗಿದೆ. Honey of Borax ಮೊದಲಾದ ಔಷಧಿಗಳಲ್ಲಿ ಜೇನನ್ನು ಧಾರಾಳ ಉಪಯೋಗಿಸುತ್ತಾರೆ. ಬೋರಿಕ್ಸ್ ಪೌಡರಿನಲ್ಲಿ ಜೇನು ಬೆರಸಿ ಬಾಯಿಹುಣ್ಣಿಗೆ ಹಚ್ಚುವ ಪದ್ಧತಿಯು ಹಳ್ಳಿಗಳಲ್ಲಿ ಕೂಡಾ ಪ್ರಚಾರವಾಗತೊಡಗಿದೆ. ನವಿಲಿನ ಗರಿಯ ಚೂರ್ಣವನ್ನು ಜೇನಿನಲ್ಲಿ ಬೆರಸಿ ಕೊಡುವುದರಿಂದ ವಾಂತಿಯು ನಿಲ್ಲುವುದು. ತುಳಸೀರಸಕ್ಕೆ ಜೇನು ಸೇರಿಸಿ ಕೊಟ್ಟರೆ ಕ್ರಿಮಿ ಮತ್ತು ಕಫನಾಶವಾಗುವುದು.

ಮಾವಿನ ಹಣ್ಣು ಮೊದಲಾದ ಹಣ್ಣುಗಳನ್ನು ಬಹುಕಾಲದ ವರೆಗೆ ಕೆಡದಂತೆ ಜೇನಿನಲ್ಲಿ ಮುಳುಗಿಸಿಡುವ ಪದ್ಧತಿಯು ಸಾಮಾನ್ಯವಾಗಿದೆ. ಪ್ರಾಚೀನ ಕಾಲದ ಈಜಿಪ್ತಿನವರು ಮನುಷ್ಯದೇಹವನ್ನು ಕೂಡಾ ಜೇನಿನಲ್ಲಿ ಮುಳುಗಿಸಟ್ಟು ಕಾಪಾಡುತ್ತಿದ್ದರಂತೆ. ಕಮರ್ಶಿಯಲ್ ಪ್ರೊಡಕ್ಟ್ಸ್ ಆಫ್ ಇಂಡಿಯಾ ಎಂಬ ಪುಸ್ತಕದಲ್ಲಿ ಸರ್ ಜಾರ್ಜ್ ವಾಟರು ಪೂರ್ವದಲ್ಲಿ ಆಸ್ಸಾಮಿನ ಜನರು ತಮ್ಮ ರಾಜರ ಶರೀರವನ್ನು ಜೇನಿನಲ್ಲಿ ಮುಳುಗಿಸಿಟ್ಟು ಬಹುಕಾಲ ಕಾಪಾಡುತಿದ್ದರೆಂದು ಬರೆದಿದ್ದಾರೆ.

ಜೇನು carbo-hydrateನ ರೂಪದಲ್ಲಿದೆ. ಇದರಲ್ಲಿ ¾ ಭಾಗ ಕಾರ್ಬೊ-ಹೈಡ್ರೇಟೂ ¼ ಭಾಗ ನೀರೂ ಇದೆ. ರಸಾಯನಿಕ ರೀತಿಯಿಂದ ಜೇನನ್ನು ವಿಶ್ಲೇಷಣ ಮಾಡಿದರೆ ದ್ರಾಕ್ಷೆ, ಕಬ್ಬು, ಹಣ್ಣು ಇವುಗಳ ಮಧುರಾಂಶವು ಇದರಲ್ಲಿ ಕಂಡುಬರುತ್ತದೆ. ಅಲ್ಲದೆ ಕೆಲವು ಖನಿಜ ದ್ರವ್ಯಗಳೂ ಪುಷ್ಪರೇಣುವೂ ಮಯಣವೂ ಕಂಡುಬರುತ್ತದೆ. ಸ್ವರನಾಡಿಗಳನ್ನು ಸ್ವಚ್ಛಗೊಳಿಸಿ ಗಂಟಲ ಶಕ್ತಿಯನ್ನು ಅಭಿವೃದ್ಧಿಗೊಳಿಸುವ ಗುಣವು ಜೇನಿನಲ್ಲಿ ಅತಿಯಾಗಿದೆ. ಜೇನಿನಲ್ಲಿ ಕ್ರಿಮಿನಾಶಕ ಗುಣವು ಕೂಡ ಇದೆ. ಇನ್ನೂ ಹೇಳಲಿರುವ ಅನೇಕ ಗುಣಗಳು ಜೇನಿನಲ್ಲಿವೆ.

ಅಮೇರಿಕ ಮೊದಲಾದ ಸುಧಾರಿತ ರಾಷ್ಟ್ರಗಳಲ್ಲಿ ಜೇನುಹುಳುಗಳನ್ನು ವೈಜ್ಞಾನಿಕ ರೀತಿಯಿಂದ ಸಾಕಿ, ಸಾಕಷ್ಟು ಜೇನನ್ನು ಪಡೆಯುತ್ತಾರೆ. ಅಪ್ಪ ನೆಟ್ಟ ಆಲದ ಮರಕ್ಕೆ ನೇಣು ಹಾಕುವ ಪ್ರವೃತ್ತಿಯುಳ್ಳ ಭಾರತೀಯರಲ್ಲಿ ಅಲ್ಲಲ್ಲಿ ವೈಜ್ಞಾನಿಕ ಸಾಧನಗಳ ಕಡೆಗೆ ಮನಸ್ಸು ಹರಿಯತೊಡಗಿದರೂ ಸಾಕಷ್ಟು ಮುಂದೆ ಸಾಗಲಿಲ್ಲ. ಭಾರತದ ಹಳ್ಳಿಯ ಕೃಷಿಕರಿಗೆ ಜೇನು ಸಾಕುವುದರ ಆವಶ್ಯಕತೆಯನ್ನು ತಿಳಿಸಿ ಆ ಕಾರ್ಯವನ್ನು ಮಾಡಿಸಿದರೆ ಒಂದು ಕೈಗಾರಿಕೆಯನ್ನು ಹೆಚ್ಚಿಸಿದಂತಾಗಿ ಅಂಗಡಿಯಲ್ಲಿ ಜೇನೆಂದು ಮಾರುವ ಕಾಕಂಬಿಯ ವ್ಯಾಪಾರವು ಕಡಿಮೆಯಾಗಿ ಬಡ ರೋಗಿಗಳಿಗೆ ಉತ್ತಮ ಜೇನು ದೊರಕಿ ವ್ಯವಸಾಯಗಾರರಿಗೆ ಅದರಿಂದ ಹಣವೂ ಸಿಕ್ಕುವುದು.

ಅತ್ಯುತ್ಕೃಷ್ಟ ತರಗತಿಯ

ಹೊಮಿಯೊಪತಿಕ್ ಮತ್ತು ಬಾಯೊಕೆಮಿಕ್

ಔಷಧಗಳಿಗಾಗಿ

ಇವರಿಗೆ ಬರೆಯಿರಿ—

INDIAN HOMOEOPATHIC STORES,

10/11 Upper Circular Road, :: CALCUTTA.

ಕೆಟಲಾಗು ಇತ್ಯಾದಿ ಅಪೇಕ್ಷಿಸಿದಲ್ಲಿ ಕಳುಹಲಾಗುವದು.

8, 19—6.

ದೇಶಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕಾದ ದೇಶೀಯ ಕೈಗಾರಿಕೆ.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್, ಮದ್ರಾಸು.

ಇವರ ಉತ್ಕೃಷ್ಟ, ನಾಜೂಕಾದ ಹಾಗೂ ಬಹಳ ಬಾಳಿಕೆಯ ತ್ರಿಲೋಕ (ನಾರದ) ಮಾರ್ಕಿನ ಸ್ಟೀಲ್ ಟ್ರಂಕುಗಳು ಮತ್ತು ಸೂಟ್‌ಕೇಸುಗಳು.



ಈ ಕಾರ್ಖಾನೆಯಲ್ಲಿ ತಯಾರಾಗುವ ಪ್ರತಿ ಒಂದು ಸಾಮಾನು ಬಹುವರ್ಷಗಳಲ್ಲಿ ತರಬೇತು ಹೊಂದಿದ ಕೆಲಸಗಾರರಿಂದಲೇ ತಯಾರಾಗುತ್ತಿವೆ. ಆದುದರಿಂದಲೇ ಇಲ್ಲಿನ ವಸ್ತುಗಳು ಅಂದಚಂದದಲ್ಲೂ ಬಂದೋಬಸ್ತಿನಲ್ಲೂ ಕುಂದಿಲ್ಲವೆಂಬುದು ನಿಸ್ಸಂದೇಹ. ಇಲ್ಲಿ ಬಗೆ ಬಗೆ ಅಳತೆಯ ಟ್ರಂಕುಗಳು, ಸೂಟ್‌ಕೇಸುಗಳು, ಹಣದ ಪೆಟ್ಟಿಗೆಗಳು, ಆಭರಣಗಳನ್ನಿರಿಸುವ ಕೈಪೆಟ್ಟಿಗೆಗಳು, ಟೇಬಲಿಗೆ ಫಿಕ್ಸ್ ಮಾಡುವ ಕ್ಯಾಷ್‌ಬೋಕ್ಸ್‌ಗಳು ಮುಂತಾದುವು ಸರ್ವಕಾಲವೂ ವಿಕ್ರಯಕ್ಕೆ ಸಿದ್ಧವಿರುತ್ತವೆ.

ವ್ಯಾಪಾರಸ್ಥರಿಗೆ ಸುಸಂದರ್ಭ. ನಮ್ಮ 'ಷೊ'ರೂಮಿಗೆ ಒಮ್ಮೆ ಸಂದರ್ಶಿಸಿ ಅಥವಾ ಒಂದು ಸಣ್ಣ ಆರ್ಡರು ಕೊಟ್ಟು ಇದರ ನಿಜತ್ವವನ್ನು ಪರೀಕ್ಷಿಸಿರಿ. ನಿಮಗೆ ಖಚಿತವಾಗುವುದು.

ಹೆಚ್ಚಿನ ವಿವರಕ್ಕೆ ಮತ್ತು ಕ್ರಯದ ಪಟ್ಟಿಗೆ ಈ ವಿಳಾಸಕ್ಕೆ ಬರೆಯಿರಿ.

ಹೆಡ್ ಆಫೀಸು:—22, ಬೇಕರ್ ಸ್ಟ್ರೀಟ್, ಜಿ. ಟಿ., ಮದ್ರಾಸು.

ದಿ ತ್ರಿಲೋಕ ಸ್ಟೀಲ್ ಟ್ರಂಕ್ ವರ್ಕ್ಸ್,

ಪ್ರೊಪ್ರೈಟರ್:—ಜಿ. ಟಿ. ಮಾಣಿಕ ನಾಯಗರ್.

ಬ್ರಾಂಚ್ ಆಫೀಸು:—ರೈಲ್ವೇ ಗುಡ್ಸ್‌ಶೆಡ್ ಬಳಿ, ಮಂಗಳೂರು, ದ. ಕ.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

ರಜತಮಹೋತ್ಸವದ ಮೂಲ್ಯವೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿವ 'ಇನೂರೆನ್ಸ್'

ಇದಕ್ಕೊಂದು ಉದಾಹರಣೆ:—ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಮೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದವನಿಂದ ಸಾಧ್ಯವಿಲ್ಲವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖಮೂಲ್ಯದ ಸಂಪೂರ್ಣ ಮೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನೆಲ್ಲಿಯಾದರೂ ಮೃತನಾದರೆ, ಈತನು ತೆರದೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪುತ್ರನ್, ಬ್ರಾಂಚ್ ಮ್ಯಾನೇಜರ್,

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ವಿವಿಧ-ವೃತ್ತ

The Cement Industry and The Cement Merger.

ಸಿಮೆಂಟ್ ಕೈಗಾರಿಕೆ ಮತ್ತು ಸಿಮೆಂಟ್ ಸಮ್ಮಿಲನ.

ಈ ದೇಶದಲ್ಲಿ ಸಿಮೆಂಟಿನ ಖರ್ಚುಕಳೆದೆರಡು ದಶಾಬ್ದಿಗಳಲ್ಲಿ ಕೆಳಗಣ ಅಂಕೆಗಳು, ಐದು ವರ್ಷಗಳ ಅವಧಿಯನ್ನು ಬಿಟ್ಟು ತೋರಿಸುವಂತೆ, ಕ್ರಮಾಗತವಾಗಿಯೂ, ವೇಗತೆಯಿಂದಲೂ ಹೆಚ್ಚಿರುತ್ತದೆ.

ವರ್ಷ	ಅಮದು	ಹಿಂದೂಸ್ಥಾನದಲ್ಲಿ ತಯಾರಾದ ದು.
	ಟನ್ನುಗಳು	ಟನ್ನುಗಳು
1914	1,50,530	945
1919	8೫,097	86,812
1924	88,416	2,63,746
1929	74,800	5,60,682
1934	49,100	7,47,818
1935ರಲ್ಲಿ ಇಂಡಿಯದಲ್ಲಿ ತಯಾರಾದ ಸಿಮೆಂಟಿನ ಖರ್ಚು		8,86,267

ಈ ಕೈಗಾರಿಕೆಗೆ ಸಂಬಂಧಪಟ್ಟವರು, ವಿಕ್ರಿತದ ಕ್ರಯಗಳಲ್ಲಿ ಕ್ರಮಾಗತವಾದ ಇಳಿತಗಳಿಂದಲೂ, ಇತರ ದೇಶಗಳಂತೆ, ಈ ದೇಶದಲ್ಲಿಯೂ, ಸಿಮೆಂಟನ್ನು ಸಾಮಾನ್ಯ ಕಟ್ಟೋಣ ಸಾಹಿತ್ಯವನ್ನಾಗಿ ಮಾಡುವ ಪ್ರಯತ್ನಗಳಿಂದಾಗಿ, ಕೈಕೊಂಡ ಮುಂಬರಿಯುವ ಧೋರಣೆಗಳಿಂದಾಗಿ, ನಿಜವಾದ ಮತ್ತು ಅತ್ಯಧಿಕವಾದ ಅಧಿಕ್ಯವು ಕಳೆದ ಹತ್ತು ವರ್ಷಗಳಲ್ಲಿ ಬೆಳಿಸಲ್ಪಟ್ಟಿದೆ. ಕೆಲವು ವರ್ಷಗಳ ಹಿಂದೆ, ವಿಕ್ರಿತದ ಕ್ರಯಗಳು ಇದನ್ನು ಸಾಮಾನ್ಯ ಕಟ್ಟೋಣಸಾಹಿತ್ಯದ ತರಗತಿಯಲ್ಲಿಟ್ಟಿರಲಿಲ್ಲ, ಆದುದರಿಂದಾಗಿ ರಿಯಿನ್ಫೊರ್ಸ್ಡ್ ಕೊಂಕ್ರೀಟ್ ಕಟ್ಟೋಣಗಳು ಇಂಜಿನಿಯರರ ಡಿಸ್ಯಾನುಗಳಲ್ಲಿ ಬಹಳವಾಗಿ ಕಂಡು ಬರುತ್ತಲಿರಲಿಲ್ಲವಾದರೂ, ಈಗ ಕೆಲವು ವರ್ಷಗಳಿಂದ ಈ ಭಾಗದಲ್ಲಿ ಬದಲಾವಣೆಯು ಕಂಡುಬರುತ್ತಿದ್ದು, ಮತ್ತು ವಿಕ್ರಿತದ ಕ್ರಯಗಳೀಗ, ಬೇರೆ ದೇಶಗಳಲ್ಲಿ ಸಿಗುವಷ್ಟರಕ್ಕೆ ಬಂದಿರುವದರಿಂದ, ಇಂಜಿನಿಯರರೂ, ಕಟ್ಟೋಣ ಕಟ್ಟುವವರೂ, ಕಟ್ಟೋಣಗಳಲ್ಲಿ ಅತ್ಯಾಧುನಿಕ ವಿಧಾನಗಳನ್ನು ವೃದ್ಧಿಗೊಳಿಸುವದರಲ್ಲಿ, ಸಾಮಾನ್ಯವಾಗಿ ಹೇಳುವದಾದರೆ, ಇದು ರಿಯಿನ್ಫೊರ್ಸ್ಡ್ ಕೊಂಕ್ರೀಟ್, ಪ್ರೋತ್ಸಾಹಿಸಲ್ಪಡುತ್ತಿದ್ದಾರೆ. ಈ ಬೆಳೆಯುತ್ತಿರುವ ಜನಪ್ರಿಯತೆಯ ಕೆಲವು ಕಾರಣಗಳೆಂದರೆ:—

1. ರಿಯಿನ್ಫೊರ್ಸ್ಡ್ ಕೊಂಕ್ರೀಟಿನ ಮಾದರಿ ಮತ್ತು ನಿರ್ಮಾಣಗಳ ಹೆಚ್ಚಿದ ಜ್ಞಾನ ಮತ್ತು ವಿಷಯ.
2. ಅದರ ಬೆಂಕಿ ತಾಕದ ಗುಣಗಳು.
3. ಅದು ಗೆದ್ದಲು ತಾಕದಂಥಾದ್ದು ಮತ್ತು ಸುಲಭವಾಗಿ ಕುಚಿಗೊಳಿಸಬಹುದಾಗಿದೆ.
4. ಭೂಕಂಪಗಳಿಗೆ ತುತ್ತಾಗದಂಥಾ ಕಟ್ಟೋಣಗಳಿಗಾಗಿ ಅದು ಮುಂಜೂರಾತಿ ಪಡೆದಿರುವ ಕಟ್ಟೋಣಸಾಹಿತ್ಯವಾಗಿರುತ್ತದೆ.
5. ಅದರ ಮೇಲಣ ಖರ್ಚು ಬಹಳ ಅಲ್ಪ.
6. ಅದರ ಒಳ ಸಾಮರ್ಥ್ಯದಿಂದಾಗಿ ಮತ್ತು ಕೊಂಕ್ರೀಟನ್ನು ತಯಾರಿಸಲು ಬೇಕಾಗಿರುವ ಸಾಹಿತ್ಯಗಳು, ತಯಾರಿಸುವೆಡೆಯಲ್ಲಿಯೇ ಹೆಚ್ಚಾಗಿ ದೊರೆಯುವದರಿಂದ ಅದರ ಸಾಮಾನ್ಯ ಮಿತವ್ಯಯ.

ಸಿಮೆಂಟು ಸ್ಥೂಲತೆಯ ಸಾಹಿತ್ಯವಾಗಿದ್ದು ಮತ್ತದರ ಉಪಯೋಗವು, ಬಹಳ ದೂರವಾಗಿರುವ ಪ್ರದೇಶಗಳಿಂದ ಕೂಡಿರುವ ಈ ದೇಶದಲ್ಲಿ, ಜಗತ್ತಿನಲ್ಲಿ ಸಿಮೆಂಟನ್ನು ತಯಾರಿಸುವ ಇತರ ದೇಶಗಳ ಪ್ರಮಾಣದಲ್ಲಿಯೇ ಬೆಳೆಯುತ್ತಾ ಹೋಗುವದಾದರೆ, ಅದರ ಕ್ರಯವನ್ನು ಇಂಜಿನಿಯರರಿಗೆ ಅಥವಾ ಪಡೆಯುವವರಿಗೆ, ಇತರ ದೇಶಗಳಲ್ಲಿ ತಯಾರಿಯು ದೀರ್ಘಗೊಳಿಸಲ್ಪಟ್ಟಿದ್ದು ಮತ್ತು ಖರ್ಚು ಬಹಳವಾಗಿದ್ದು, ಅಲ್ಲಿರುವ ಕ್ರಯಗಳ ಪರಿಮಾಣಕ್ಕೆ ತಂದಿರಿಸುವದು ಪ್ರಾಮುಖ್ಯವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ, ವಿಕ್ರಿತದ ಟನ್ನುಗಳ ಅಧಿಕ್ಯದಿಂದಾಗಿ, ವಿಕ್ರಯದ ಕ್ರಯಗಳಲ್ಲಿ ಹಿಂದಿಗಿಂತಲೂ ಸುಮಾರು ಟನ್ನೊಂದರ ರೂ. 10ರಷ್ಟು ಈ ದೇಶೀಯ ಸಿಮೆಂಟಿನಲ್ಲಿ ಕಡಿಮೆಮಾಡಲು ಸಾಧ್ಯವಾಗಿದೆ. ಆದರೂ ಈಗಿರುವ ಕ್ರಯಗಳು ಬೇರೆ ದೇಶಗಳಲ್ಲಿರುವವುಗಳಿಗಿಂತಲೂ ತಕ್ಕಮಟ್ಟಿಗೆ ಹೆಚ್ಚಾಗಿಯೇ ಇವೆ.

ಇಷ್ಟರ ವರೆಗೆ ಹಾಗಾದರೆ 'ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ'ಯನ್ನು ಆರು ವರ್ಷಗಳ ಕೆಳಗೆ ಸ್ಥಾಪಿಸುವದರಲ್ಲಿ ತೆಗೆದುಕೊಂಡ ಮುಂಬರಿಯುವ ಹೆಜ್ಜೆಯು, ದೇಶದಲ್ಲೆಲ್ಲಾ ಸಿಮೆಂಟಿನ ವಿಕ್ರಯವನ್ನು ಹೆಚ್ಚಿಸುವದರಲ್ಲಿ ಯಶಸ್ವಿಯಾಗಿದೆಯೆನ್ನಬಹುದು, ಆದರೆ ಇದು, ಕಾರ್ಯವನ್ನು ನಡೆಸುತ್ತಿರುವಂಥಾ ಆ 'ಕ್ವೋಟಾ' ಪದ್ಧತಿಯಿಂದಾಗಿ, ಈಗ ತೀವ್ರವಾಗಿ ವೃದ್ಧಿಯಾಗುತ್ತಿರುವ 'ಡಿಮಾಂಡಿ'ಗೆ ಸರಿಯಾಗಿ ಕಾರ್ಯವನ್ನು ಮುನ್ನಡೆಸಲು ಸಾಧ್ಯವಿಲ್ಲದಾಗಿದೆಯೆಂದು ಯಾವಾಗಲೂ ಕಂಡುಕೊಳ್ಳಲ್ಪಟ್ಟಿದೆ.

ಇದು ಹೀಗಾದುದರಿಂದಾಗಿ, ಈ ಕೈಗಾರಿಕೆಯು ಆರ್ಥಿಕ ವೃದ್ಧಿ ಮತ್ತು ಬೆಳವಣಿಗೆಯನ್ನುಳ್ಳುದಾಗಿ ಮುಂದರಿಯಬೇಕಾದರೆ ಅಥವಾ ಅದರ ಈಗಣ ಯಶಪ್ರದ ಸ್ಥಾನವನ್ನಿಟ್ಟುಕೊಳ್ಳಬೇಕಾದರೆ, ಈಗಣ ಪದ್ಧತಿಗಿಂತಲೂ, ತಕ್ಕುದಾದ ಬೇರೊಂದು ಪದ್ಧತಿಯು ಅತ್ಯಗತ್ಯ, ಹಂಚುವಿಕೆಯ ದೃಷ್ಟಿಯಿಂದ ಮಾತ್ರವಲ್ಲ, ಈಗಣ ಡಿಮಾಂಡಿಗಿಂತಲೂ ಅಧಿಕವಾಗಿ ಬೇಕಾಗಿರುವ ಸ್ಥಳಗಳಲ್ಲಿ ಹೊಸ ಕಾರ್ಖಾನೆಗಳನ್ನು ನಿರ್ಮಿಸುವ ದೃಷ್ಟಿಯಿಂದಲೂ ಕೂಡ.

ಈ ಎಲ್ಲಾ ವಿಚಾರಗಳಿಗಾಗಿ, ಈ ಸಮ್ಮಿಲನ ಸಂಸ್ಥೆಯ ಸಂಯೋಜನೆಯ ಮುಖ್ಯ ಉದ್ದಿಶ್ಯವೆಂದರೆ ಸಿಮೆಂಟನ್ನು ತಯಾರಿಸುವ ವಿವಿಧ ಕಂಪೆನಿಗಳ ಪೂರಾ ವ್ಯಾಪಾರವನ್ನು ಒಂದುಗೂಡಿಸುವದು ಮತ್ತು ಪುನರ್ವ್ಯವಸ್ಥೆಗೊಳಿಸುವದು, ವಿಕ್ರಿತ ವತ್ತು ಕ್ರಯಗಳ ಮಟ್ಟಿಗೆ ಮಾತ್ರವಲ್ಲ, ಅದರ ತಯಾರಿ, ಕಾರ್ಯಭಾರ, ಬೇಕಾದೆಡೆಗಳಲ್ಲಿ ಹೊಸ ಕಾರ್ಖಾನೆಗಳ ನಿರ್ಮಾಣ ಮತ್ತು ಎಲ್ಲಕ್ಕಿಂತಲೂ ಮುಖ್ಯವಾದ ಆರ್ಥಿಕ ಹಂಚುವಿಕೆಯ ಮಟ್ಟಿಗೂ ಕೂಡ.

ಈ ಕೈಗಾರಿಕೆಯ ಪ್ರಮಾಣದ ಸ್ವಲ್ಪ ಜ್ಞಾನ ಬೇಕಾದರೆ, ಅದರ ಪ್ರಕೃತದ ಈ ಕೆಳಗೆ ಕೊಟ್ಟಿರುವ ಕೆಲವು ವಿಷಯಗಳನ್ನು ಮನವರಿತುಕೊಳ್ಳಬೇಕು.

3,50,000 ಟನ್ನುಗಳು ಭಾರತೀಯ ಇದ್ದಲು ವರ್ಷಂಪ್ರತಿ ಪಡೆಯಲ್ಪಟ್ಟು ಖರ್ಚಾಗುತ್ತಿದೆ.

180 ಲಕ್ಷ ಸಣಬಿನ ಗೋಣಿಗಳು ಪ್ಯಾಕಿಂಗಿಗಾಗಿ ಉಪಯೋಗಿಸಲ್ಪಡುತ್ತಿವೆ.

25,000ಕ್ಕೆ ಮೇಲ್ಪಟ್ಟು ಕೆಲಸಗಾರರು ವಿವಿಧ ಕಂಪೆನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅಲ್ಲದೆ ಬಹುಸಂಖ್ಯಾಕರಾದ ಜನರು, ವಿಸ್ತಾರವಾಗಿ ಪ್ರಚಾರದಲ್ಲಿರುವ ಇದರ ವಿಕ್ರಿತದ ಕಾರ್ಯಬಾಹುಳ್ಯದಿಂದಾಗಿ, ಜೀವನವನ್ನು ನಡೆಸಿಕೊಂಡಿದ್ದಾರೆ.

ಪ್ರಕೃತಕ್ಕೆ ಇದ್ದಲು, ಗೋಣಿ, ಸಾಹಿತ್ಯ ಇತ್ಯಾದಿಗಳನ್ನು 11 ಕಂಪೆನಿಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಪಡೆಯುತ್ತಿವೆ. ಇವುಗಳಲ್ಲಿ ಮತ್ತಿತರ ಭಾಗಗಳಲ್ಲಿ ಮಾಡಬಹುದಾದ ಉಳಿತಾಯವು ಪಡೆಯುವವನಿಗೂ ಹಾಗೂ ಸಿಮೆಂಟಿನ ಉಪಯೋಗದ ಬೆಳೆಯುತ್ತಿರುವ ವೃದ್ಧಿಗಾಗಿಯೂ, ಕ್ರಯದಲ್ಲಿ ಇಳಿತವನ್ನು ಮಾಡಲು ಸಾಧ್ಯವಾಗುತ್ತದೆ ಮತ್ತು ಅದೇ ಸಮಯದಲ್ಲಿ ಪಾಲುದಾರರ ಸ್ಥಾನವು ಬೆಳೆಯುವದಲ್ಲದೆ, ಒಂದುಗೂಡಿಸಲ್ಪಟ್ಟು, ಸಂರಕ್ಷಿಸಲ್ಪಡುವದು.

ಹಂಚುವಿಕೆಯ ದೃಷ್ಟಿಯಿಂದ, ಪ್ರಕೃತದ ಕೋಟಾ ಪದ್ಧತಿಯು ತೆಗೆದುಹಾಕಲ್ಪಡುವದು ಮತ್ತು ಈಗಿರುವ ಕಾರ್ಖಾನೆಗಳ ಸಂಪೂರ್ಣ ತಯಾರಿಸುವ ಸಾಮರ್ಥ್ಯದ ಉಪಯೋಗವು ಇವು ಮಾರ್ಕೆಟುಗಳಿಗೆ ಅನುಕೂಲವಾಗಿರುವೆಡೆಗಳಲ್ಲೆಲ್ಲಾ ತೆಗೆದುಕೊಳ್ಳಲ್ಪಡುವದು ಮತ್ತು ಅಷ್ಟೊಂದು ಫಾಯಿದೆಯಿಲ್ಲದಿರತಕ್ಕ ಕೇಂದ್ರಗಳಲ್ಲಿ ತಯಾರಿಯು ಕಡಿಮೆ ಮಾಡಲ್ಪಟ್ಟು, ಇತರ ಯೋಗ್ಯ ಕೇಂದ್ರಗಳು ವೃದ್ಧಿಗೊಳಿಸಲ್ಪಡುವವು.

ಈ ಸಮ್ಮಿಲನಯೋಜನೆಯು ಬಹಳ ವರ್ಷಗಳಿಂದ ಪಡೆದಿರುವ ಅನುಭವದಿಂದಾಗಿ ತಯಾರಿಸಲ್ಪಟ್ಟಿದೆ ಮತ್ತದು ಕಾರ್ಯರೂಪಕ್ಕೆ ಬಂದೊಡನೆ, ಕೈಗಾರಿಕೆಯು ಅದರ ವ್ಯಾಪಾರವನ್ನು ವೃದ್ಧಿಗೊಳಿಸಲು ಸಂಪೂರ್ಣವಾಗಿ

ವಿಜ್ಞಾನ ವಿಷಯ

"ವಿಜ್ಞಾನಿ"

ಪ್ರೇಮಪತ್ರ ಬರೆಯಲ್ಲಿಕ್ಕೆ ಯಂತ್ರ.

ವಿಜ್ಞಾನಕ್ಕೆ ಅಸಾಧ್ಯವಾದ ಕಾರ್ಯವೊಂದೂ ಇಲ್ಲವೆಂದು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಪೇರಿಸಿನಲ್ಲಿ ತಯಾರಾದ ಒಂದು ವಿಚಿತ್ರವಾದ ಯಂತ್ರದಿಂದ ಬೇಕುಬೇಕಾದ ನಮೂನೆಯ ಪ್ರೇಮಪತ್ರಗಳನ್ನು ಹೊರಡಿಸಲಿಕ್ಕೆ ಬರುತ್ತದೆ. ವಿಶೇಷ ವಿದ್ಯೆಯಿಲ್ಲದ, ರಸಿಕರಲ್ಲದ ಯುವಕರಾಗಲಿ ಯುವತಿಯರಾಗಲಿ ತಮ್ಮ ಪ್ರಿಯತಮೆಯರಿಗೋ ಪ್ರಿಯತಮರಿಗೋ ಪತ್ರ ಬರೆಯಬೇಕಾದರೆ ಈ ಯಂತ್ರದಿಂದ ಬಹಳ ಸಹಾಯವೊದಗುತ್ತದೆ. ಸ್ವಲ್ಪ ಹಣ ಖರ್ಚುಮಾಡಿದರೆ ಸರಿ, ಯಾವ ನಮೂನೆಯ ಪತ್ರ ಬೇಕಾದರೂ ಯಂತ್ರದಿಂದ ಅಚ್ಚಾಗಿ, ಲಕೋಟೆಯಲ್ಲಿ ಬಂದಾಗಿ ಹೊರ ಬರುತ್ತದೆ. ಟಪ್ಪಾಲುಚೀಟು ಹಚ್ಚಿ ವಿಳಾಸ ಬರೆದು ಟಪ್ಪಾಲಿಗೆ ಹಾಕುವುದು ಮಾತ್ರ ಕೆಲಸ. ಈ ಪತ್ರದ ಬರೆಹದ ಸರಣಿಯು ಕೂಡ ಒಂದೇ ರೀತಿಯಿರದೆ ದಿನದಿಂದ ದಿನಕ್ಕೆ ಭದಲಾಗುತ್ತಿರುತ್ತದೆ.

× × × × ×

ಆಲ್ಪ್ಸ್‌ಪರ್ವತದಲ್ಲಿ ಬೆಕ್ಕುಗಳ ಕುತ್ತಿಗೆಗೆ ಗಂಟೆ?

'ಇಲಿಗಳು ಬೆಕ್ಕಿಗೆ ಗಂಟೆ ಕಟ್ಟಿದ ಹಾಗೆ' ಎಂದು ಅನೇಕರು ಕೇಳಿರಬಹುದು. ಆಲ್ಪ್ಸ್‌ಪರ್ವತದಲ್ಲಿ ಬೆಕ್ಕುಗಳ ಉಪದ್ರವ ಹೆಚ್ಚಲು ಅಲ್ಲಿಯ ವಿಜ್ಞಾನಿಗಳು ಬೆಕ್ಕುಗಳ ಕುತ್ತಿಗೆಗೆ ಒಂದೊಂದು ಗಂಟೆ ಕಟ್ಟಬೇಕೆಂದೂ ಗಂಟೆಯಿಲ್ಲದವುಗಳನ್ನು ಕೂಡಲೇ ಕೊಲ್ಲಬೇಕೆಂದೂ ನಗರಸಭೆಗೆ ತಿಳಿಸಿದರು. ಈಗ ಈ ಕ್ರಮವನ್ನು ನಗರಸಭೆಯಲ್ಲಿ ಜಾರಿಗೆ ತಂದು ಗಂಟೆಯಿಲ್ಲದ ಬೆಕ್ಕನ್ನು ಕೊಂದವನಿಗೆ ೧೨ ಆಣೆ ಇನಾಮು ಕೊಡುವುದೆಂದು ನಿಶ್ಚಯಿಸಿದ್ದಾರೆ.

× × × × ×

ವಿಜ್ಞಾನಯುಗದಲ್ಲಿ ಟೆಲಿಫೋನು.

ಇಂದಿನ ಯುಗದಲ್ಲಿ ಮನುಷ್ಯನ ಪ್ರತಿಯೊಂದು ಕಾರ್ಯವೂ ವಿಜ್ಞಾನದ ಸಹಾಯದಿಂದಲೇ ನಡೆಯುತ್ತಿದೆಯೆ. ಎಲ್ಲೆಲ್ಲಿ ಎಷ್ಟೆಷ್ಟು ಟೆಲಿಫೋನಿನ ಉಪಯೋಗವಿದೆಯೆಂದು ತಿಳಿದರೆ ಗೊತ್ತಾತ್ತೀತು. ಲಂಡನಿನಲ್ಲಿ ಸೇಕಡಾ ೮೭ ಮಂದಿಯೂ, ರೋಮಿನಲ್ಲಿ ೪೩ ಮಂದಿಯೂ, ಕಲ್ಕತ್ತೆಯಲ್ಲಿ ಸೇಕಡ ಒಬ್ಬನೂ ಟೆಲಿಫೋನುಳ್ಳವರಿದ್ದಾರೆಂದ ಮೇಲೆ ನಮ್ಮ ಹಿಂದೂದೇಶದ ವಿಜ್ಞಾನವು ಇನ್ನೂ ಎಷ್ಟು ಹಿಂದೆ ಇದೆಯೆಂದು ಗೊತ್ತಾಗುತ್ತದೆ.

× × × × ×

ವಾಯುವಿಮಾನದಲ್ಲಿ ಸಿನೆಮ.

ವಿಮಾನದಲ್ಲಿ ಪ್ರಯಾಣಮಾಡುವ ಪ್ರಯಾಣಿಕರು ಇತರ ದೃಶ್ಯಗಳನ್ನು ನೋಡಿ ಬಳಲಿದಾಗ ಅವರ ಮನೋರಂಜನಕ್ಕಾಗಿ ವಿಮಾನದೊಳಗೇ ಸಿನೆಮವನ್ನು ತೋರಿಸುವ ವ್ಯವಸ್ಥೆಯಿದೆ. ಈ ಯಂತ್ರವು ೬॥ ಪೌಂಡು ಭಾರವಿದೆ, ೬ ರೀಲುಗಳಷ್ಟು ಚಿತ್ರವಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಾಯುಯಾನಗಳ ಪ್ರಯಾಣಿಕರಿಗೆ ಕೂಡ ಮನೋವಿನೋದಕ್ಕೆ ಸಿನೆಮಾ ತೋರಿಸುವಾಗ ನಮ್ಮಲ್ಲಿಯ ಬಡ ರೈಲುಯಾತ್ರಿಗಳಿಗೆ ಕೂತುಕೊಳ್ಳಲು ಕೂಡ ಸರಿಯಾದ ಸ್ಥಳವಿಲ್ಲ.

ಸಿದ್ಧಗೊಳಿಸಲ್ಪಡುವದು ಮತ್ತು ರಚನೆಯನ್ನು ಹೊಂದುವದು ಮತ್ತದೇ ಸಮಯದಲ್ಲಿ ಅದಕ್ಕೆ ಬರಬಹುದಾದ ದೇಶೀಯ ಯಾ ವಿದೇಶೀಯ ಪೈಪೋಟಿಯನ್ನು ಎದುರಿಸಬಲ್ಲುದಾಗುವದು.

ಈ ಪ್ರಾಮುಖ್ಯ ರಾಷ್ಟ್ರೀಯ ಕೈಗಾರಿಕೆಯ ವಿಷಯದಲ್ಲಿ ಮಿ. ಎಫ್. ಈ. ದಿನ್ಶೊರವರ ದೂರದರ್ಶಿತ್ವವೂ, ವಿಶ್ವಪ್ರಯತ್ನಗಳೂ ಸರ್ವರಿಗೂ ವಿದಿತವಾಗಿದ್ದು, ಈ ಸಮ್ಮಿಲನಯೋಜನೆಯನ್ನು ಅದರ ಪ್ರತಿಯೊಂದು ವಿಭಾಗದಲ್ಲಿಯೂ ಅನೇಕ ತಿಂಗಳುಗಳ ವರೆಗೆ ಜಾಗರೂಕವಾಗಿ ಪರೀಕ್ಷಿಸಿದನಂತರ ಅವರು ಅದಕ್ಕೆ ತನ್ನ ಶುಭಾಶಯಗಳನ್ನು ಕೊಟ್ಟುದಲ್ಲದೆ, ಅದನ್ನು ಕಾರ್ಯರೂಪಕ್ಕೆ ತರಲು ಅವರಿಗಿದ್ದ ನಿಶ್ಚಿತ ಧ್ಯೇಯವು ಅದೊಂದು ಸುಭದ್ರ ವ್ಯಾಪಾರೀ ಯೋಜನೆಯೆಂಬುದನ್ನು ದೃಢಪಡಿಸುತ್ತದೆ. ಮಿ. ದಿನ್ಶೊರವರ ತೀರ್ಪು ಎಂದೂ ತಪ್ಪಾಗುತ್ತಿರಲಿಲ್ಲ; ಆದುದರಿಂದಾಗಿ ಅವರ ಅಂತಿಮ ಕಾಲದ ತಿಂಗಳುಗಳಲ್ಲಿ ಅವರು ಬಹಳವಾಗಿ ಪರಿಶ್ರಮವನ್ನು ವಹಿಸುತ್ತಿದ್ದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವದಕ್ಕಿಂತಲೂ ಯೋಗ್ಯವಾದ ಸ್ಮಾರಕವನ್ನು ಅವರ ಉತ್ತರಾಧಿಕಾರಿಗಳು ಕಾಣಲಾರರು.

ಪ್ರಕಟಣೆ

ಶ್ರೀ ಕಾಶೀಮಠದ ಶ್ರೀಮತ್ ಸುಕೃತೇಂದ್ರ ತೀರ್ಥ ಶ್ರೀಪಾದಂಗಳವರು ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ:—ನಾವು ವೇದ ಮೂರ್ತಿ ಮಂಗಳೂರು ಕೃಷ್ಣ ವಾಸುದೇವ ಭಟ್ಟರಿಗೆ ರಿಜಿಸ್ಟ್ರಿ ನಿಶಿ ಬರಸಿಕೊಟ್ಟ ವಿಶೇಷ ಮೊಕ್ತ್ಯಾರನಾಮೆ ಯಾನೆ ಪವರ ಆಫ ಎಟರ್ನಿಗಳನ್ನು ನಾವು ರದ್ದುಪಡಿಸಿರುತ್ತೇವೆ. ಸದರಿ ಮೊಕ್ತ್ಯಾರನಾಮೆಯು ಜ್ಯಾರಿಯಲ್ಲಿ ಇಲ್ಲದೆ ಇರುವುದರಿಂದ ಯಾರಾದರೂ ಅದರ ಆಧಾರಗೊಂಡು ಸದರಿ ಕೃಷ್ಣ ವಾಸುದೇವ ಭಟ್ಟರು ನಮ್ಮ ಕಡೆ ಮುತಾಲಿಕರೆಂತ ಭಾವಿಸಕೂಡದು. ಮತ್ತು ಆ ನೆಲೆಯಲ್ಲಿ ಅವರ ಕೂಡೆ ಯಾವ ಲೇವಾದೇವಿಯೂ ನಡಿಸಕೂಡದು. ಇದಕ್ಕೆ ವಿರೋಧವಾಗಿ ಯಾರಾದರೂ ಅವರ ಕೂಡೆ ಲೇವಾದೇವಿ ನಡೆಸಿದರೂ ಅದು ನಮ್ಮ ಮೇಲಾಗಲೀ ಶ್ರೀ ಸಂಸ್ಥಾನದ ಮೇಲಾಗಲೀ ಸಿಂಧಾಗತಕ್ಕದ್ದಲ್ಲ.

ಸುಕೃತೀಂದ್ರ ತೀರ್ಥ ಸ್ವಾಮಿ,
2, 19—6 ಕಾಶೀಮಠ ಸಂಸ್ಥಾನ.

ಕೋರ್ಟು ಕಚೇರಿಗಳು, ಶಾಲಾ ಕೊಲೇಜುಗಳು, ಬೋರ್ಡು ಮುನಿಸಿಪಾಲಿಟಿಗಳು, ರೈತ, ವರ್ತಕರು

ಇತ್ಯಾದಿ ಎಲ್ಲಾ ಇಲಾಖೆಯವರೂ ಉಪಯೋಗಿಸುತ್ತಿರುವರು.

ಅಂದ ಮೇಲೆ ನೀವೂ ನಿಮ್ಮ ಸೌಕರ್ಯಕ್ಕಾಗಿ ನಮ್ಮ 'ಯುಟಿಲಿಟಿ' ಸ್ಟ್ಯಾಂಪನ್ನು ಏಕೆ ಉಪಯೋಗಿಸಬಾರದು? ಈ ಒಂದೇ ರಬ್ಬರು ಮೊಹರಿನಿಂದ ನಿಮ್ಮ ಎಲ್ಲಾ ಕೆಲಸಗಳೂ ಸುಲಭವಾಗಿ ಆಗುವುವು.

ದಿ ಕ್ರೌನ್ ರಬ್ಬರ್ ಸ್ಟ್ಯಾಂಪ್ ಕಂಪೆನಿ,

ವಿವಿಧ ರಬ್ಬರು ಮೊಹರುಗಳನ್ನೂ, ಕೆತ್ತನೆ ಕೆಲಸಗಳನ್ನೂ, ಪೈಂಟಿಂಗನ್ನೂ ಮಾಡುವವರು,

ಬಲ್ಮಠ ರಸ್ತೆ, ಮಂಗಳೂರು

ನಾವು ಫೌಂಟನ್ ಪೆನ್ನುಗಳನ್ನು ರಿಪೇರಿ ಮಾಡಿಕೊಡುತ್ತೇವೆ.

ಕಾಮತ್‌ರವರ ದಿವ್ಯ ಸಿದ್ಧೌಷಧ!

ಉನ್ಮಾದ ಸಂಜೀವನ!!

ಉಗ್ರವಾಗಿರುವ ಹುಚ್ಚು; ಮೌನವಾಗಿರುವ ಹುಚ್ಚು; ದೀರ್ಘ ಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು ನಿದ್ರಾ ನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸೂತಿಕಾವಾಯು, ಹಿಸ್ಟೇರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳಿದ್ದೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/- ಮಾತ್ರ.

ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:—ಸಿ. ವೈಕುಂಠ ಕಾಮತ್,
'ಇನ್‌ಸೇನಿಟಿ ಎಕ್ಸ್‌ಪರ್ಟ್',
ಪೋಸ್ಟ್ ಉಡುಪಿ, ದ. ಕನ್ನಡ.

OMNIUM-GATHERUM.

Sir,

The criticisms of your worthy correspondent regarding the District Board Budget in your weeklies cannot go unchallenged. I am glad Mr. V. D. H. has written on behalf of Byndoor.

Your critic seems to be either ignorant or willfully blind to the realities of Moodbidri and Byndoor. What is there more ludicrous than suggesting to open an Higher Elementary School at Moodbidiri, when the funds of the Elementary Education are at a very low ebb and retrenchment is having its biggest toll there. Moreover does the critic know there is already a Higher Elementary School in the town and another in the neighbourhood? The only reason for the want of increase in the strength of the school is dire poverty of the people but the steady strength of the school in spite of a newly started Higher Elementary School is a glaring proof for the need of the Middle School here.

The annual inspection reports show the excellent work turned out; and some time back the President, District Board, was pleased to congratulate the Head Master and the staff. It is no boast to say that this school has been an ideal one. Regarding extra-curricular activities we may fearlessly say that this school stands second to none in the District Board Secondary schools. The activities of the school and the Old Students reveal themselves in the annual festivities held every year since 1931.

So, let no selfish motive on anybody's part try to throw its evil spite at poor Moodbidri. Because Moodbidri does not court advertisement and simply because it is averse to public limelight in the papers, let not its glory be blemished by uncalled for critics.

G. G. Poi.

WHEN WILL HITLER DECLARE WAR?

(By Louis Fischer.)

[In view of continued fears concerning the possibilities of a European war the following article written by one of the most eminent of European journalists regarding the probable date of an aggression by Germany, may be found to be of special interest.]

'Will the re-armament programme of the Reich be seriously impeded by financial and food difficulties?'

'My reply to it is, No,' writes Louis Fischer, the world-renowned journalist in 'Neue Weltbuehne,' the workers' weekly, Prague.

The industrial production of Germany has reached its maximum of the post-war epoch. But although a large part of it cannot be consumed under the form either of food or of clothes, the Reich continues to invest enormous capital in the production of war-material.

Decline in the Standard of Living.

From January 1933 to October 1935, the real salaries of the labourers and employees were reduced by one-fourth. If we add to it the reduction that has since then occurred, it would be apparent that since Hitler's rise to power, the standard of living of the German population has diminished by 35 per cent. The actual fall is in fact much greater as the qualities of the consumption articles have considerably diminished due to various restrictions. This situation which still menaces Germany in the year 1936 however will not prevent the rulers of the Reich from pursuing towards the realisation of their military programme.

German Efforts towards Armaments.

The well-informed circles within as well as without Germany, foresee an evident augmentation in the production of war material.

So far twelve billion-marks have been spent by Hitlerian Germany towards the re-equipment and re-organisation of its army.

Its Marvellous industrial plants have been put to work principally to achieve this object. Reports come from Blohm and Voss, the most important naval dockyards of Hamburg, that immense activity is being carried on regarding the construction of sub-marines and other navel war-units and that all outside orders have been refused for the period 1936-38. As regards aviation Goering has made some astonishing innovations in that domaine.

The technical equipment of the German army aeroplanes, tanks, cannons, sub-narines etc. will not however come up 'TO THE STANDARD' until the end of 1936.

Raw Materials, the Crux of the Problem.

The central problem of all this activity depends upon the acquisition of raw materials.

So far as it is possible, the currency reserves have been utilized towards this end for Germany has realised that her vulnerability will depend on the extent to which any economic sanctions applied against her prove a success.

Actually, Germany consumes three and a half million tons of petrol per year. The production of the petroleum within her own boundaries is insignificant. Immence efforts have accordingly been made and considerable progress achived in the production of synthetic petrol.

At present Germany herself produces one-third of the matter necessary for the populsion of her motors utilised in military work. It is estimated that by 1938, she will produce two-thirds of it while by 1941 she will be able to produce cent per cent of her requirements.

Moreover the third Reich has already constituted immense reserves of petrol with the help of foreign countries while extensive arrangements have also been made with the American Socony Vacuum-Company for the establishment of a refinery of crude oil. This refinery will be ready by the end of this year.

Another Obstacle.

There is again another aspect of the problem which may authorize us to assert that Germany is not yet prepared for war.

The instruction and preparation of military staff from the point of view of compulsory service has in fact hardly commenced.

The newly engaged recruits are not yet sufficiently trained so as to be able to stand before an army of any of the Great Powers, in case of an eventual war.

As regards the corps of staff officers, They have not yet had the experience that is necessary in modern warfare.

The third Reich will therefore still have to wait until the millions of her recruits who have recently become soldiers, completley acquire the technique and are able to sustain long and strenous battles.

How much time will Germany require to achive this object?

According to certain military specialists, Germany will be ready by the end of 1937 while most of others put if off until the year 1938.

From the most reliable information gathered it appears that Germany has actually about 800,000 soldiers and officers. By 1939, she will have over one million men under arms, apart from two and a half million reserves that have been recently recruited.

Here is the minimum Gun-fodder, with which Germany may contemplate of initiating a world-war.

ಹಾಸ್ಯಾರ್ಣವ.

ಮೋಹನ:—(ವಾರ್ತಾ ಪತ್ರಿಕೆಯನ್ನು ಕೈಯಲ್ಲಿ ಹಿಡಿದು) ಅಮ್ಮಾ! ಜನನಮರಣಗಳ ವಿಷಯ ಯಾವ ಪುಟದಲ್ಲಿದೆ?

ತಾಯಿ:—ಯಾಕೆ ಮಗೂ?

ಮೋಹನ:—ಯಾಕಂದರೆ, ಅಕ್ಕನ ಮನೆಯ ಬೆಕ್ಕು ಮರಿಯಿಟ್ಟದ್ದೂ, ನಮ್ಮ ಎಮ್ಮೆಕರು ಸತ್ತದ್ದೂ ಬಂದಿದೆಯೋ ಎಂದು ನೋಡುವುದಕ್ಕಮ್ಮಾ!

* * * *

ಉಪಾಧ್ಯಾಯ:—(ಯುದ್ಧವರ್ಣನೆಯನ್ನು ಮುಗಿಸಿ) ಸಾವಿಗೆ ಅಂಜದವರ್ಯಾರು?

ದಾಸಪ್ಪ:—ಸಾಯಲಿಕ್ಕೆ ಹೊರಟವರು ಸರ್!

* * * *

ಮೇಸ್ಟ್ರು:—ಆಟಗಳಲ್ಲಿ ಒಳ್ಳೇ ಆಟ ಯಾವುದು?

ಜಗಳಗಂಟಿ ಗೋಪಾಲ:—ಗುದ್ದಾಟ ಸರ್!

* * * *

ಉಪಾಧ್ಯಾಯ:—(ಗುರುಮಠಗಳ ಚರಿತ್ರೆಯನ್ನು ಹೇಳಿ) ಮಠಗಳಲ್ಲಿ ಶ್ರೇಷ್ಠವಾದ ಮಠಗಳು ಯಾವುವು?

ಶ್ರೀನಿವಾಸ:—ಗಂಜೀಮಠ ಮತ್ತು ಬಲ್ಮಠ ಸರ್!

* * * *

ತಾಯಿ:—ಮಗೂ, ಅಂಗಿ ಹಾಕು; ಹೀಗೆ ತಿರುಗಾಡ ಬೇಡ!

ಹುಡುಗ:—ಅಂಗಿ ಎಲ್ಲಿ ಹಾಕಬೇಕನ್ಮಾ, ಬೀದಿಗೋ ತೋಡಿಗೋ?

ವೈದ್ಯವಿಶಾರದ ಎಚ್. ತಿಮ್ಮಪ್ಪ ಪಂಡಿತ, ಪ್ರೊಪ್ರೈಟರ್.

ಆನಂದ ಚಂದ್ರೋದಯ ಆಯುರ್ವೇದಿಕ್ ಔಷಧಾಲಯ.

ಮಾರ್ಕೆಟ್ ರೋಡ್, ಹಂಪನಕಟ್ಟೆ, ಮಂಗಳೂರು.

ಸಚ್ಚಿದಾನಂದ ಚೂರ್ಣ.

ಎಲ್ಲಾ ತರದ ಪಿತ್ತರೋಗ, ಪಿತ್ತಪಾಂಡು, ಪಿತ್ತಕಾಮಿಲಾ ರೋಗಕ್ಕೆ

ಈ ರೋಗದಿಂದ ಉಂಟಾಗಿರುವ ಜಗೆ, (ಎದೆ ಹಾರುವದು) ಸಂದು ಸಂದುನೋವು, ಕೈ ಕಾಲು ಬಚ್ಚುವದು, ಓಡುವಾಗ ಮತ್ತು ಎತ್ತರ ಸ್ಥಳದಲ್ಲಿ ಹತ್ತಿ ನಡೆಯುವಾಗ ಉಂಟಾಗುವ ಆಯಾಸ, ಶೋಫ (ಶರೀರ ಬೀಗುವದು) ಶರೀರ ಬಿಳೀ ವರ್ಣವಾಗುವದು, ನಾಲಿಗೆ ಒಣಗುವದು, ನಾಲಿಗೆಯ ರುಚಿ ಕೆಡುವದು, ನಾಲಿಗೆ ಕಹಿ ಆಗುವದು, ಆಹಾರ ಬೇಡವಾಗುವುದು, ಅಜೀರ್ಣ ಉಂಟಾಗುವುದು, ತಲೆ ತಿರುಗುವದು ಕಣ್ಣುಕತ್ತಲೆ ಬರುವದು, ಕಿವಿಯಲ್ಲಿ ಗುಂ ಎರಿತ ಶಬ್ದ ಉಂಟಾಗುವದು, ಮೈ ಪಸೆ ಇಲ್ಲದೆ ಒಣಗಿ ಹೋಗುವದು, ಹೊಟ್ಟೆಯಲ್ಲಿ ಬೆಂಕಿ, ಎದೆ ಗಂಟ್ಲು ಸುಡುವುದು, ಮೂಲಬದ್ಧತೆಯಾಗಿ ಮೂಲವು ಬಹು ಗಟ್ಟಿಯಾಗಿ ಹಿಕ್ಕೆಗಳಂತಿರುವದು, ಆಲಸ್ಯ, ಕೆಲಸಮಾಡಲಿಕ್ಕೆ ಮನಸ್ಸಿಲ್ಲದಿರುವದು, ಅಲ್ಲದೆ ಇನ್ನೂ ಈ ರೋಗದಿಂದ ಉಂಟಾಗುವ ಬೇರೆ ವಿಕಾರಗಳಿಂದ ದೇಹಾಂತ್ಯದ ವರೆಗೆ ನರಳುತ್ತಿರುವವರು ದೇಹಾಂತ್ಯದ ವರೆಗೆ ತಮ್ಮ ದೇಹಾರೋಗ್ಯವನ್ನು ರಕ್ಷಿಸಿಕೊಂಡು, ನಿರೋಗಿಗಳಾಗಿ ಇರಬೇಕೆಂತ ಅಪೇಕ್ಷಿಸುವವರಾದರೆ ಈ ನಮ್ಮ ಸಚ್ಚಿದಾನಂದ ಚೂರ್ಣವನ್ನು ಸೇವಿಸಿರಿ.

ಅತ್ಯುತ್ತಮ ಗುಣಕಾರಿಯಾದ ಈ ಔಷಧವನ್ನು ಅಪೇಕ್ಷಿಸುವವರು 7 ಯಾ 15 ದಿವಸಕ್ಕೆ ಬೇಕಾಗುವ 1 ಯಾ 2 ತೊಲೆ ತರಿಸಿಕೊಂಡು ಸೇವಿಸಿ ಪರೀಕ್ಷಿಸಿರಿ. ಅಪ್ಪರಲ್ಲಿಯೇ ಗುಣಾಂಶ ಕಂಡುಬಂದರೆ, ನಾವು ಹೇಳುವ ವರೇಗೆ ಸೇವಿಸಿ, ದೇಹಾರೋಗ್ಯವನ್ನು ಪೂರ್ಣ ಪಡೆಯಿರಿ. ಅನುಮಾನ ಕಂಡರೆ, ರೋಗಿಗಳು ಖುದ್ದು ನಮ್ಮ ಔಷಧಾಲಯಕ್ಕೆ ಬಂದು ತಮ್ಮ ಊಟದ ಖರ್ಚು ತಾವೇ ನೋಡಿಕೊಂಡು, 15 ದಿವಸ ಯಾ 1 ತಿಂಗಳ ಔಷಧಿಯನ್ನು ಮುಂಗಡವಾಗಿ ಹಣ ಕೊಡದೆನೇ ಸೇವಿಸಿ ಗುಣಾವಗುಣ ಪರೀಕ್ಷಿಸಿರಿ.

ಅಪ್ಪರಲ್ಲಿ ಗುಣಾವಗುಣ ಕಂಡುಬಾರದಿದ್ದರೆ, ಸೇವಿಸಿದ ಔಷಧಿಯ ಕ್ರಯ ಕೊಡುವ ಅಗತ್ಯವಿಲ್ಲ. ಅಪ್ಪರಲ್ಲಿ ಗುಣಾಂಶ ಎಂತ ಕಂಡುಬಂದರೆ, ನಾವು ಪ್ರಥಮ ಕೊಟ್ಟ ಔಷಧಿಯ ಕ್ರಯ ತೆರಬೇಕಾಗುವದಲ್ಲದೆ, ಅನಂತರ ನಾವು ಹೇಳುವ ಸಮಯದ ವರೇಗೆ ಬೇಕಾಗುವ ಮದ್ದಿನ ಕ್ರಯಕೊಟ್ಟು ಸೇವಿಸಬೇಕಾಗುವುದು.

ರೋಗಿಗಳು ತಮ್ಮಿಂದ ಕೈಲಾಗುವ ಕೆಲಸಗಳನ್ನು ಮಾಡುತ್ತಾ ಪಥ್ಯಾಪಥ್ಯದ ಭಯವಿಲ್ಲದೆ ಸೇವಿಸಿ ಗುಣಹೊಂದತಕ್ಕ ಸೇವನೆಗೆ ಹಿತಕರವಾದ ಕೈಕಂಡ ಔಷಧವಾಗಿರುತ್ತದೆ.

ಕ್ರಯ ತೊಲೆ 1ರ ಬರೇ 12 ಆಣೆ (0—12—0). ಬಂದು ತಿಂಗಳ ಔಷಧಿಗೆ ರೂ. 2—8—0.

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

THE POPULAR INSURANCE CO. LTD. HEAD OFFICE MANGALORE

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು–ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ಏಜಂಟರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Messrs. C. Abdurahiman & Coragappa,
MANGALORE.

Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.,
MANGALORE.

ESTD. 1931.

Head Office:-MANGALORE. **Branch:-MUDABIDRI.**

Fixed Deposits:-4½% for 3 months
,, 5% ,, 6 ,,
,, 6% ,, 12 ,,
,, 6½% ,, 24 ,, & upwards.

Savings Bank Deposits:—4⅜% on daily balance.
Withdrawals by cheques.
Current A/C 2%—opened free of charge.

We have various schemes for encouraging Thrift such as Cumulative Deposits, Recurring Savings Bank Deposits etc.

SAVE WHILE YOU CAN

Your future demands a fund to draw upon in case of need:—

START NOW AT THIS BANK—

Write for detailed Rules of Business sent free on request.

ಇಂಡಿಯಾದ ಪ್ರಮುಖ-ಟಾನಿಕ್

ಆತಂಕನಿಗ್ರಹ

ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣವಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ
"ಜೀವದ ವೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ, ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಏಜಂಟರು—
ಪರ್ಲ್ ಎಂಡ್ ಸನ್ಸ್, ಮಂಗಳೂರು.

ನಮ್ಮ ಕಂಪೆನಿಯಲ್ಲಿ ರತಕ್ಕ ಹಸನಾದ ಊದು ಬತ್ತಿಗಳು ಕಮ್ಮಿ ಬೆಲೆಯಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆ. ಬೇಕಾದ ವ್ಯಾಪಾರಸ್ಥರು ತರಿಸಿಕೊಂಡು ಸಫೆ ಹೊಂದಬಹುದು. ಆರ್ಡರಿನಲ್ಲಿ ಅರ್ಧ ಹಣ ಮುಂಗಡವಾಗಿ ಕಳುಹಿಸಿದರೆ ನೂಲು ರವಾನಿಸಲಾಗುತ್ತದೆ. ಪ್ಯಾಕಿಂಗ್ ಮತ್ತು ರೈಲ್ವೆ ಚಾರ್ಜು ಪ್ರತ್ಯೇಕ.

ಮಣ 1ಕ್ಕೆ ರೂ. 14—8—0.

9 ಇಂಚಿನಿಂದ 12—15—16ರ ವರೆಗೂ ಇರುವ ಸರ್ಗೀಸ್— ಆಂಬರ್— ಗುಲಾಬಿ— ಶಾಫರಾನಿ— ಸಂದಲ—ಕ್ಯೂಷ್ಣು— ಹಾಲ್‌ಮಡ್ಡಿ— ಪುನುಗು— ವಾಜ್—ಕಸ್ತೂರಿ ಬತ್ತಿಗಳು—ಮಣ 1ಕ್ಕೆ ರೂ. 14—8—0. ಮುದುವೆ, ಮುಂಜಿಗಳಲ್ಲಿ ಬೇಕಾದ ಆಪ್ಪಟ ಕನ್ನೂಜ್ ಪನ್ನೀರು ಡಜನ್ ಬಾಟ್ಲಿ ಚಿಕ್ಕ ಸೈಜು ರೂ. 5—0—0, ದೊಡ್ಡ ಬಾಟ್ಲಿ ರೂ. 9—8—0. ಹೈಸಿ ಗಂಧ—ತೊಲೆ ಹಸನ್ 1ಕ್ಕೆ ರೂ. 2—8—0 ಮಡ್ಡಿ 6 ಆಣೆಯಿಂದ ರೂ. 1—8—0 ವರೆಗೂ— ಇನ್ನೂ ಅನೇಕ ರಖಂವಾರಿ ತೈಲಗಳು, ಅತ್ತರುಗಳು ಸೆಂಟ್‌ಗಳು ಎಲ್ಲವೂ ಬೆಕರಿಗೆ ಸಿದ್ಧವಾಗಿರುತ್ತವೆ. ಒಂದು ಸಲ ತರಿಸಿ ಸಫೆ ಸಂಪಾದಿಸಿಕೊಳ್ಳಬಹುದು. ಗ್ಯಾರಂಟಿ ಮೂಲ.

ಮ್ಯಾನೇಜರ್,
ಇಂಟರ್‌ನ್ಯಾಶನಲ್ ಸೀಡ್ ಕಂಪೆನಿ,
ಲಾಲ್‌ಬಾಗ್ ಫೋರ್ಟ್ ರೋಡ್,
ಬೆಂಗಳೂರು

Props:—**S. G. N. BROS.**

THE
Bombay Life Assurance Co., Ltd.,
ESTD. 1908.

FIGURES THAT TELL

Year.	Proposed Business.	Completed Business.
1931	Rs. 72,91,300	Rs. 58,66,300.
1932	Rs. 75,69,500	Rs. 63,54,500.
1933	Rs. 1,11,47,833	Rs. 94,16,500.
1934	Rs. 1,25,50,250	Rs. 1,04,33,750.
1935	Rs. 1,50,48,915	Rs. 1,23,28,665.

Please consult for Agencies and Life Insurance Advice:—
Messrs. KOCHIKAR BROTHERS, Branch Secretaries.
OFFICES:
Visveswarapuram Circle, BANGALORE CITY.
Soumyalayam, CALICUT.
Udipi, S.INDIA.
Mount Road, MADRAS.
"Gautam Nivas", Charni Road Girgaum, BOMBAY, No. 4
Car-Street, MANGALORE.

ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯು } **'ಕರ್ನಾಟಕ ವೈಭವ'** { ಸ್ಥಾಪನಾ ೧೯೮೨. ವಿಜಾಪುರ.

ಸಂಪಾದಕರು:—**ವೆಂಕಟರಾವ ನಾಯಕ,** ಎಂ. ಎ., ಎಲ್‌ಎಲ್. ಬಿ., (ಕೆಲಕಾಲ ಕನ್ನಡ ಪ್ರೊಫೇಸರರು)

ಇಡೀ ಕರ್ನಾಟಕದಲ್ಲಿ ನಲವತ್ತುಮೂರು ವರ್ಷಗಳಿಂದ ರಾಷ್ಟ್ರಸಭೆಯ ಸಂದೇಶವನ್ನು ಸಾರುತ್ತಿರುವ ವಯೋವೃದ್ಧ ವಾರಪತ್ರಿಕೆ ಇದೊಂದೇ. ವಿಷಯವೈವಿಧ್ಯ, ವಿಚಾರಪರಿಪ್ಲುತತೆ, ಬಗೆಯ ಬಿಡಗು, ಶೈಲಿಯ ಸೊಬಗು, ಸಾಹಿತ್ಯಸಮಾಲೋಚನೆ, ಖಂಡತುಂಡ ಮಾತು, ವರ್ತಾವರದಿ, ಕತೆ, ನಗೆಬರಹ ಇ.ಗಳನ್ನು ಓದಬೇಕಾಗಿದ್ದರೆ 'ಕರ್ನಾಟಕ ವೈಭವ'ವನ್ನೇ ತರಿಸಿರಿ. ವ್ಯಂಗ್ಯವಿನೋದದ ಬಗ್ಗೆಯಂತೂ 'ಆಪ್ಪ ಭಟ್ಟ' ಹೊತ್ತಿಗೆಯು ಪ್ರಖ್ಯಾತವಾಗಿದೆ.

ಕ್ಲಾ. ಆಕಾರದ ಸು. ೧೬ ಪುಟಗಳಿವೆ. ಪ್ರತಿ ವಾರ ಉದ್ಯೋಗವ್ಯವಸಾಯಗಳ ಸುದ್ದಿ ಬರುವುದು. ಜಾಹೀರಾತುದಾರರು ತಮ್ಮ ಸರಕುಗಳಿಗೆ ಕರ್ನಾಟಕದಲ್ಲಿ ಮನ್ನಣೆ ದೊರೆಯಬೇಕೆಂದು ಬಯಸುತ್ತಿದ್ದರೆ ಇದರಲ್ಲಿ ಪ್ರಕಟನೆಯನ್ನು ಹಾಕಬೇಕು.

ವ್ಯವಸ್ಥಾಪಕ,
ಕರ್ನಾಟಕ ವೈಭವ ಕಾರ್ಯಾಲಯ, ವಿಜಾಪುರ

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI
CENTRAL BANK, LIMITED,
(INCORPORATED IN TRAVANCORE.)

Bunder Road, MANGALORE.

London Agents: LLOYDS BANK, LIMITED.
New York ,, : NATIONAL CITY BANK OF NEW YORK.

The Premier Bank of India, Ltd.,
ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,
ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಫ್ಯಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಮಿ ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

ಎಸ್. ವಿ. ರಾವ್, ಡಿ. ಕೋಮ್.,
ಮ್ಯಾನೇಜಿಂಗ್ ಡೈರೆಕ್ಟರ್.

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rao